ಕರ್ನಾಟಕ ಸರ್ಕಾರ

# ತಿಳಿ ಕನ್ನಡ

## ದ್ವಿತೀಯ ಭಾಷಾ ಕನ್ನಡ ಪಠ್ಯಪುಸ್ತಕ

## (ಪರಿಷ್ಕೃತ – 2022)

## ೮

## ಎಂಟನೆಯ ತರಗತಿ

©KTBS
Not to be republished

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**
ನಂ.೪, ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ,
ಮೂರನೆಯ ಹಂತ, ಬೆಂಗಳೂರು – ೫೬೦ ೦೮೫

## ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು :**

**ಪ್ರೊ. ಎಚ್. ಎಂ. ಮಹೇಶ್ವರಯ್ಯ**

ಕನ್ನಡ ಪ್ರಾಧ್ಯಾಪಕರು ಮತ್ತು ಡೀನರು, ಕಲಾ ನಿಕಾಯ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ–೦೩

**ಸದಸ್ಯರು :**

**ಶ್ರೀ ಬಿ.ಎಸ್. ಗುಂಡೂರಾವ್,** ನಿವೃತ್ತ ಮುಖ್ಯ ಶಿಕ್ಷಕರು, ನಂ. ೮೫, ಮಹಾಲಕ್ಷ್ಮೀಪುರಂ, ಬೆಂಗಳೂರು–೮೬

**ಶ್ರೀ ವಿ.ಪಿ. ದಾರುಕಾರಾಧ್ಯ,** ನಿವೃತ್ತ ಮುಖ್ಯ ಶಿಕ್ಷಕರು, ನಂ.೧೨೯೯, ಎರಡನೆಯ ಹಂತ, ರಾಜಾಜಿನಗರ, ಬೆಂಗಳೂರು–೧೦

**ಶ್ರೀಮತಿ ಕಲಾವತಿ ಜಿ.ಕೆ. ಹೊಳ್ಳ,** ನಂ.೨, ರಾಧಾಕೃಷ್ಣ ಬಡಾವಣೆ, ಮೂರನೇ ಹಂತ, ಪದ್ಮನಾಭನಗರ, ಬೆಂಗಳೂರು–೭೦

**ಶ್ರೀ ಶಿವಯ್ಯ ಮಠಪತಿ,** ಪ್ರಾಚಾರ್ಯರು, ಮಾತೃಛಾಯ ಪದವಿಪೂರ್ವ ಕಾಲೇಜು, ಸೇಡಂ, ಕಲಬುರಗಿ ಜಿಲ್ಲೆ.

**ಶ್ರೀ ಬೆಳವಾಡಿ ಮಂಜುನಾಥ,** ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಮೂಕ್ತಿಹಳ್ಳಿ, ಚಿಕ್ಕಮಗಳೂರು ಜಿಲ್ಲೆ.

**ಶ್ರೀ ಪ್ರಕಾಶ್ ನಂದಿಹಳ್ಳಿ,** ಚಿತ್ರಕಲಾ ಶಿಕ್ಷಕರು, ಸರಸ್ವತಿ ಪ್ರೌಢಶಾಲೆ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ – ೫೬೨೧೦೫

**ಪರಿಶೀಲಕರು :**

**ಶ್ರೀ ಕೆ.ಎಸ್. ರಾಮಮೂರ್ತಿ,** ಉಪನ್ಯಾಸಕರು, ವಾಣಿವಿಲಾಸ ಸಂಯುಕ್ತ ಪದವಿಪೂರ್ವ ಕಾಲೇಜು, ಕೋಟೆ, ಬೆಂಗಳೂರು–೦೨

**ಸಂಪಾದಕ ಮಂಡಳಿ ಸದಸ್ಯರು :**

೧. **ಪ್ರೊ. ಸಾ.ಶಿ. ಮರುಳಯ್ಯ,** ಸಾಹಿತಿಗಳು, ರಾಗಿಣಿ, ಹಂಪಿನಗರ, ಬೆಂಗಳೂರು.

೨. **ಪ್ರೊ. ಅ.ರಾ. ಮಿತ್ರ,** ಸಾಹಿತಿಗಳು, ಕೆ.ಎಚ್.ಬಿ. ಕಾಲೋನಿ, ಯಲಹಂಕ, ಬೆಂಗಳೂರು.

೩. **ಡಾ. ವಿಷ್ಣು ಎಂ. ಶಿಂದೆ,** ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

**ಮುಖ್ಯ ಸಂಯೋಜಕರು :**

**ಪ್ರೊ. ಜಿ.ಎಸ್. ಮುಡಂಬಡಿತ್ತಾಯ**

ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

೧. **ಶ್ರೀ ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

೨. **ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

©KTBS Not to be republished

# ಮುನ್ನುಡಿ

೨೦೦೫ ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. ೧ ರಿಂದ ೫ ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು ೬ ರಿಂದ ೧೦ ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

೨೦೦೫ ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮುರಿದು ಅವುಗಳ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳನ್ನು ಕೆಳಗಿನ ಮೂಲಭೂತ ವಿಧಾನಗಳ ಆಧಾರದ ಮೇಲೆ ರಚಿಸಲಾಗಿದೆ. ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach).

ಪಠ್ಯಪುಸ್ತಕಗಳಲ್ಲಿರುವ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಭಾರತೀಯ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾಪೂರಕ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

©KTBS
Not to be republished

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆ ಹಾಗೂ ಮಕ್ಕಳ ಅಭ್ಯಾಸ ಪುಸ್ತಕಗಳಲ್ಲಿ ಅನೇಕ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸಿ ಅವರಲ್ಲಿ ಸಂಬಂಧಪಟ್ಟ ಸಾಮರ್ಥ್ಯ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲಗಳ ಸಂವರ್ಧನೆಯೇ ಕಲಿಕೆಯ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ(learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ ( learning to do) ಯನ್ನು ವೃದ್ಧಿಮಾಡುತ್ತದೆ. ಪ್ರತಿ ಘಟಕದಲ್ಲಿಯೂ ಕೆಲವು ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಜೋಡಿಸಲಾಗಿದೆ. ಅವುಗಳನ್ನು ಮಕ್ಕಳೇ ಕಂಡುಹಿಡಿದು, ಚರ್ಚಿಸಿ ಜೀವನದಲ್ಲಿ ಅವುಗಳ ಅರಿವನ್ನುಂಟುಮಾಡಿಕೊಳ್ಳುವಂತೆ ಮಾಡಬೇಕು.

©KTBS Not to be republished

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷ–ರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ ಮತ್ತು ಸಂಪಾದಕ ಮಂಡಳಿಯ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕವಿಗಳ ಹಾಗೂ ಸಾಹಿತಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಇದಕ್ಕೆ ತಮ್ಮ ಒಪ್ಪಿಗೆಯನ್ನು ನೀಡಿರುವ ಕವಿಗಳಿಗೆ ಹಾಗೂ ಸಾಹಿತಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯವಸ್ತು ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

# ಸಮಕ್ಷಮ

## ಓದಿಗೆ ಮುನ್ನ .......

ಮಾತೃ ಭಾಷಾ ಬೋಧನೆ ಮತ್ತು ಅನ್ಯ ಭಾಷಾ ಬೋಧನೆಗಿರುವ ವ್ಯತ್ಯಾಸವನ್ನು ಗಮನದಲ್ಲಿಟ್ಟುಕೊಂಡು ಕಳೆದ ಹತ್ತು ವರ್ಷಗಳ ನಂತರ ಕರ್ನಾಟಕ ರಾಜ್ಯ ಪಠ್ಯಪುಸ್ತಕ ಸಂಘ ನೂತನ ಪಠ್ಯಪುಸ್ತಕಗಳನ್ನು ರಚಿಸಲು ತಜ್ಞರ ಸಮಿತಿಯನ್ನು ನೇಮಿಸಿರುವುದು ಸಂತಸದ ವಿಚಾರವಾಗಿದೆ. ವಿದ್ಯಾರ್ಥಿಗಳು ತಮ್ಮ ಮಾತೃ ಭಾಷೆಯ ಜೊತೆಗೆ ಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಲಿಯಲು ಸಹಕಾರಿಯಾಗುವಂತೆ ಸರಳವಾಗಿ ಹಾಗೂ ವೈಜ್ಞಾನಿಕವಾಗಿ ಪಠ್ಯಕ್ರಮವನ್ನು ರೂಪಿಸಲಾಗಿದೆ. ಇಲ್ಲಿ ಪಠ್ಯಗಳ ಜೊತೆಗೆ ಭಾಷಾಭ್ಯಾಸವನ್ನು ತಾರ್ಕಿಕವಾಗಿ ಮತ್ತು ಕ್ರಿಯಾತ್ಮಕವಾಗಿ ಅಳವಡಿಸಲಾಗಿದೆ.

ಭಾಷೆಯನ್ನು ಕಲಿಯುವ ಪ್ರಕ್ರಿಯೆ ಯಾಂತ್ರಿಕವಾಗಿರದೆ ಅದು ಪರಿಸರದಲ್ಲಿ ಒಂದಾಗಿ ಕಲಿತ ಅಭ್ಯರ್ಥಿ ಅದರ ಸದುಪಯೋಗ ಪಡೆಯುವಂತಾಗಬೇಕು. ವಿದ್ಯಾರ್ಥಿಗಳು ಭಾಷೆಯನ್ನು ಕಲಿಯಲು ಸಹಕಾರಿಯಾಗುವಂತೆ ಸದಭಿರುಚಿ ಮೂಡುವಂತಹ ಪಾಠಗಳನ್ನು ಆಯ್ಕೆ ಮಾಡಲಾಗಿದೆ. ಪದ್ಯ ಹಾಗೂ ಗದ್ಯ ಪಾಠಗಳಿಗೆ ಸಮಾನ ಸ್ಥಾನ ಕಲ್ಪಿಸುವುದರ ಜೊತೆಗೆ ಪರಿಸರದ ಸಂಸ್ಕೃತಿ, ಪರಸ್ಪರ ಸಹಕಾರ, ಇತರ ಧರ್ಮಗಳ ಬಗ್ಗೆ ಗೌರವ ಮೂಡುವಂತೆ ಪಠ್ಯ ವಸ್ತುವನ್ನು ಸಂಯೋಜಿಸಲಾಗಿದೆ. ಈ ಪಠ್ಯಪುಸ್ತಕ ಕಲಿಯುವ ವಿದ್ಯಾರ್ಥಿಗಳಿಗೂ ಕಲಿಸುವ ಶಿಕ್ಷಕರಿಗೂ ಉಪಯುಕ್ತವಾದರೆ ನಮ್ಮ ಶ್ರಮ ಸಾರ್ಥಕವಾಗುತ್ತದೆ.

ಪಠ್ಯಪುಸ್ತಕ ರಚನೆಯಲ್ಲಿ ಸಹಕಾರ ನೀಡಿ, ಅದನ್ನು ಅನೇಕ ಸಲ ತಿದ್ದಿ ತೀಡಿ ಅಂದವಾಗಿ ರೂಪಗೊಳ್ಳುವಂತೆ ಪ್ರಯತ್ನಿಸಿದ ಪಠ್ಯ ರಚನಾ ಸಮಿತಿಯ ಎಲ್ಲ ಸದಸ್ಯರು, ಪರಿಶೀಲಕರು ಹಾಗೂ ಪಠ್ಯ ರಚನೆಯ ಸಂದರ್ಭದಲ್ಲಿ ಮುಕ್ತವಾದ ಸಲಹೆ ಸಹಕಾರ ನೀಡಿದ ಕರ್ನಾಟಕ ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರು, ಸಂಯೋಜಕರು, ಉಪನಿರ್ದೇಶಕರು ಹಾಗೂ ಹಿರಿಯ ಸಹಾಯಕ ನಿರ್ದೇಶಕರಿಗೆ ನಮ್ಮ ಕೃತಜ್ಞತೆಗಳು.

©KTBS Not to be republished

**ಪ್ರೊ. ಎಚ್.ಎಂ. ಮಹೇಶ್ವರಯ್ಯ**
ಅಧ್ಯಕ್ಷರು
ಪಠ್ಯಪುಸ್ತಕ ರಚನಾ ಸಮಿತಿ

## ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು**

**ಪ್ರೊ. ಬರಗೂರು ರಾಮಚಂದ್ರಪ್ಪ**

ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು–೮೫

**ಅಧ್ಯಕ್ಷರು**

**ಡಾ. ಕೆಂಪೇಗೌಡ**

ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–೬

**ಸದಸ್ಯರು**

**ಡಾ. ಗಣೇಶ್ ಜಿ. ಎಂ.**
ಸಹಾಯಕ ಪ್ರಾಧ್ಯಾಪಕರು, ಎಂ.ಎಲ್.ಎಂ.ಎನ್.
ಶಿಕ್ಷಣ ಮಹಾವಿದ್ಯಾಲಯ, ಜ್ಯೋತಿನಗರ, ಚಿಕ್ಕಮಗಳೂರು.

**ಡಾ. ಕೆ. ಷರೀಫಾ**
ಲೇಖಕಿ, ನಂ.೫/ಎ ೧ನೇ ಮಹಡಿ, ೧ನೇ ಬ್ಲಾಕ್,
೨ನೇ ಕ್ರಾಸ್, ಆರ್.ಟಿ. ನಗರ, ಬೆಂಗಳೂರು.

**ಶ್ರೀ ನಾಗರಾಜಾಚಾರಿ**
ಕನ್ನಡ ಶಿಕ್ಷಕರು, ಸರ್ಕಾರಿ ಉರ್ದು ಪ್ರೌಢಶಾಲೆ,
ಡಾ.ಟಿ.ಸಿ.ಎಂ. ರಾಯನ್ ರಸ್ತೆ, ಬೆಂಗಳೂರು.

**ಡಾ. ಬಂಗಾರಿಮಠ ಎಸ್. ವಿ.**
ಮುಖ್ಯಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,
ಮಡಕಲಕಟ್ಟಿ, ಧಾರವಾಡ ಜಿಲ್ಲೆ.

**ಶ್ರೀ ಪ್ರಕಾಶ್ ಎಸ್.**
ಸಿ.ಆರ್.ಪಿ. ಕ್ಷೇತ್ರ ಸಂಪನ್ಮೂಲ ಕೇಂದ್ರ, ಮದ್ದೂರು.
ಮಂಡ್ಯ ಜಿಲ್ಲೆ.

**ಶ್ರೀ ವೆಂಕಟೇಶ್ ಡಿ. ಎನ್.**
ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,
ಉರಮಾರ ಕಸಲಗೆರೆ, ಮಂಡ್ಯ ದಕ್ಷಿಣ ವಲಯ.

©KTBS Not to be republished

## ಉನ್ನತ ಪರಿಶೀಲನಾ ಸಮಿತಿ

**ಡಾ. ಎಚ್.ಎಸ್. ರಾಘವೇಂದ್ರರಾವ್**
ನಿವೃತ್ತ ಪ್ರಾಧ್ಯಾಪಕರು, #೭, ೧೫ನೇ ಕ್ರಾಸ್, ೫ನೇ ಫೇಸ್,
ಜೆ.ಪಿ.ನಗರ, ಬೆಂಗಳೂರು–೭೮

**ಡಾ. ಜಿ.ಆರ್. ತಿಪ್ಪೇಸ್ವಾಮಿ**
ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು–೬

**ಡಾ. ಸೈಯದ್ ಜಮೀರ್ ಉಲ್ಲಾಷರೀಫ್**
ನಿವೃತ್ತ ಪ್ರಾಂಶುಪಾಲರು, ಭಟ್ಕಳ,
ಉತ್ತರ ಕನ್ನಡ ಜಿಲ್ಲೆ.

**ಡಾ. ಯಲ್ಲಪ್ಪ ಹಿಮ್ಮಡಿ**
ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು,
ರಾಯಬಾಗ, ಬೆಳಗಾವಿ ಜಿಲ್ಲೆ.

**ಡಾ. ಕಲಾವತಿ**
ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು,
ಬಳ್ಳಾರಿ.

**ಡಾ. ಪ್ರಶಾಂತ್ ನಾಯಕ್**
ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ, ಶಿವಮೊಗ್ಗ.

**ಡಾ. ಗೀತಾ ವಸಂತ**
ಸಹಪ್ರಾಧ್ಯಾಪಕರು ಕನ್ನಡವಿಭಾಗ, ತುಮಕೂರು
ವಿಶ್ವವಿದ್ಯಾಲಯ, ತುಮಕೂರು.

**ಡಾ. ಸತ್ಯನಾರಾಯಣ ಎಚ್.ಎಸ್.**
ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು,
ಬಸವನಗುಡಿ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ**

**ಶ್ರೀ ಎಂ.ಪಿ. ಮಾದೇಗೌಡ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫

**ಶ್ರೀ ಕೆ.ಜಿ. ರಂಗಯ್ಯ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫

**ಕಾರ್ಯಕ್ರಮ ಸಂಯೋಜಕರು**

**ಶ್ರೀಮತಿ ಎಂ.ಡಿ. ಉಷಾ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫

# ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ಧರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕ ಮೌಲ್ಯಗಳು, ವ್ಯಕ್ತಿತ್ವ ವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪. ೧೧. ೨೦೧೪ ರಂದು ಆದೇಶ ಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿ ದೋಷ, ಆಶಯ ದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆ ಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯ ಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನುಆಧರಿಸಿ

© KTBS Not to be republished

ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇನೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

©KTBS Not to be republished

**(ಮಾದೇಗೌಡ ಎಂ.ಪಿ.)**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು-೮೫

**(ಪ್ರೊ. ಬರಗೂರು ರಾಮಚಂದ್ರಪ್ಪ)**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ)
ಬೆಂಗಳೂರು-೮೫

# ಪುನರ್ ಪರಿಶೀಲನೆಯ ಕುರಿತು

೨೦೧೪ರ ಶೈಕ್ಷಣಿಕ ವರ್ಷದಲ್ಲಿ ಪ್ರಕಟವಾದ ಪಠ್ಯಪುಸ್ತಕಗಳು ರಾಜಕೀಯ ಕಾರಣಗಳಿಗಾಗಿ ಅದೇ ವರ್ಷ ಪರಿಷ್ಕರಣೆಗೆ ಒಳಗಾದವು. ಪರಿಷ್ಕೃತ ಪಠ್ಯಪುಸ್ತಕಗಳು ೨೦೧೭–೧೮ರ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಕೈ ತಲುಪಿದವು. ಪರಿಷ್ಕೃತ ಪಠ್ಯಗಳಲ್ಲಾದ ಬದಲಾವಣೆಗಳ ಬಗ್ಗೆ ವ್ಯಾಪಕ ಟೀಕೆ, ವಿಮರ್ಶೆಗಳು ಬಂದವು. ಶಿಕ್ಷಣದ ಮೂಲ ಆಶಯಗಳನ್ನು ಬದಿಗಿಟ್ಟು ಸ್ವಹಿತಾಸಕ್ತಿಯ ಸಿದ್ಧಾಂತಗಳ ಪ್ರಚಾರಕ್ಕೆ ಪಠ್ಯಪುಸ್ತಕಗಳನ್ನು ಬಳಸಿಕೊಳ್ಳಲಾಯಿತೆಂಬ ಆಕ್ಷೇಪ ಎಲ್ಲೆಡೆಯಿಂದ ಕೇಳಿಬಂದ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು ೨೦೨೧ರಲ್ಲಿ ಈ ಪಠ್ಯಗಳ ಮರುಪರಿಶೀಲನೆ ನಡೆಸುವಂತೆ ಆದೇಶಿಸಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಆಪಾದನೆ ಕೇಳಿಬಂದ ನಿರ್ದಿಷ್ಟ ಪಠ್ಯಪುಸ್ತಕಗಳನ್ನು ಆಮೂಲಾಗ್ರ ಪರಿಶೀಲಿಸಿ ಬದಲಾವಣೆಗಳನ್ನು ಸೂಚಿಸಿದೆ.

ಇಂದಿನ ಮಕ್ಕಳೇ ಮುಂದಿನ ಜನಾಂಗವೆಂಬ ಮಾತಿದೆ. ಶಾಲೆಗಳಲ್ಲಿ ಓದುವ ಇಂದಿನ ಮಕ್ಕಳಿಗೆ ನಾವು ಎಂಥ ಪಠ್ಯಗಳನ್ನು ಬೋಧಿಸುತ್ತೇವೆಂಬುದರ ಮೇಲೆ ಸಮಾಜದ ಭವಿಷ್ಯ ನಿಂತಿದೆ. ವಿದ್ಯಾರ್ಥಿಗಳು ಓದುವ ಪಠ್ಯಗಳು ಆರೋಗ್ಯಕರ ಚಿಂತನೆಗಳನ್ನು ಒಳಗೊಂಡಿರಬೇಕು. ಸಮಾಜದ ವಿವಿಧ ವರ್ಗ–ಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ದ್ವೇಷ, ತಾತ್ಸಾರಗಳನ್ನು ಹರಡುವಂತಿರಬಾರದು. ಅವರಲ್ಲಿ ರಾಷ್ಟ್ರೀಯತೆಯನ್ನೂ ದೇಶಪ್ರೇಮವನ್ನೂ ಉದ್ದೀಪಿಸುವಂತಿರಬೇಕು. ರಾಜ್ಯ, ದೇಶಗಳಲ್ಲಿ ಆಗಿಹೋದ ಸಂಗತಿಗಳ ಬಗ್ಗೆ ನಿಖರವಾದ, ವಸ್ತುನಿಷ್ಠವಾದ ಮಾಹಿತಿ ದೊರೆಯುವಂತಿರಬೇಕು. ಅವರಿಗೆ ಸ್ಥಳೀಯ ಸಂಸ್ಕೃತಿ, ಭಾಷೆ, ಜನಪದಗಳ ಪರಿಚಯವಾಗುವಂತಿರಬೇಕು. ಒಟ್ಟಾರೆಯಾಗಿ ಪಠ್ಯಗಳು ವಿದ್ಯಾರ್ಥಿಗಳನ್ನು ಉತ್ತಮ, ಜವಾಬ್ದಾರಿಯುತ, ಪ್ರಜ್ಞಾವಂತ, ಮುಕ್ತ ಮನಸ್ಸಿನ, ಸಭ್ಯ ನಾಗರಿಕರನ್ನಾಗಿ ಮಾಡಬೇಕು. ಆ ಜವಾಬ್ದಾರಿಯನ್ನು ಗಮನದಲ್ಲಿರಿಸಿಕೊಂಡು ಪಾಠಗಳನ್ನು ಪರಿಷ್ಕರಣೆ ಮಾಡಬೇಕಾಯಿತು.

೨೦೧೪ರಲ್ಲಿ ಪರಿಷ್ಕರಣೆಗೆ ಒಳಗಾಗಿದ್ದ ಭಾಷಾ ಪಠ್ಯಗಳಲ್ಲಿ ನಮಗೆ ಅನೇಕ ಸಮಸ್ಯೆಗಳು ಕಂಡುಬಂದವು. ಅವುಗಳನ್ನು ಸರಿಪಡಿಸಲು ಪಠ್ಯಪುಸ್ತಕಗಳ ಪರಿಶೀಲನೆ, ಪರಿಷ್ಕರಣೆಗಳಲ್ಲಿ ನಾವು ನಮ್ಮದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡೆವು. ಭಾಷಾಪಠ್ಯವು ಇರುವುದು ವಿದ್ಯಾರ್ಥಿಯಲ್ಲಿ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಉತ್ತಮಪಡಿಸುವುದಕ್ಕೆ. ಭಾಷಾಪಠ್ಯಗಳನ್ನು ಅಧ್ಯಯನ ಮಾಡಿದ ವಿದ್ಯಾರ್ಥಿಯಲ್ಲಿ ಭಾಷೆಯ ಬಗ್ಗೆ ಅಭಿಮಾನ ಮೂಡಬೇಕು; ಆತನ ಭಾಷಾಪ್ರೌಢಿಮೆ ಗಣನಾತ್ಮಕವಾಗಿ ಹೆಚ್ಚಬೇಕು. ಓದುವ, ಆಲಿಸುವ, ಮಾತಾಡುವ ಮತ್ತು ಬರೆಯುವ ಸಾಮರ್ಥ್ಯಗಳು ಸುಧಾರಿಸಬೇಕು. ಸ್ವತಂತ್ರವಾಗಿ ವಿದ್ಯಾರ್ಥಿಯು ತನ್ನ ಅಭಿಪ್ರಾಯ, ಅನಿಸಿಕೆಗಳನ್ನು ಅತ್ಯಂತ ಶಕ್ತಿಶಾಲಿಯಾಗಿ ಹೇಳುವುದಕ್ಕೆ ಸಾಧ್ಯವಾಗಬೇಕು. ೨೦೧೪ರಲ್ಲಿ ಪರಿಷ್ಕರಣೆಗೆ ಒಳಗಾದ ಪಠ್ಯಪುಸ್ತಕಗಳಲ್ಲಿ ಭಾಷೆಯ ಈ ಬಗೆಯ ಕಲಿಕೆಗೆ ಹಿನ್ನಡೆಯಾಗಿ ಕೇವಲ ಸಿದ್ಧಾಂತಪ್ರಚಾರವೇ ಮುನ್ನೆಲೆಗೆ ಬಂದಿದ್ದುದನ್ನು ಗಮನಿಸಿದೆವು. ಆ ಪಠ್ಯಗಳ ಮರುಪರಿಷ್ಕರಣೆಯ ಹೊತ್ತಿನಲ್ಲಿ ಈ ನಿಯಮಗಳನ್ನು ಹೇರಿಕೊಂಡೆವು: (೧) ಭಾಷಾಪಠ್ಯವಿರುವುದು ಅತ್ಯುತ್ತಮವಾದ ಪ್ರಾತಿನಿಧಿಕ ಪಠ್ಯವನ್ನು ಕೊಡುವುದಕ್ಕಾಗಿಯೇ ಹೊರತು ಸಾಮಾಜಿಕನ್ಯಾಯ, ಲಿಂಗಸಮಾನತೆ ಇತ್ಯಾದಿ ಅಂಶಗಳನ್ನು ತುರುಕುವುದಕ್ಕಲ್ಲ. ಹಾಗಾಗಿ ಭಾಷೆಯ ವೈವಿಧ್ಯ ಹಾಗೂ ವಿಶೇಷಗಳನ್ನು ಹೆಚ್ಚು ಕಾಣಿಸುವ ಗದ್ಯ/ಪದ್ಯ ಭಾಗಗಳನ್ನು ಆರಿಸಿಕೊಳ್ಳಬೇಕು. (೨) ಭಾಷೆಯ ಪಠ್ಯದ ಹೆಸರಿನಲ್ಲಿ ಸಿದ್ಧಾಂತಪ್ರಚಾರಕ್ಕೆ ಅವಕಾಶವಾಗಬಾರದು. (೩) ಗ್ರಾಂಥಿಕ ಭಾಷೆಯಲ್ಲದೆ ಮೌಖಿಕ ಪರಂಪರೆಯ ಹಾಗೂ ಹಲವು ಪ್ರಕಾರದ ಸಾಹಿತ್ಯಗಳಿಗೆ ಅವಕಾಶ ಕೊಡಬೇಕು. (೪) ಬಳಸಿದ ಭಾಷೆ, ಭಾಷಾಸೊಗಡು, ಪ್ರತಿಪಾದಿಸಿರುವ ವಿಚಾರ, ಹೊಸ ಚಿಂತನೆಗಳನ್ನು ಹುಟ್ಟಿಸುವ ಸಾಧ್ಯತೆ, ಸಾಹಿತ್ಯ ಪ್ರಕಾರದ ವೈಶಿಷ್ಟ್ಯ ಇತ್ಯಾದಿ ಎಲ್ಲ ಬಗೆಯಲ್ಲೂ ಪಾಠಗಳ ಗುಣಮಟ್ಟ ಅತ್ಯುತ್ತಮವಾಗಿರಬೇಕು.

©KTBS Not to be republished

(೫) ಕವಿ/ಲೇಖಕರ ಪುನರಾವರ್ತನೆಯನ್ನು ಕಡಿಮೆ ಮಾಡಿ ಹೊಸ ಕವಿ/ಲೇಖಕರ ಬರಹಗಳಿಗೆ ಅವಕಾಶ ಮಾಡಿಕೊಡಬೇಕು. (೬) ಭಾಷೆಯ ಸೊಬಗನ್ನು ಪರಿಚಯಿಸುವ ಭಾಗಗಳನ್ನು ಪ್ರತಿ ಅಧ್ಯಾಯದ ಜೊತೆ ಸೇರಿಸಬೇಕು.

ಅತ್ಯುತ್ತಮ ಪಠ್ಯಪುಸ್ತಕ ಎಂಬುದು ಒಂದು ಆದರ್ಶಸ್ಥಿತಿ. ಅದರತ್ತ ನಡೆಯುವುದು ನಮ್ಮ ಆಶಯವೇ ಹೊರತು ನೂರಕ್ಕೆ ನೂರು ಅತ್ಯುತ್ತಮವಾದ ಪಠ್ಯಪುಸ್ತಕವನ್ನು ರಚಿಸುವುದು ಸಾಧ್ಯವಿಲ್ಲ. ಆ ವಿನಯದಿಂದಲೇ ನಾವು ಈ ಪುನರ್ ಪರಿಶೀಲನೆಯ ಕಾರ್ಯವನ್ನು ಮುಗಿಸಿ ಪಠ್ಯಗಳನ್ನು ನಿಮ್ಮ ಕೈಗಿಡುತ್ತಿದ್ದೇವೆ. ಇದು ಕೇವಲ ಮರುಪರಿಷ್ಕರಣೆಯೇ ಹೊರತು ಸಮಗ್ರ ಪುನಾರಚನೆಯಲ್ಲ. ಈಗಾಗಲೇ (೨೦೧೪ರಲ್ಲಿ) ರಚಿತವಾಗಿದ್ದ ಪಠ್ಯಪುಸ್ತಕದ ಆಶಯ ಮತ್ತು ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಅದನ್ನನುಸರಿಸಿ ಬಂದ ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮುಂದಿಟ್ಟುಕೊಂಡೇ ಇಡಿಯ ಮರುಪರಿಷ್ಕರಣೆಯ ಕಾರ್ಯ ನಡೆದಿದೆ. ಜೊತೆಗೆ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲಾಗಿದೆ. ಪರಿಷ್ಕರಣೆಯ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿರುವ ಪರಿಶೀಲನಾ ಸಮಿತಿಯ ನನ್ನ ಎಲ್ಲ ಸಹೋದ್ಯೋಗಿಗಳಿಗೆ ನಾನು ಕೃತಜ್ಞ. ಅಂತೆಯೇ ಸಮಿತಿಯ ಕೆಲಸ ಸುಗಮವಾಗಿ ನಡೆಯಲು ಸಹಕರಿಸಿದ ಪಠ್ಯಪುಸ್ತಕ ಸಂಘದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೂ ಆಭಾರಿ. ಈ ಪರಿಷ್ಕರಣೆಯು ಈಗಷ್ಟೇ ಬಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಹೆಚ್ಚು ಪ್ರತಿಫಲಿಸುತ್ತ, ಮುಂದೆ ಬರಲಿರುವ ಸಮಗ್ರ ಪುನಾರಚಿತ ಪಠ್ಯಗಳಿಗೆ ಪ್ರವೇಶಿಕೆಯಾಗಲಿದೆ ಎಂಬ ಭರವಸೆ ನಮ್ಮದು.

**ಶ್ರೀ ಎಂ. ಪಿ. ಮಾದೇಗೌಡ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫

**ರೋಹಿತ್ ಚಕ್ರತೀರ್ಥ**
ಅಧ್ಯಕ್ಷರು,
ಕರ್ನಾಟಕ ಪಠ್ಯಪುಸ್ತಕಗಳ
ಪರಿಶೀಲನಾ ಸಮಿತಿ

©KTBS Not to be republished

## ಪುನರ್ ಪರಿಷ್ಕರಣಾ ಸಮಿತಿ

**ಶ್ರೀ ರೋಹಿತ್ ಚಕ್ರತೀರ್ಥ,** ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.

**ಸದಸ್ಯರು :**

**ಡಾ. ರೋಹಿಣಾಕ್ಷ,** ಸಹಾಯಕ ಪ್ರಾಧ್ಯಾಪಕರು, ಜಾನಪದಶಾಸ್ತ್ರ ಮತ್ತು ಬುಡಕಟ್ಟು ಅಧ್ಯಯನ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಆಳಂದ ರಸ್ತೆ, ಕಲಬುರಗಿ.

**ಶ್ರೀ ಚಿಕ್ಕದೇವೇಗೌಡ,** ಕನ್ನಡ ಭಾಷಾ ಶಿಕ್ಷಕರು, ಕರ್ನಾಟಕ ಪಬ್ಲಿಕ್ ಶಾಲೆ, ಉತ್ತರಹಳ್ಳಿ, ಬೆಂಗಳೂರು, ದಕ್ಷಿಣ ವಲಯ.

**ಕಲಾವಿದರು :**

**ಶ್ರೀ ರಘುಪತಿ ಶೃಂಗೇರಿ**

**ಸಲಹೆಗಾರರು :**

**ಶ್ರೀ ಎಂ.ಪಿ. ಮಾದೇಗೌಡ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

**ಶ್ರೀ ಕೆ.ಜಿ.ರಂಗಯ್ಯ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು :**

**ಶ್ರೀಮತಿ. ಎಂ.ಡಿ. ಉಷಾ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.) ಬೆಂಗಳೂರು.

K2K9Q1

# ಪರಿವಿಡಿ


| ಕ್ರ. ಸಂ. | ಪಾಠದ ಹೆಸರು | ಕೃತಿಕಾರರು | ಪು. ಸಂ. |
|---|---|---|---|
| | **ಗದ್ಯಭಾಗ** | | |
| ೧. | ಬುದ್ಧನ ಸಲಹೆ | ನಿರುಪಮಾ | ೦೧ – ೦೮ |
| ೨. | ಕನಸು ಮತ್ತು ಸಂದೇಶ | ಎ.ಪಿ.ಜೆ. ಅಬ್ದುಲ್ ಕಲಾಂ | ೦೯ – ೧೬ |
| ೩. | ಗಾಂಧೀಜಿಯ ಬಾಲ್ಯ | ಗೊರೂರು ರಾಮಸ್ವಾಮಿ ಅಯ್ಯಂಗಾರ್ | ೧೭ – ೨೪ |
| ೪. | ಸುಕ್ರಿ ಬೊಮ್ಮನ ಗೌಡ | ಶಾಂತಿ ನಾಯಕ | ೨೫ – ೩೨ |
| ೫. | ಕಾಲವನ್ನು ಗೆದ್ದವರು | ಕೆ. ಟಿ. ಗಟ್ಟಿ | ೩೩ – ೩೯ |
| ೬. | ಪರಿವರ್ತನೆ | ಜಿ. ಎಸ್. ಬಸವರಾಜಶಾಸ್ತ್ರಿ | ೪೦ – ೪೬ |
| ೭. | ಒಂದು ಮರದ ಬೆಲೆ | ಹಾ.ಮಾ. ನಾಯಕ | ೪೭ – ೫೪ |
| ೮ | ಎಮ್ಮ ಮನೆಯಂಗಳದಿ... | ಶ್ರೀನಿಧಿ ಡಿ. ಎಸ್. | ೫೫ – ೬೩ |
| | **ಪದ್ಯಭಾಗ** | | |
| ೯. | ಅನ್ವೇಷಣೆ | ಜಿ.ಎಸ್. ಶಿವರುದ್ರಪ್ಪ | ೬೪ – ೬೭ |
| ೧೦. | ಹಾರಿದ ಹಕ್ಕಿಗಳು | ಆರ್.ವಿ. ಭಂಡಾರಿ | ೬೮ – ೭೦ |
| ೧೧. | ಜ್ಯೋತಿಯೇ ಆಗು ಜಗಕೆಲ್ಲ | ಜನಪದಗೀತೆ | ೭೧ – ೭೬ |
| ೧೨. | ನನ್ನ ಹಾಗೆಯೆ | ಸು. ರಂ. ಎಕ್ಕುಂಡಿ | ೭೭ – ೮೨ |
| ೧೩. | ತೂಗಿ ತೂಗಿ ಮರಗಳೇ | ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ | ೮೩ – ೮೭ |
| ೧೪. | ಮಳೆ ಬರಲಿ | ಸವಿತಾ ನಾಗಭೂಷಣ | ೮೮ – ೯೧ |
| ೧೫. | ಹಕ್ಕಿಗಳು | ಸಿದ್ಧಲಿಂಗಯ್ಯ | ೯೨ – ೯೬ |
| ೧೬. | ಗೌರವಿಸು ಜೀವನವ | ಡಿ.ವಿ.ಜಿ. | ೯೭–೧೦೧ |


©KTBS Not to be republished

## ಸೈದ್ಧಾಂತಿಕ ವ್ಯಾಕರಣ


| ಕ್ರ. ಸಂ. | ವಿಷಯ | ಪು. ಸಂ. |
|---|---|---|
| ೧ | ಕನ್ನಡ ವರ್ಣಮಾಲೆ | ೦೭ – ೦೮ |
| ೨ | ಗುಣಿತಾಕ್ಷರಗಳು – ಸಂಯುಕ್ತಾಕ್ಷರಗಳು | ೧೬ – ೧೬ |
| ೩ | ಕನ್ನಡ ಸಂಧಿಗಳು | ೨೩ – ೨೪ |
| ೪ | ನಾಮಪದ – ವಿಭಕ್ತಿ ಪ್ರತ್ಯಯಗಳು | ೩೧ – ೩೨ |
| ೫ | ತತ್ಸಮ – ತದ್ಭವಗಳು | ೩೮ – ೩೯ |
| ೬ | ವಚನಗಳು – ವಾಕ್ಯರಚನೆ | ೪೫ – ೪೬ |
| ೭ | ಲಿಂಗಗಳು | ೫೩ – ೫೪ |
| ೮ | ದ್ವಿರುಕ್ತಿ – ಜೋಡುನುಡಿ – ನುಡಿಗಟ್ಟು | ೬೧ – ೬೨ |


©KTBS Not to be republished

## ರಚನೆ


| | | |
|---|---|---|
| ೧ | ಪತ್ರಲೇಖನ | ೧೦೧ – ೧೦೩ |
| ೨. | ಪ್ರಬಂಧ ರಚನೆ | ೧೦೪ – ೧೦೬ |
| ೩ | ಗಾದೆಗಳ ವಿಸ್ತರಣೆ | ೧೦೭ – ೧೦೮ |

ಗದ್ಯ ಭಾಗ

# ೧. ಬುದ್ಧನ ಸಲಹೆ

H3F2J2

– ನಿರುಪಮಾ

**ಪಾಠ ಪ್ರವೇಶ :** ಮಾನವ ಒಂದು ಕಡೆ ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಸುಖ, ಶಾಂತಿ ಹಾಗೂ ಸಮೃದ್ಧಿಯ ಜೀವನ ನಡೆಸಿದರೆ, ಮತ್ತೊಂದೆಡೆ ಅದೇ ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳುವಾಗ ಸ್ವಾರ್ಥ, ದ್ವೇಷ ಹಾಗೂ ದುರಾಸೆಗಳನ್ನು ತುಂಬಿಕೊಂಡು ಬದುಕನ್ನು ಸರ್ವನಾಶ ಮಾಡಿಕೊಳ್ಳುತ್ತಿದ್ದಾನೆ. ಸರ್ವರಿಗೂ ಮೀಸಲಾಗಿರುವ ನೆಲ, ಜಲಗಳನ್ನು ಹಂಚಿಕೊಳ್ಳುವಾಗ ವಿವೇಕವನ್ನು ಕಳೆದುಕೊಂಡು ಯುದ್ಧಕ್ಕೆ ಸನ್ನದ್ಧನಾಗುತ್ತಾನೆ. ಯುದ್ಧಗಳಿಂದ ಅಪಾರ ಸಾವು ನೋವುಗಳು ಉಂಟಾಗಿ ಬದುಕು ನರಕವಾಗಿ ಬಿಡುತ್ತದೆ ಎಂಬ ಸತ್ಯವನ್ನು ಮರೆತುಬಿಡುತ್ತಾನೆ. ಇಂದು ಮನುಷ್ಯ ಬದುಕಲು ಗಾಳಿ, ನೀರು, ಆಹಾರ ಎಷ್ಟು ಮುಖ್ಯವೋ ಸುಖ ಶಾಂತಿ ನೆಮ್ಮದಿಗಳೂ ಅಷ್ಟೇ ಮುಖ್ಯ ಎಂಬುದನ್ನು ಎಲ್ಲರೂ ಅರಿಯಬೇಕಿದೆ. ಜೀವನದಲ್ಲಿ ಎಂತಹ ಸಮಸ್ಯೆಗಳು ಉದ್ಭವಿಸಿದರೂ ಅವುಗಳನ್ನು ವಿವೇಕದಿಂದ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಲು ಸಾಧ್ಯವಿದೆ ಎಂಬ ಸಂದೇಶ 'ಬುದ್ಧನ ಸಲಹೆ' ಪಾಠದ ಮೂಲಕ ವ್ಯಕ್ತವಾಗುತ್ತದೆ.

©KTBS Not to be republished

ಬಹಳ ವರುಷಗಳ ಹಿಂದಿನ ಮಾತು. ಭಾರತದ ಉತ್ತರ ಭಾಗದಲ್ಲಿ ಕಪಿಲವಸ್ತುವೆಂಬ ನಗರವಿತ್ತು. ಅದನ್ನು ಶಾಕ್ಯರೆಂಬ ಅರಸು ಮನೆತನದವರು ಆಳುತ್ತಿದ್ದರು. ಶಾಕ್ಯರ ಅರಸ ಶುದ್ಧೋಧನನಿಗೆ ಸಿದ್ಧಾರ್ಥ ನೆಂಬ ಮಗ ಹುಟ್ಟಿದನು. ಆತ ಬೆಳೆದ ಮೇಲೆ ಸನ್ಯಾಸ ಸ್ವೀಕರಿಸಿ ಭಗವಾನ್ ಬುದ್ಧನಾದನು.

ಈಗ ನೇಪಾಳ ದೇಶದಲ್ಲಿ ಸೇರಿಹೋಗಿರುವ ಕಪಿಲವಸ್ತು ನಗರದ ಸಮೀಪದಲ್ಲಿ ಹೇಮಕೂಟ ಪರ್ವತಗಳಿವೆ. ಆ ಪರ್ವತದಲ್ಲಿ ಹುಟ್ಟಿದ ಗಂಗಾನದಿ ದಕ್ಷಿಣಕ್ಕೆ ಕಾಶೀನಗರದವರೆಗೆ ಹರಿದು ನಂತರ ಕವಲಾಗಿ ಬಂಗಾಳ ಸಮುದ್ರಕ್ಕೆ ಸೇರುತ್ತದೆ, ಆ ಕಾಲದಲ್ಲಿ ಗಂಗಾನದಿಯ ಎರಡು ಬದಿಗಳಲ್ಲಿ ಎರಡು ರಾಜ್ಯಗಳಿದ್ದವು. ಒಂದು ವತ್ಸ ರಾಜ್ಯ ಇನ್ನೊಂದು ಮಗಧ ರಾಜ್ಯ, ಈ ನದಿಯಿಂದ ಎರಡೂ ರಾಜ್ಯಗಳು ಉಪಯೋಗ ಪಡೆದು ಸುಭಿಕ್ಷವಾಗಿದ್ದವು.

ಈ ಎರಡೂ ರಾಜ್ಯಗಳವರು ಆ ನದಿಯನ್ನು ತಾಯಿಯಂತೆ ಪೂಜಿಸುತ್ತಿದ್ದರು. ಆ ನದಿಯ ನೀರಿನಿಂದ ಎರಡೂ ರಾಜ್ಯಗಳ ನೆಲ ಸಸ್ಯಶ್ಯಾಮಲವಾಗಿತ್ತು. ಎತ್ತ ನೋಡಿದರೂ ಹಸಿರು ತುಂಬಿ ಬೆಳೆ ಬೆಳೆದು ಸುಭಿಕ್ಷದಿಂದ ಜನರು ಸುಖವಾಗಿದ್ದರು. ಇವರೆಲ್ಲರೂ ಗಂಗಾನದಿಯನ್ನು ತಮಗೆ ಅನ್ನ ನೀಡುವ ತಾಯಿ ಎನ್ನುತ್ತಿದ್ದರು. ಆದರೆ ಅವರಿಬ್ಬರನ್ನೂ ಕ್ರಮೇಣ ಸ್ವಾರ್ಥ ಆವರಿಸಿತು. ಈ ನದಿಯ ಮೇಲೆ ತಮ್ಮ ಸಂಪೂರ್ಣ ಅಧಿಕಾರ ಸ್ಥಾಪಿಸಬೇಕೆಂಬ ದುರಾಸೆ ಈ ಎರಡೂ ರಾಜ್ಯಗಳ ರಾಜರಿಗೆ ಉಂಟಾಯಿತು.

ದಿನ ಕಳೆದಂತೆ ಈ ಸ್ವಾರ್ಥ ಹೆಮ್ಮರವಾಗಿ ಬೆಳೆದು ಎರಡೂ ರಾಜ್ಯಗಳವರು ಯುದ್ಧಕ್ಕೆ ಸಿದ್ಧವಾಗುವ ಉತ್ಕಟ ಪರಿಸ್ಥಿತಿ ಉಂಟಾಯಿತು.

ಅವರು ಯುದ್ಧಕ್ಕೆ ನಿಂತಾಗ ಬುದ್ಧ ಭಗವಾನ್ ಅಲ್ಲಿಗೆ ಬಂದ. ಆತ ಯುದ್ಧಕ್ಕೆ ಸಿದ್ಧವಾದ ಎರಡೂ ಕಡೆಯ ಸೈನ್ಯಗಳನ್ನು ನೋಡಿ ಅವುಗಳ ನಡುವೆ ನಿಂತುಕೊಂಡ. ಬುದ್ಧದೇವನನ್ನು ನೋಡಿ ಎರಡೂ ಕಡೆಯವರು ಸ್ವಲ್ಪ ಹಿಂದಕ್ಕೆ ಸರಿದರು.

ಬುದ್ಧದೇವನು ಇಬ್ಬರೂ ರಾಜ–ಮಂತ್ರಿಗಳನ್ನು ಹಾಗೂ ಇತರ ಅಧಿಕಾರಿಗಳನ್ನು ತನ್ನ ಬಳಿಗೆ ಕರೆದು ಎಲ್ಲರಿಗೂ ಕೇಳಿಸುವಂತೆ ಗಟ್ಟಿಯಾಗಿ ಕೇಳಿದ.

"ನೀವು ಯುದ್ಧ ಮಾಡಲು ಏಕೆ ಸಿದ್ಧರಾಗಿದ್ದೀರಿ?"

"ನಮ್ಮ ಜೀವನಾಧಾರವಾದ ಗಂಗಾನದಿಯ ನೀರಿಗಾಗಿ" – ಅವರೆಲ್ಲರೂ ಒಕ್ಕೊರಲಿನಿಂದ ಉತ್ತರವಿತ್ತರು.

"ನದಿಯ ನೀರು, ಮಾನವ ರಕ್ತ ಇವೆರಡರಲ್ಲಿ ಯಾವುದು ಹೆಚ್ಚು ಬೆಲೆಯುಳ್ಳದ್ದು?"
"ಮನುಷ್ಯನ ರಕ್ತ ನದಿ ನೀರಿಗಿಂತ ತುಂಬ ಬೆಲೆಯುಳ್ಳದ್ದು" ಎರಡೂ ಕಡೆಯವರಿಂದ ಉತ್ತರ ಬಂತು.

©KTBS
Not to be republished





ನಮ್ಮ ಸಂಸ್ಕೃತಿಯಲ್ಲಿ ಜೀವಿಸಬೇಕು, ಅನ್ಯ ಸಂಸ್ಕೃತಿಯನ್ನು ಪ್ರೀತಿಸಬೇಕು.

"ಹಾಗಾದರೆ ನೀವು ಕಡಿಮೆ ಬೆಲೆ ಇರುವ ನೀರಿಗಾಗಿ ಅದಕ್ಕಿಂತಲೂ ಅಮೂಲ್ಯವಾದ ರಕ್ತವನ್ನು ಹರಿಸಲು ಏಕೆ ಸಿದ್ಧರಾಗಿದ್ದೀರಿ?" ಎಂದು ಬುದ್ಧ ಪುನಃ ಪ್ರಶ್ನಿಸಿದ.

"ನಮ್ಮ ಜೀವಗಳಿಗೆ ಈ ಗಂಗಾನದಿಯ ನೀರು ತುಂಬಾ ಆವಶ್ಯಕವಲ್ಲವೇ?" ಎಂದು ಎರಡೂ ಕಡೆಯವರು ಕೇಳಿದರು.

"ನೀವು ಜೀವಿಸಬೇಕೆಂದಿದ್ದೀರಲ್ಲವೇ? ಮತ್ತೆ ಸಾಯಲೇಕೆ ಸಿದ್ಧರಾಗಿದ್ದೀರಿ?" ಎಂದು ಕೇಳಿದ ಬುದ್ಧ.

ಎರಡೂ ರಾಜ್ಯದ ಮಂತ್ರಿಗಳು ಹೀಗೆ ಹೇಳಿದರು:

"ಸ್ವಾಮಿ ! ಎರಡೂ ರಾಜ್ಯಗಳ ನಡುವೆ ದ್ವೇಷ ಅಸೂಯೆಗಳಿಂದ ಪರಿಸ್ಥಿತಿ ವಿಷಮಿಸಿದೆ. ಇದಕ್ಕೆ ಪರಿಹಾರವೇ ಇಲ್ಲ. ಈಗ ಯುದ್ಧದ ಹೊರತು ಬೇರೆ ದಾರಿಯಿಲ್ಲ."

©KTBS Not to be republished

ಬುದ್ಧದೇವ ನಕ್ಕು – "ನೀವು ದ್ವೇಷದಿಂದ ದ್ವೇಷವನ್ನು ಜಯಿಸಲು ಹೋದರೆ ಕೊನೆಗೆ ನಿಮಗೆ ಉಳಿಯುವುದು ಈರ್ಷ್ಯೆಯೇ. ಇವುಗಳಿಂದ ಜೀವಿಗಳಿಗೆ ದುಃಖವೇ ಹೊರತು ಸುಖವಲ್ಲ. ಈಗ ಸುಖವಾಗಿರುವ ನೀವು ದುಃಖ ತಂದುಕೊಳ್ಳುವ ಮಾರ್ಗ ಇದು" ಎಂದಾಗ ಎರಡೂ ಕಡೆಯ ರಾಜರು ತೆಪ್ಪಗಾದರು. ಅವರು ಕೇಳಿದರು :

"ಹಾಗಾದರೆ ಏನು ಮಾಡಬೇಕೆನ್ನುತ್ತೀರಿ ಭಗವಾನ್?"

"ಮನುಷ್ಯ ಸುಖವಾಗಿ ಜೀವಿಸಲು ನೀರು, ಗಾಳಿ, ಆಹಾರ ಎಲ್ಲವೂ ಮುಖ್ಯವಾದಂತೆ ಶಾಂತಿಯೂ ಅಷ್ಟೇ ಮುಖ್ಯ. ಯುದ್ಧದಿಂದ ಶಾಂತಿ ನಾಶವಾಗುತ್ತದೆ. ನೀವೇ ಕೈಯಾರೆ ನಿಮ್ಮ ಸುಖ ನಾಶ ಮಾಡಿಕೊಳ್ಳುವುದನ್ನು ಬಿಟ್ಟು ವಿವೇಕ ತಂದುಕೊಂಡು ಸುಖವಾಗಿರಿ. ಪ್ರಕೃತಿ ಜೀವಿಗಳಿಗೆ ವರವೇ ಹೊರತು ಶಾಪವಲ್ಲ. ಆ ವರವನ್ನು ಸರ್ವಮಾನವರೂ ಸಮಾನವಾಗಿ ಹಂಚಿಕೊಂಡಾಗ ಎಲ್ಲರಿಗೂ ಸುಖ ಶಾಂತಿ ಸಿಗುತ್ತದೆ" ಎಂದು ಬುದ್ಧದೇವ ಬೋಧಿಸಿದ. ಎರಡೂ ಕಡೆಯ ರಾಜರಿಗೆ ಈ ಸಲಹೆ ಸತ್ಯವೆನಿಸಿತು. ಎಲ್ಲರೂ ಬುದ್ಧದೇವನಿಗೆ ನಮಸ್ಕರಿಸಿ ಯುದ್ಧ ಬೇಡವೆಂದು ತಮ್ಮ ತಮ್ಮ ಊರಿಗೆ ಹೊರಟರು. ಅಂದಿನಿಂದ ಆ ಎರಡೂ ರಾಜ್ಯದ ಜನರು ಸ್ನೇಹದಿಂದ ಸುಖವಾಗಿದ್ದರು.

* * * *



ಈ ನಾಡು ನನ್ನದು, ಈ ದೇಶ ನನ್ನದು ಎನ್ನದ ದೇಹ ಸುಡುಗಾಡು.

## ಕೃತಿಕಾರರ ಪರಿಚಯ :



**ಡಾ. ನಿರುಪಮಾ** ಅವರು ೧೯೩೩ ರಲ್ಲಿ ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಹೊಳವನಹಳ್ಳಿಯಲ್ಲಿ ಜನಿಸಿದರು. ಸಂಸ್ಕೃತ, ತೆಲುಗು, ಕನ್ನಡ, ಇಂಗ್ಲಿಷ್, ಹಿಂದಿ, ಬಂಗಾಲಿ ಭಾಷೆಗಳನ್ನು ಚೆನ್ನಾಗಿ ಬಲ್ಲ ಇವರು ವಿವಿಧ ಭಾಷೆಗಳ ಉತ್ತಮ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವುಗಳಲ್ಲಿ ಪ್ರಮುಖ ಕೃತಿಗಳೆಂದರೆ **'ಅಮೃತಕಲಶ', 'ಪರಿತ್ಯಕ್ತೆ', 'ಭುವನ ವಿಜಯ'** ಇವು ಕಾದಂಬರಿಗಳು. **'ಭಾರತೀಯ ನಾರಿ ನಡೆದು ಬಂದ ದಾರಿ', 'ಭಾವಮುಖಿ'** ಇವು ಸಂಕಲನ ಕೃತಿಗಳು, **'ರಣಹದ್ದು', 'ಅಧಿಕಾರಿಗಳ ಅವಾಂತ್ರ'** ಇವು ನಾಟಕಗಳು, **'ಮಕ್ಕಳ ಸಾಹಿತ್ಯ-೨೫', 'ಕರ್ನಾಟಕದ ಕವಯಿತ್ರಿಗಳು'** ಇನ್ನು ಮುಂತಾದವು.

ಇವರಿಗೆ ಯೂನಿಸೆಫ್ ಮಕ್ಕಳ ಸಾಹಿತ್ಯ, ಶಾಶ್ವತ ಸಂಸ್ಥೆಯ "ಸದೋದಿತಾ" ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಅನುಪಮಾ ಪ್ರಶಸ್ತಿ, ಸಾಹಿತ್ಯ ಶಿರೋಮಣಿ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿಗಳು ಲಭಿಸಿವೆ. 'ಬುದ್ಧನ ಸಲಹೆ' ಕಥೆಯನ್ನು **'ಶತಮಾನದ ಮಕ್ಕಳ ಸಾಹಿತ್ಯ'** ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

©KTBS
Not to be republished

## ಅಭ್ಯಾಸ

### I. ಪದಗಳ ಅರ್ಥ ತಿಳಿಯಿರಿ :

**ಅಮೂಲ್ಯ** – ಬೆಲೆಕಟ್ಟಲಾಗದ

**ಅಸೂಯೆ** – ಹೊಟ್ಟೆಕಿಚ್ಚು

**ಈರ್ಷ್ಯೆ** – ಅಸೂಯೆ; ಹೊಟ್ಟೆಕಿಚ್ಚು.

**ಉತ್ಕಟ** – ಅಧಿಕ; ಪ್ರಬಲವಾದ.

**ಕವಲು** – ಭಿನ್ನತೆ; ಎರಡು ಭಾಗ.

**ತೆಪ್ಪಗೆ** – ಸುಮ್ಮನೆ; ಮಾತಿಲ್ಲದೆ.

**ತೆಪ್ಪಗಾಗು** – ಸುಮ್ಮನಾಗು; ಏನೂ ತಿಳಿಯದಾಗು.

**ದುರಾಸೆ** – ಅತಿ ಆಸೆ; ಕೆಟ್ಟ ಬಯಕೆ.

**ದ್ವೇಷ** – ಹಗೆತನ; ವೈರತ್ವ.

**ನೆರೆಹೊರೆ** – ಸುತ್ತಮುತ್ತ

**ವರ** – ಅನುಗ್ರಹ; ಶ್ರೇಷ್ಠ.

**ವಿಷಮಿಸು** – ನಂಜಾಗು; ವಿಕೋಪಕ್ಕೆ ತಿರುಗು.

**ಸಲಹೆ** –ಬುದ್ಧಿವಾದ; ಮಾರ್ಗದರ್ಶನ.

**ಸುಭಿಕ್ಷೆ** – ಒಳ್ಳೆಯ ಕಾಲ; ಸಮೃದ್ಧಿ.

**ಸ್ವಾರ್ಥ** – ಸ್ವಪ್ರಯೋಜನ; ಸ್ವಹಿತ; ತನಗಾಗಿ.

## II. ಪ್ರಶ್ನೆಗಳು :

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿರಿ.**

೧. ಸಿದ್ಧಾರ್ಥನ ತಂದೆಯ ಹೆಸರು ______________

೨. ವತ್ಸ ಮತ್ತು ಮಗಧ ರಾಜ್ಯಗಳ ನಡುವೆ ಹರಿಯುವ ನದಿ ______________

೩. ವತ್ಸ ಮತ್ತು ಮಗಧ ರಾಜ್ಯಗಳ ನಡುವೆ ಶಾಂತಿ ನೆಲೆಸುವಂತೆ ಮಾಡಿದವರು ______________

೪. 'ಬುದ್ಧನ ಸಲಹೆ' ಪಾಠದ ಆಕರ ಕೃತಿ______________

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಗಂಗಾನದಿ ಎಲ್ಲಿ ಹುಟ್ಟಿ ಯಾವ ಸಮುದ್ರವನ್ನು ಸೇರುತ್ತದೆ?

೨. ಬುದ್ಧನ ಪ್ರಕಾರ ನದಿ ನೀರಿಗಿಂತ ಹೆಚ್ಚು ಬೆಲೆಯುಳ್ಳದ್ದು ಯಾವುದು? ಏಕೆ?

೩. ಬುದ್ಧ ದೇವನು ಹೇಳುವಂತೆ ಜೀವನದಲ್ಲಿ ಸುಖ ಶಾಂತಿ ಸಿಗಬೇಕಾದರೆ ಏನು ಮಾಡಬೇಕು?

೪. ವತ್ಸ ಮತ್ತು ಮಗಧ ರಾಜ್ಯದವರು ಯುದ್ಧವನ್ನು ಏಕೆ ನಿಲ್ಲಿಸಿದರು?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ವತ್ಸ ಮತ್ತು ಮಗಧ ರಾಜ್ಯದ ಜನರು ಗಂಗಾ ನದಿಯನ್ನು ತಾಯಿಯಂತೆ ಏಕೆ ಪೂಜಿಸುತ್ತಿದ್ದರು?

೨. ವತ್ಸ ಮತ್ತು ಮಗಧ ರಾಜ್ಯಗಳ ನಡುವೆ ದ್ವೇಷ ಏಕೆ ಹೆಚ್ಚಾಯಿತು?

೩. ಬುದ್ಧನು ಹೇಳುವಂತೆ ದ್ವೇಷ ದುಃಖವನ್ನು ಹೇಗೆ ಹೆಚ್ಚಿಸುತ್ತದೆ?

೪. ವತ್ಸ ಮತ್ತು ಮಗಧ ರಾಜ್ಯದವರಿಗೆ ಸುಖಶಾಂತಿಯ ಮಹತ್ವವನ್ನು ಬುದ್ಧನು ಹೇಗೆ ಬೋಧಿಸಿದನು?

೫. ಬುದ್ಧ ದೇವನು ವತ್ಸ ಮತ್ತು ಮಗಧ ರಾಜ್ಯಗಳ ನಡುವಿನ ಯುದ್ಧವನ್ನು ಏಕೆ ತಪ್ಪಿಸಿದನು?

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ವತ್ಸ ಮತ್ತು ಮಗಧ ರಾಜ್ಯಗಳು ಯುದ್ಧ ಮರೆತು ಶಾಂತಿಯಿಂದ ನೆಲೆಸಿದುದು ಹೇಗೆ?

೨. ಬದುಕಿನಲ್ಲಿ ಸುಖ ಶಾಂತಿ ನೆಮ್ಮದಿಗಳನ್ನು ಕಂಡುಕೊಳ್ಳುವುದು ಹೇಗೆ? ಚರ್ಚಿಸಿ.

**ಉ) ಸಂದರ್ಭದೊಡನೆ ವಿವರಿಸಿರಿ.**

೧. 'ಮನುಷ್ಯನ ರಕ್ತ ನದಿ ನೀರಿಗಿಂತ ಬೆಲೆಯುಳ್ಳದ್ದು.'

೨. 'ನೀವು ಜೀವಿಸಬೇಕೆಂದಿದ್ದೀರಲ್ಲವೆ? ಮತ್ತೆ ಸಾಯಲೇಕೆ ಸಿದ್ಧರಾಗಿದ್ದೀರಿ?'

೩. 'ಪ್ರಕೃತಿ ಜೀವಿಗಳಿಗೆ ವರವೇ ಹೊರತು ಶಾಪವಲ್ಲ.'

©KTBS Not to be republished



ಎಡವಿದ ಕಾಲಿಗಿಂತ, ಎಡವಿದ ನಾಲಿಗೆ ಅಪಾಯ.

## III. ಭಾಷಾಭ್ಯಾಸ :

**ಅ) ಸ್ವರಾಕ್ಷರಗಳಿಂದ ಆರಂಭಗೊಳ್ಳುವ ಪದಗಳನ್ನು 'ಬುದ್ಧನ ಸಲಹೆ' ಪಾಠದಿಂದ ಆಯ್ದು ಅವುಗಳನ್ನು ಅಕಾರಾದಿಯಾಗಿ ಜೋಡಿಸಿ ಬರೆಯಿರಿ.**

**ಉದಾ :** ಅದನ್ನು
ಅರಸು
ಉತ್ತರ

**ಆ) 'ಬುದ್ಧನ ಸಲಹೆ' ಪಾಠದಲ್ಲಿ ಅನುಸ್ವಾರ ವಿಸರ್ಗಗಳಿಂದ ಕೂಡಿರುವ ಪದಗಳನ್ನು ಆಯ್ದು ಬರೆಯಿರಿ.**

**ಉದಾ :** ಗಂಗಾ, ಒಂದು, ದುಃಖ, ಪುನಃ.....

**ಇ) ಪ್ರಸ್ತುತ ಪಾಠದಲ್ಲಿ ಸ, ಶ, ಷ ಅಕ್ಷರಗಳಿರುವ ಪದಗಳನ್ನು ಪಟ್ಟಿಮಾಡಿ ಅವುಗಳ ಸ್ಪಷ್ಟ ಉಚ್ಚಾರಣೆಯನ್ನು ಅಭ್ಯಾಸ ಮಾಡಿರಿ.**

**ಉದಾ :** ಸಸ್ಯಶ್ಯಾಮಲೆ, ಸನ್ಯಾಸ, ದೇಶ, ಸುಖ, ಶಾಂತಿ, ಈರ್ಷ್ಯೆ.

©KTBS
Not to be republished

**ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಮೌಲ್ಯ, ಸುಖ, ವರ, ಸತ್ಯ, ಪವಿತ್ರ, ಸ್ವಾರ್ಥ.

**ಉ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.**

ಹಿಂಜರಿಕೆ, ವಿವೇಕ, ಸ್ವಾರ್ಥ, ಸುಖಶಾಂತಿ, ಸುಭಿಕ್ಷೆ, ಸಸ್ಯಶ್ಯಾಮಲ.

**ಊ) ಈ ಕೆಳಗಿನ ಹೇಳಿಕೆಯ ಮೇಲೆ ತರಗತಿಯಲ್ಲಿ ಚರ್ಚೆ ನಡೆಸಿರಿ.**

೧. ದ್ವೇಷದಿಂದ ದ್ವೇಷವನ್ನು ಜಯಿಸಲು ಹೋದರೆ ಕೊನೆಗೆ ಉಳಿಯುವುದು ಈರ್ಷ್ಯೆಯೇ.

೨. ಯುದ್ಧದಿಂದ ಶಾಂತಿ ನಾಶವಾಗುತ್ತದೆ.

೩. ಮನುಷ್ಯನ ರಕ್ತ ನದಿ ನೀರಿಗಿಂತ ಬೆಲೆಯುಳ್ಳದ್ದು.

೪. ಪ್ರಕೃತಿ ಜೀವಿಗಳಿಗೆ ವರವೇ ಹೊರತು ಶಾಪವಲ್ಲ.



ಮನಸ್ಸು ಮಲಿನವಾದರೆ ಮನುಷ್ಯನೇ ಮಲಿನವಾದಂತೆ.

# IV. ಸೈದ್ಧಾಂತಿಕ ವ್ಯಾಕರಣ :

**ಕನ್ನಡ ವರ್ಣಮಾಲೆಯಲ್ಲಿ ಒಟ್ಟು ೪೯ ಅಕ್ಷರಗಳಿವೆ. ಅವುಗಳಲ್ಲಿ ಮೂರು ಭಾಗಗಳಿವೆ.**

| | |
|---|---|
| ೧. ಸ್ವರಗಳು | – ೧೩ |
| ೨. ಯೋಗವಾಹಗಳು | – ೦೨ |
| ೩. ವ್ಯಂಜನಗಳು | – ೩೪ |
| **ಒಟ್ಟು** | **– ೪೯** |

## ೧. ಸ್ವರಗಳು : (೧೩)

ಸರಳವಾಗಿ, ಸ್ವತಂತ್ರವಾಗಿ, ಸಹಜವಾಗಿ ಉಚ್ಚರಿಸಲು ಬರುವ ಅಕ್ಷರಗಳೇ ಸ್ವರಗಳು. ಕನ್ನಡದಲ್ಲಿ ಒಟ್ಟು ೧೩ ಸ್ವರಾಕ್ಷರಗಳಿವೆ. ಅವುಗಳನ್ನು ಈ ಕೆಳಗಿನಂತೆ ಎರಡು ಭಾಗಗಳಾಗಿ ವಿಂಗಡಿಸಿದೆ.

**ಹ್ರಸ್ವಸ್ವರ (೬)** – ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು ಹ್ರಸ್ವ ಸ್ವರಗಳು ಎನ್ನುತ್ತೇವೆ.
**ಉದಾ :** ಅ, ಇ, ಉ, ಋ, ಎ, ಒ.

**ದೀರ್ಘಸ್ವರ (೭)** – ಎರಡು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು ದೀರ್ಘ ಸ್ವರಗಳು ಎನ್ನುತ್ತೇವೆ.
**ಉದಾ :** ಆ, ಈ, ಊ, ಏ, ಐ, ಓ, ಔ.

©KTBS Not to be republished

## ೨. ಯೋಗವಾಹಗಳು : (೨)

ಸ್ವರಗಳ ಸಂಬಂಧ ಪಡೆದು ಉಚ್ಚರಿಸಲ್ಪಡುವ ಅಕ್ಷರಗಳು. ಇವು ಕನ್ನಡದಲ್ಲಿ ಎರಡು ಇವೆ.
ಉದಾ : ಂ (ಅನುಸ್ವಾರ) ಃ (ವಿಸರ್ಗ)

## ೩. ವ್ಯಂಜನಗಳು : (೩೪)

ಸ್ವರಗಳ ಸಹಾಯದಿಂದ ಉಚ್ಚರಿಸುವ ಅಕ್ಷರಗಳೇ ವ್ಯಂಜನಗಳು. ಇವುಗಳಲ್ಲಿ ಎರಡು ಪ್ರಕಾರಗಳಿವೆ. ಅವುಗಳೆಂದರೆ,

೧. ವರ್ಗೀಯ ವ್ಯಂಜನಗಳು (೨೫)
೨. ಅವರ್ಗೀಯ ವ್ಯಂಜನಗಳು (೯)



ಹತ್ತು ದೇವರನ್ನು ಪೂಜಿಸುವ ಮುನ್ನ, ಹೆತ್ತ ತಾಯಿಯನ್ನು ಪೂಜಿಸು.

**ವರ್ಗೀಯ ವ್ಯಂಜನಗಳಲ್ಲಿ ಮೂರು ವಿಭಾಗಗಳಿವೆ :**

೧) **ಅಲ್ಪಪ್ರಾಣ ಅಕ್ಷರಗಳು :** ಕಡಿಮೆ ಉಸಿರಿನಿಂದ ಉಚ್ಚರಿಸುವ ಅಕ್ಷರಗಳು
ಕ್, ಚ್, ಟ್, ತ್, ಪ್ ಹಾಗೂ ಗ್, ಜ್, ಡ್, ದ್, ಬ್
(ಪ್ರತಿ ವರ್ಗದಲ್ಲಿ ಒಂದು ಮತ್ತು ಮೂರನೆಯ ಅಕ್ಷರಗಳು) = ೧೦

೨) **ಮಹಾಪ್ರಾಣ ಅಕ್ಷರಗಳು :** ಹೆಚ್ಚು ಉಸಿರಿನಿಂದ ಉಚ್ಚರಿಸುವ ಅಕ್ಷರಗಳು
ಖ್, ಛ್, ಠ್, ಥ್, ಫ್ ಹಾಗೂ ಘ್, ಝ್, ಢ್, ಧ್, ಭ್
(ಪ್ರತಿ ವರ್ಗದಲ್ಲಿ ಎರಡು ಮತ್ತು ನಾಲ್ಕನೆಯ ಅಕ್ಷರಗಳು) = ೧೦

೩) **ಅನುನಾಸಿಕ ಅಕ್ಷರಗಳು :** ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳು
ಙ, ಞ, ಣ, ನ, ಮ
(ಪ್ರತಿ ವರ್ಗದ ಐದನೆಯ ಅಕ್ಷರಗಳು) = ೦೫

**ಅವರ್ಗೀಯ ವ್ಯಂಜನಗಳು :** ಒಂದು ನಿರ್ದಿಷ್ಟ ವರ್ಗಕ್ಕೆ ಸೇರಿಸಲು ಸಾಧ್ಯವಾಗದ ವ್ಯಂಜನಗಳೇ ಅವರ್ಗೀಯ ವ್ಯಂಜನಗಳು.
ಯ್, ರ್, ಲ್, ವ್, ಶ್, ಷ್, ಸ್, ಹ್, ಳ್ = ೦೯

©KTBS Not to be republished

## V. ಚಟುವಟಿಕೆಗಳು :

೧. 'ಬುದ್ಧನ ಸಲಹೆ' ಪಾಠವನ್ನು ರೂಪಕವಾಗಿ ತರಗತಿಯಲ್ಲಿ ಅಭಿನಯಿಸಿರಿ.

೨. ಪ್ರಚಲಿತ ಯಾವುದಾದರೊಂದು ಸಮಸ್ಯೆಗೆ ಶಾಂತಿ ಹಾಗೂ ತಾಳ್ಮೆಯಿಂದ ಯಾವ ರೀತಿ ಪರಿಹಾರ ಕಂಡುಕೊಳ್ಳಬಹುದು ಎಂಬುದನ್ನು ಚರ್ಚೆಯ ಮೂಲಕ ತೀರ್ಮಾನಿಸಿ.

# ೨. ಕನಸು ಮತ್ತು ಸಂದೇಶ

T2W4S4

**ಮೂಲ:** ಎ.ಪಿ.ಜೆ. ಅಬ್ದುಲ್ ಕಲಾಂ
**ಕನ್ನಡಕ್ಕೆ:** ಜಯಕೃಷ್ಣ ಟಿ.ಎನ್.

**ಪಾಠ ಪ್ರವೇಶ :** ಉತ್ತಮ ಬಾಳ್ವೆ ನಡೆಸುವ ಕನಸು ಹಾಗೂ ಅದನ್ನು ಸಾಕಾರಗೊಳಿಸುವ ಅಂತಃಶಕ್ತಿ, ಸಾಮರ್ಥ್ಯ ಎಲ್ಲರಲ್ಲೂ ಇರುತ್ತದೆ. ನಮ್ಮ ಮನಸ್ಸು ಜಾಗೃತಾವಸ್ಥೆ ಹಾಗೂ ನಿದ್ರಾವಸ್ಥೆಯಲ್ಲೂ ಒಳ್ಳೆಯ ಕೆಲಸಗಳಿಗೆ ತುಡಿಯುತ್ತಿರುತ್ತದೆ. ಭಾರತೀಯರಲ್ಲಿ ಪ್ರತಿಭೆ ಇದೆ, ಮೇಧಾಶಕ್ತಿ ಇದೆ, ಸಂಪನ್ಮೂಲಗಳಿವೆ. ಆದರೂ ಭಾರತವೇಕೆ ಇನ್ನೂ ಅಭಿವೃದ್ಧಿ ಸಾಧಿಸಿಲ್ಲ? ನಾವು ಎಲ್ಲಿ ತಪ್ಪಿದ್ದೇವೆ? ನಮ್ಮಲ್ಲಿರುವ ಕೊರತೆಗಳೇನು? ಇವು ಎಲ್ಲರನ್ನೂ ಕಾಡುತ್ತಿರುವ ಪ್ರಶ್ನೆಗಳು. ಅದಕ್ಕಾಗಿ ನಮ್ಮ ರಾಷ್ಟ್ರಪತಿಯಾಗಿದ್ದ ಅಬ್ದುಲ್ ಕಲಾಂ ಅವರು "ಕನಸುಗಳನ್ನು ಕಾಣಿರಿ, ಕನಸುಗಳು ಭೂತ, ಭವಿಷ್ಯ ಹಾಗೂ ವರ್ತಮಾನದ ಅನುಭವಗಳನ್ನು ಕಟ್ಟಿಕೊಡುತ್ತವೆ. ಜೊತೆಗೆ ನಮ್ಮ ಬದುಕಿಗೆ ಸ್ಫೂರ್ತಿಯ ಸಂದೇಶಗಳಾಗಿರುತ್ತವೆ" ಎಂದಿದ್ದಾರೆ. ಕಲಾಂ ಅವರು ಕಂಡ ಕನಸುಗಳಲ್ಲಿ ಭಾರತದ ಭವಿಷ್ಯವಿದೆ, ಮನುಕುಲದ ಪ್ರೀತಿ ಇದೆ. ಮಾನವ ಕುಲವನ್ನು ಕಟ್ಟಬೇಕಾಗಿರುವುದು ಪ್ರೀತಿಯ ನೆಲೆಗಟ್ಟಿನ ಮೇಲೆ. "ಶಾಂತಿ ನೆಮ್ಮದಿಯ ಸಾಮ್ರಾಜ್ಯ ನಿರ್ಮಾಣವೇ ನಿಜವಾದ ಗೆಲುವು" ಎನ್ನುವ ದಿವ್ಯ ಸಂದೇಶವನ್ನು ಕಲಾಂ ನೀಡಿದ್ದಾರೆ.

©KTBS Not to be republished

**"ಕನಸು ಕಾಣಿರಿ, ಕನಸು ಕಾಣಿರಿ, ಕನಸು ಕಾಣಿರಿ**
**ಕನಸುಗಳು ಯೋಚನೆಗಳ ರೂಪ ತಳೆಯುತ್ತವೆ**
**ಆ ಯೋಚನೆಗಳು ಕಾರ್ಯರೂಪಕ್ಕಿಳಿಯುತ್ತವೆ"**

ಅದು ೨೦೦೧ ರ ಸೆಪ್ಟೆಂಬರ್ ೩೦. ನಾನು ಜಾರ್ಖಂಡ್ ರಾಜ್ಯದ ರಾಂಚಿಯಿಂದ ಬೊಕಾರೋಗೆ ಪಯಣಿಸುತ್ತಿದ್ದೆ. ನನ್ನನ್ನು ಕರೆದೊಯ್ಯುತ್ತಿದ್ದ ಹೆಲಿಕಾಪ್ಟರ್ ಇನ್ನೇನು ಭೂಸ್ಪರ್ಶ ಮಾಡಬೇಕೆನ್ನುವಷ್ಟರಲ್ಲಿ ಭಾರೀ ಸದ್ದಿನೊಂದಿಗೆ ನೆಲಕ್ಕಪ್ಪಳಿಸಿತು. ಅದರ ಎಂಜಿನ್‌ನಲ್ಲಿ ಏನೋ ದೋಷ ಕಾಣಿಸಿಕೊಂಡಿತ್ತು.

ನಾವು ನಿಜಕ್ಕೂ ಅದೃಷ್ಟ ಮಾಡಿರಬೇಕು! ಎಲ್ಲರೂ ಪವಾಡಸದೃಶ ರೀತಿಯಲ್ಲಿ ಬದುಕಿ ಉಳಿದಿದ್ದೆವು! ಅಂದು ದೇವರಿಗೆ ನಾವು ಎಷ್ಟು ಕೃತಜ್ಞತೆ ಹೇಳಿದೆವೋ!

ಆ ಅನಿರೀಕ್ಷಿತ ಆಘಾತದ ನಡುವೆಯೂ ನಾನು ನನ್ನ ನಿಗದಿತ ಕಾರ್ಯಕ್ರಮವನ್ನು ಮುಂದುವರಿಸಿದೆ. ಮೊದಲೇ ನಿಗದಿಯಾದಂತೆ ಬೊಕಾರೋದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದೆ.


ಆದರೆ, ವೈದ್ಯರು ಬಿಡಬೇಕಲ್ಲ! ನನ್ನಲ್ಲಿ ಇನ್ನೂ ಮನೆ ಮಾಡಿದಂತಿದ್ದ ಆಘಾತ, ಉದ್ವೇಗವನ್ನು ನಿವಾರಿಸಲು ಔಷಧಿಯೊಂದನ್ನು ತೆಗೆದುಕೊಳ್ಳುವಂತೆ ವೈದ್ಯರ ತಂಡವೊಂದು ನನ್ನನ್ನು ಒತ್ತಾಯಿಸಿತು. ಸಾಮಾನ್ಯವಾಗಿ ರಾತ್ರಿ ಒಂದು ಗಂಟೆಗಿಂತ ಮೊದಲು ನಾನು ನಿದ್ರಿಸಿದವನೇ ಅಲ್ಲ. ಆದರೆ, ಆ ಔಷಧಿಯ ಪ್ರಭಾವದಿಂದಲೋ ಏನೋ – ಆ ರಾತ್ರಿ ಕೆಲಗಂಟೆ ಮೊದಲೇ ನಾನು ನಿದ್ದೆಗೆ ಜಾರಿಹೋಗಿದ್ದೆ. ಬೆಳಗ್ಗೆ ಸಾಮಾನ್ಯವಾಗಿ ಆರು ಗಂಟೆಗೇ ಏಳುತ್ತಿದ್ದವನು ಅಂದು ಏಳುವಾಗ ಎಂಟು ದಾಟಿತ್ತು!

ಅದೇನೇ ಇರಲಿ, ಅದು ಸವಿನಿದ್ದೆಯಂತೂ ಆಗಿರಲಿಲ್ಲ! ಮಧ್ಯೆ ಮಧ್ಯೆ ಎಚ್ಚರಗೊಳ್ಳುತ್ತಿದ್ದೆ. ಏನೇನೋ ಯೋಚನೆಗಳು ಸುಳಿದಾಡುತ್ತಿದ್ದವು. ಆ ದೇವರ ಸೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠವಾದುದೆನ್ನಲಾದ ಮಾನವ ಕುಲ ಏಕೆ ಇಷ್ಟೊಂದು ವಿಭಜಿತವಾಗಿದೆ? ಇಷ್ಟೊಂದು ಹಿಂಸಾಚಾರಗಳಲ್ಲಿ ಏಕೆ ತೊಡಗಿಸಿಕೊಳ್ಳುತ್ತಿದೆ?..... ಹೀಗೆ ಏನೇನೋ ಯೋಚನೆಗಳು.

ಅಷ್ಟರಲ್ಲಿ, ಐವರು ಮಹಾ ಮೇಧಾವಿಗಳು ಏನನ್ನೋ ಮಾತನಾಡುತ್ತಿರುವಂತೆ ಭಾಸವಾಯಿತು. ನನ್ನ ಅತ್ಯಂತ ಮೆಚ್ಚಿನ ಮಹಾಪುರುಷರು ಅವರು. ನಾನು ಆರಾಧಿಸುವಂಥವರು. ಅವರ ಮಾತುಗಳಲ್ಲಿ ನಾನು ಒಂದು ಉತ್ತರಕ್ಕಾಗಿ ಹುಡುಕಾಡಿದೆ.

ಒಂದು ಕನಸಿಗಿಂತ ಎಷ್ಟೋ ಹೆಚ್ಚು ಸ್ಪುಟವಾದ ಆ ಅನುಭವದಲ್ಲಿ, ನಾನು ನನ್ನನ್ನು ಒಂದು ಮರುಭೂಮಿಯಲ್ಲಿ ಕಂಡೆ! ನನ್ನ ಸುತ್ತ ಎತ್ತ ನೋಡಿದರೂ ಬರೀ ಮರಳು! ಮೈಲಿ–ಮೈಲಿಗಟ್ಟಲೆ ಮರಳು, ದೂರ ದಿಗಂತದವರೆಗೂ! ಆಗಸದಲ್ಲಿ ಪೂರ್ಣಚಂದ್ರ, ಮರಳುಗಾಡಿನುದ್ದಕ್ಕೂ ಹಾಲು ಬೆಳದಿಂಗಳು!

©KTBS Not to be republished



ಆ ಐವರು ಮಹಾಪುರುಷರು – ಮಹಾತ್ಮಾ ಗಾಂಧಿ, ಆಲ್ಬರ್ಟ್ ಐನ್‌ಸ್ಟೀನ್, ಚಕ್ರವರ್ತಿ ಅಶೋಕ, ಅಬ್ರಹಾಂ ಲಿಂಕನ್ ಮತ್ತು ಖಲೀಫ ಉಮರ್ ಎದುರುಬದುರಾಗಿ ಸುತ್ತುವರಿದು ನಿಂತಿದ್ದರು. ಸುಯ್ಯೆಂದು ಬೀಸುತ್ತಿದ್ದ ಹಿತವಾದ ಗಾಳಿಗೆ ಅವರ ದಿರಿಸುಗಳೆಲ್ಲ ಓಲಾಡುತ್ತಿದ್ದವು.

ಘನಗಾಂಭೀರ್ಯದ ಸಾಕಾರಮೂರ್ತಿ ಚಕ್ರವರ್ತಿ ಅಶೋಕನ ಪಕ್ಕದಲ್ಲೇ ನಿಂತಿದ್ದೆ ನಾನು! ಅವನೆದುರು ನಾನು ತೀರಾ ಕುಬ್ಜನಾದಂತೆ ಅನ್ನಿಸಿತು. ಅಶೋಕ ಎರಡು ಬಗೆಯ ಬದುಕು ಸಾಗಿಸಿದವನು. ಒಂದು ನಿರ್ದಯಿ ಆಕ್ರಮಣಕಾರನಾಗಿ ಹಾಗೂ ಇನ್ನೊಂದು ದಯಾಮಯಿ ಆಡಳಿತಗಾರನಾಗಿ. ನನ್ನ ಬಳಿ ನಿಂತಿದ್ದ ಅಶೋಕ ಆಗ ತಾನೇ ದಿಗ್ವಿಜಯ ಸಾಧಿಸಿ ಮರಳಿ ಬಂದಂತಿದ್ದ. ಆದರೆ ಆ ವಿಜಯಕ್ಕೆ ಭಾರೀ ಬೆಲೆ ತೆತ್ತಿದ್ದ! ಜಯಕ್ಕಾಗಿ ಸಹಸ್ರಾರು ಜನರ ಆಹುತಿ ಪಡೆದಿದ್ದ! ಆ ಕಳಿಂಗ ಸಮರವು ಕಡಿಮೆಯೆಂದರೂ ಮೂರು ಲಕ್ಷ ಜನರ ಬಲಿ ತೆಗೆದುಕೊಂಡಿತ್ತು. ಅಷ್ಟೇ ಸಂಖ್ಯೆಯ ಜನ ತಮ್ಮ ಅಂಗಾಂಗಗಳನ್ನು ಕಳೆದುಕೊಂಡಿದ್ದರು. ಆ ಮರಳುಗಾಡಿನಲ್ಲಿ ಎಲ್ಲರೂ ಚಕ್ರವರ್ತಿ ಅಶೋಕನನ್ನೇ ದಿಟ್ಟಿಸಿ ನೋಡುತ್ತಿದ್ದರು. ಅಷ್ಟರಲ್ಲಿ, ಅಶೋಕ ಮಂಡಿಯೂರಿ ಕುಳಿತು ಯುದ್ಧ ಕವಚ ಮತ್ತು ಕಿರೀಟವನ್ನು ಕಳಚಿಟ್ಟ. ಆತನ ಮುಖ ಯಾಕೋ ಕಳೆಗುಂದಿತ್ತು. ಅಸಂಖ್ಯ ಜನರ ಸಾವುನೋವಿನಿಂದ ಆತ ಚಿಂತಿತನಾದಂತೆ ಕಂಡುಬರುತ್ತಿತ್ತು.

ಚಕ್ರವರ್ತಿ ಅಶೋಕ ಹಾಗೆಯೇ ಕುಳಿತು ಆಗಸದತ್ತ ನೋಟ ಬೀರಿದ. ಮಂದಪ್ರಕಾಶ ಬೀರುತ್ತಿದ್ದ ಪ್ರಶಾಂತ ಪೂರ್ಣಚಂದ್ರನನ್ನು ಕಂಡ. ತಾಯಿ ಧರಣಿಯ ಮೇಲೆ ದೇವರ ಕೃಪಾದೃಷ್ಟಿ ಹರಿಯುತ್ತಿದ್ದುದನ್ನು ಕಂಡ. ಕೆಳಗೆ ನೋಡಿದರೆ, ತಾನು ಸೃಷ್ಟಿಸಿದ ಬೀಭತ್ಸ ದೃಶ್ಯ! ಎಲ್ಲೆಲ್ಲೂ ರಕ್ತದ ಕೋಡಿ! ತನ್ನ ಕೃತ್ಯವನ್ನು ನೆನೆನೆನೆದು ಚಕ್ರವರ್ತಿ ಅಶೋಕ ಅಸಾಧ್ಯ ಯಾತನೆಪಟ್ಟ.

©KTBS Not to be republished

ರಮ್ಯ ಮನೋಹರ ಮತ್ತು ಬೀಭತ್ಸ ದೃಶ್ಯಗಳ ಸಮಾಗಮದ ಆ ಕ್ಷಣದಲ್ಲಿ – ಅಶೋಕನ ಕೃತ್ಯದ ಬಗ್ಗೆ ಸ್ವತಃ ನಿಸರ್ಗವೇ ಅಸಹನೆ ವ್ಯಕ್ತಪಡಿಸುತ್ತಿರುವಂತೆ ಕಂಡುಬಂದ ಆ ಕ್ಷಣದಲ್ಲಿ – 'ಅಹಿಂಸಾ ಧರ್ಮ'ದ ಉದಯವಾಯಿತು. ಚಕ್ರವರ್ತಿ ಅಶೋಕ ದೇವರ ಆದೇಶವನ್ನು ಶಿರಸಾವಹಿಸಿದ, 'ಅಹಿಂಸಾ ಪರಮೋ ಧರ್ಮಃ' ಸಿದ್ಧಾಂತದ ಮೂಲಕ ಮಾನವ–ಮಾನವ ನಡುವಣ ಪ್ರೀತಿಯ ಮಹತ್ವವನ್ನು ಸಾರಲು ಉದ್ಯುಕ್ತನಾದ.

ನಾನು ನಿಂತಲ್ಲೇ ಒಂದು ಕ್ಷಣ ಗಂಭೀರವಾಗಿ ಯೋಚಿಸಿದೆ. ಆ ಕಳಿಂಗ ಯುದ್ಧವಾದರೂ ಯಾಕಾಯಿತು? ಮಹಾತ್ಮಾ ಗಾಂಧಿ, ಅಬ್ರಹಾಂ ಲಿಂಕನ್ ಮತ್ತು ಅವರಂಥ ಅನೇಕ ಮಹಾಪುರುಷರ ಹತ್ಯೆಯಾದರೂ ಯಾಕಾಯಿತು? ಆ ದೇವರು ತನ್ನ ಸೃಷ್ಟಿಯಲ್ಲಿ ಏನಾದರೂ ತಪ್ಪೆಸಗಿರುವನೇ? ಅಥವಾ ಎರಡನೇ ಸೃಷ್ಟಿಗಾಗಿ ಈ ಮಾನವ ಕುಲದ ನಾಶ ಅನಿವಾರ್ಯವೇ?


ಹಿತವಾದ ಆ ನೀರವತೆಯ ಮಧ್ಯೆ ಮಹಾತ್ಮಾ ಗಾಂಧಿ ಮಾತನಾಡತೊಡಗುತ್ತಾರೆ– 'ಸ್ನೇಹಿತರೆ, ನಮಗೆ ಕೇಳಿಬರುತ್ತಿರುವ ದಿವ್ಯ ಸಂದೇಶವು ಆ ಸೃಷ್ಟಿಕರ್ತನದು. ಇಲ್ಲಿ ನೆರೆದ ನಾವೆಲ್ಲರೂ ಭೂಗ್ರಹಕ್ಕೆ ಸೇರಿದವರಾಗಿರುವುದರಿಂದ ಇಡೀ ಮಾನವ ಕುಲಕ್ಕೆ ನಾವು ಆ ಸಂದೇಶವನ್ನು ತಲುಪಿಸಬೇಕಾಗಿದೆ.

ನಾನಾ ಜಾತಿ–ಜನಾಂಗ, ಮತ–ಧರ್ಮ ಹಾಗೂ ಭಾಷೆಗಳ ಜನರು ಶಾಂತಿ ನೆಮ್ಮದಿಯಿಂದ, ಏಳಿಗೆ ಸಾಧಿಸುತ್ತಾ ಹೇಗೆ ಬಾಳಬಹುದು ಎಂಬುದನ್ನು ನಾವು ತಿಳಿಸಿಕೊಡಬೇಕಾಗಿದೆ. ಆ ದೇವರು ನಮ್ಮೆಲ್ಲರಿಗೂ ವಿಶಿಷ್ಟವಾದುದೇನನ್ನೋ ದಯಪಾಲಿಸಿದ್ದಾನೆ. ಅದನ್ನು ನಾವು ನಮ್ಮ ಸತ್ಕಾರ್ಯಗಳು ಹಾಗೂ ಶ್ರಮದ ಮೂಲಕ ಮಾನವಕುಲಕ್ಕೆ ತಲುಪಿಸಿದ್ದೂ ಆಗಿದೆ. ಆದರೆ, ಅದು ಪರಿಣಾಮ ಬೀರಿದೆಯೇ? ಅದಕ್ಕಾಗಿ ಯಾವುದಾದರೂ ದಿವ್ಯ ಸಂದೇಶ ಅಥವಾ ತತ್ವ ಇದೆಯೇ? ದೈವಿಕ ಸೌಂದರ್ಯವು ಮಾನವನ ಹೃದಯವನ್ನು ಪ್ರವೇಶಿಸುವಂತಾಗಬೇಕು. ಇದು ಸಾಧ್ಯವೇ?'

ಆಗ ಅಶೋಕ "ಗೆಳೆಯರೇ, ಒಂದು ವಿಷಯವನ್ನಂತೂ ನಾನೀಗ ಚೆನ್ನಾಗಿ ಅರ್ಥ ಮಾಡಿಕೊಂಡಿರುವೆ. ಜಯ ಎಂಬುದು ಸಾವುನೋವು ಉಂಟುಮಾಡುವುದರಲ್ಲಿಲ್ಲ. ಶಾಂತಿ ನೆಮ್ಮದಿಯ ಸಾಮ್ರಾಜ್ಯ ನಿರ್ಮಾಣವೇ ನಿಜವಾದ ಗೆಲುವು" ಎಂದು ಹೇಳುತ್ತಾನೆ.

* * * *

## ಕೃತಿಕಾರರ ಪರಿಚಯ :



**ಎ.ಪಿ.ಜೆ. ಅಬ್ದುಲ್ ಕಲಾಂ** ಅವರು **ತಮಿಳುನಾಡಿನ ರಾಮೇಶ್ವರದಲ್ಲಿ ದಿನಾಂಕ ೧೫ ನೇ ಅಕ್ಟೋಬರ್ ೧೯೩೧** ರಂದು ಜನಿಸಿದರು. ಇವರ ಪೂರ್ಣ ಹೆಸರು **ಅವುಲ್ ಫಕೀರ್ ಜೈನುಲಬ್ದೀನ್ ಅಬ್ದುಲ್ ಕಲಾಂ**. ಕಲಾಂ ಅವರು ಮದ್ರಾಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಏರೋನಾಟಿಕಲ್ ಎಂಜಿನಿಯರಿಂಗ್ ಪದವಿ ಪಡೆದ ಬಳಿಕ ಇಸ್ರೋ ಮತ್ತು ಡಿ.ಆರ್.ಡಿ.ಒ.ದಲ್ಲಿ ಕಾರ್ಯನಿರ್ವಹಿಸಿದರು. ನಂತರ ಭಾರತದ ೧೧ ನೇ ರಾಷ್ಟ್ರಪತಿಯಾಗಿ ೨೨ ನೇ ಜುಲೈ ೨೦೦೨ ರಂದು ಆಯ್ಕೆಯಾದರು. ಸರಳತೆ, ಪ್ರಾಮಾಣಿಕತೆ ಮತ್ತು ಮೇಧಾವಿತನದಿಂದ ನಡೆದುಕೊಂಡು ರಾಷ್ಟ್ರಪತಿ ಹುದ್ದೆಯ ಘನತೆಯನ್ನು ಹೆಚ್ಚಿಸಿದರು.

ಲೇಖಕರಾಗಿದ್ದ ಕಲಾಂ ಅವರು **'ವಿಂಗ್ಸ್ ಆಫ್ ಫೈರ್' (ಆತ್ಮಕಥೆ), 'ಇಂಡಿಯಾ ಮೈ ಡ್ರೀಮ್' 'ಇಂಡಿಯಾ ೨೦೨೦', 'ಮೈ ಜರ್ನಿ', 'ಟಾರ್ಗೆಟ್ ತ್ರಿ ಬಿಲಿಯನ್', 'ಟರ್ನಿಂಗ್ ಪಾಯಿಂಟ್', 'ಇಗ್ನೈಟೆಡ್ ಮೈಂಡ್ಸ್', 'ದಿ ಲೈಫ್ ಟ್ರೀ'** ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವು ಭಾರತದ ಹಲವು ಭಾಷೆಗಳಿಗೆ ತರ್ಜುಮೆಗೊಂಡಿವೆ. ಕಲಾಂ ಅವರ ಸೇವೆಗೆ ಪದ್ಮಭೂಷಣ, ಪದ್ಮವಿಭೂಷಣ ಹಾಗೂ ದೇಶದ ಅತ್ಯುನ್ನತ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಸುಮಾರು ೩೦ ವಿಶ್ವವಿದ್ಯಾನಿಲಯಗಳು ಕಲಾಂ ಅವರಿಗೆ ಗೌರವ ಡಾಕ್ಟರೇಟ್ ನೀಡಿವೆ. ಇವರು ದಿನಾಂಕ ೨೭ ಜುಲೈ ೨೦೧೫ ರಂದು ಉಪನ್ಯಾಸ ನೀಡುತ್ತಿರುವ ಸಂದರ್ಭದಲ್ಲಿ ಹೃದಯಾಘಾತದಿಂದ ಅಸುನೀಗಿದರು.

ಪ್ರಸ್ತುತ ಗದ್ಯಭಾಗವನ್ನು ಎ.ಪಿ.ಜೆ ಅಬ್ದುಲ್ ಕಲಾಂ ಅವರ **'ಪ್ರಜ್ವಲಿತ ದೀಪಗಳು'** ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ. ಈ ಪುಸ್ತಕವನ್ನು ಜಯಕೃಷ್ಣ ಟಿ.ಎನ್. ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ.

©KTBS Not to be republished

**ಅನುವಾದಕರ ಪರಿಚಯ :**

**ಶ್ರೀ ಜಯಕೃಷ್ಣ ಟಿ. ಎನ್**. ಅವರು ಪತ್ರಕರ್ತರಾಗಿದ್ದು, ಡೇಲ್ ಕಾರ್ನೆಗಿ ಅವರ 'ಚಿಂತೆ ಬಿಡಿ: ಹೊಸ ಬದುಕು ಆರಂಭಿಸಿ', 'ಸಮರ್ಥ ನಾಯಕ ನೀವೂ ಆಗಬಲ್ಲಿರಿ!' ಹಾಗೂ ನೆಪೋಲಿಯನ್ ಹಿಲ್ ಅವರ 'ಸಿರಿತನಕ್ಕೆ ಹದಿಮೂರೇ ಹೆಜ್ಜೆ' ಮುಂತಾದ ಅನುವಾದಿತ ಕೃತಿಗಳ ಮೂಲಕ ಕನ್ನಡಿಗರಿಗೆ ಚಿರಪರಿಚಿತರಾಗಿದ್ದಾರೆ.

## ಟಿಪ್ಪಣಿಗಳು :

**ಅಶೋಕ ಚಕ್ರವರ್ತಿ :** (ಕ್ರಿ.ಪೂ. ೩೦೪ – ಕ್ರಿ.ಪೂ. ೨೩೨) ಪ್ರಾಚೀನ ಭಾರತವನ್ನು ಆಳಿದ ಮೌರ್ಯ ಸಾಮ್ರಾಜ್ಯದ ಚಕ್ರವರ್ತಿ. ಅಶೋಕನು ಸದಾ ಯುದ್ಧದಲ್ಲಿ ತೊಡಗಿರುತ್ತಿದ್ದನು. ಈತನು ಕಳಿಂಗದ ಮೇಲೆ ನಡೆಸಿದ ಯುದ್ಧವೇ ಕೊನೆಯದಾಯಿತು. ಕಳಿಂಗ ಯುದ್ಧದ ನಂತರ ಅಶೋಕನು ನಗರ ಪ್ರದಕ್ಷಿಣೆಗೆಂದು ಹೊರಟು ಎಲ್ಲೆಲ್ಲೂ ಸುಟ್ಟು ಹೋದ ಮನೆಗಳನ್ನು, ಚೆಲ್ಲಾಪಿಲ್ಲಿಯಾಗಿ ಬಿದ್ದ ಹೆಣಗಳನ್ನು, ದುಃಖತಪ್ತರನ್ನು ನೋಡಿದನು. ಇದರಿಂದ ಅವನ ಮನಸ್ಸು ಮರುಗಿತು. ಕೊನೆಗೆ ಯುದ್ಧವನ್ನು ತ್ಯಜಿಸಿ, ಬೌದ್ಧಧರ್ಮವನ್ನು ಸ್ವೀಕರಿಸುವ ಮೂಲಕ ಶಾಂತಿ ಪ್ರಿಯನಾದನು.

**ಆಲ್ಬರ್ಟ್ ಐನ್‌ಸ್ಟೀನ್** (೧೮೭೯–೧೯೫೫): ಜಗತ್ತಿನ ಶ್ರೇಷ್ಠ ವಿಜ್ಞಾನಿಯಾದ ಈತ ಜರ್ಮನಿಯ ಉಲ್ಮ್ ಎಂಬಲ್ಲಿ ಜನಿಸಿದನು. ಪರಮಾಣು ಬಾಂಬಿನ ಸಂಶೋಧನೆಗೆ ಮೂಲಕಾರಣವಾದ 'ಸಾಪೇಕ್ಷತಾ ಸಿದ್ಧಾಂತ'ವನ್ನು ಕಂಡುಹಿಡಿದು ಭೌತಶಾಸ್ತ್ರದಲ್ಲಿ ಕ್ರಾಂತಿಕಾರಕ ಅಲೆಯನ್ನು ಎಬ್ಬಿಸಿದನು. ಎರಡನೇ ಜಾಗತಿಕ ಯುದ್ಧದಲ್ಲಿ ಪರಮಾಣು ಬಾಂಬು ಉಂಟುಮಾಡಿದ ಅನಾಹುತ ಕಂಡು ದುಃಖತಪ್ತರಾಗಿ ತಮ್ಮ ಜೀವಿತದ ಕೊನೆಯವರೆಗೆ ಶಾಂತಿ ಸ್ಥಾಪನೆಗಾಗಿ ಶ್ರಮಿಸತೊಡಗಿದರು.

©KTBS Not to be republished

**ಅಬ್ರಹಾಂ ಲಿಂಕನ್** (೧೮೦೯–೧೮೬೫): ಅಮೇರಿಕಾದಲ್ಲಿ ಶಾಪವಾಗಿದ್ದ ಗುಲಾಮಗಿರಿಯನ್ನು ವರ್ಣಭೇದ ನೀತಿಯನ್ನು ತೊಲಗಿಸಲು ಹೋರಾಡಿದ ಧೀರೋದ್ಧಾತ ನಾಯಕ. ಸಾಮಾನ್ಯ ಕುಟುಂಬದಲ್ಲಿ ಜನಿಸಿ, ಗೆಳೆಯರಿಂದ ಪುಸ್ತಕಗಳನ್ನು ಎರವಲಾಗಿ ಪಡೆದು, ಬೀದಿ ದೀಪದ ಬೆಳಕಿನಲ್ಲಿ ಓದಿದವರು. ಇವರು ಅಮೇರಿಕಾದ ರಿಪಬ್ಲಿಕನ್ ಚಳುವಳಿಯಲ್ಲಿ ಧುಮುಕಿ ಅಮೇರಿಕಾದ ಅಧ್ಯಕ್ಷರಾಗಿ ಆಯ್ಕೆಯಾದರು. ಗುಲಾಮಗಿರಿಯನ್ನು ಕಿತ್ತೊಗೆದ ಇವರನ್ನು ಹತ್ಯೆ ಮಾಡಲಾಯಿತು.

**ಖಲೀಫ ಉಮರ್–** ಪೈಗಂಬರ್ ಬಳಿಕ ನೇಮಕಗೊಂಡ ಅರಬ್ಬರ ಆಧ್ಯಾತ್ಮಿಕ ಮತ್ತು ರಾಜಕೀಯ ನಾಯಕ. ಈತನನ್ನು 'ಖಲೀಫ' ಎಂದೂ ಕರೆಯಲಾಗುತ್ತದೆ.

# ಅಭ್ಯಾಸ

## I. ಪದಗಳ ಅರ್ಥ ತಿಳಿಯಿರಿ :

**ಆಘಾತ** – ಪೆಟ್ಟು; ಕೇಡು.
**ಆಹುತಿ** – ಬಲಿ
**ಕುಬ್ಜ** – ಕುಳ್ಳ; ಸಣ್ಣವ.
**ಕೃತ್ಯ** – ಕೆಲಸ
**ದಿರಿಸು** – ಉಡುಪು
**ಧರಣಿ** – ಭೂಮಿ
**ನೀರವತೆ** – ಮೌನ; ನಿಶ್ಯಬ್ದ.
**ಬೀಭತ್ಸ** – ಜುಗುಪ್ಸೆ; ಅಸಹ್ಯ.
**ಮರುಭೂಮಿ** – ಮರಳು ತುಂಬಿದ ಭೂಮಿ.
**ವಿಭಜಿತ** – ಬೇರೆಯಾದ; ವಿಂಗಡಿಸಿದ.
**ಆರಾಧಿಸು** – ಪೂಜಿಸು; ಸ್ಮರಿಸು.
**ಉದ್ಯುಕ್ತ** – ಪ್ರಯತ್ನಿಸು; ಸಿದ್ಧವಾಗು.
**ಕೃತಜ್ಞತೆ** – ಉಪಕಾರ ಸ್ಮರಣೆ
**ದಿಗಂತ** – ಕ್ಷಿತಿಜ
**ದಿಗ್ವಿಜಯ** – ರಾಜ್ಯಗಳನ್ನು ಜಯಿಸುವುದು.
**ನಿರ್ದಯಿ** – ಕ್ರೂರಿ; ದಯೆ ಇಲ್ಲದವ.
**ಪವಾಡಸದೃಶ** – ಆಶ್ಚರ್ಯಕರ ರೀತಿಯಲ್ಲಿ
**ಭಾಸವಾಗು** – ಕಾಣು; ತೋರು, ಅನ್ನಿಸುತ್ತದೆ
**ಮೇಧಾವಿ** – ಬುದ್ಧಿವಂತ.

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಕಲಾಂ ಅವರು ಸಾಮಾನ್ಯವಾಗಿ ನಿತ್ಯ ಎಷ್ಟು ಗಂಟೆಗೆ ಮಲಗಿ, ಎಷ್ಟು ಗಂಟೆಗೆ ಏಳುತ್ತಿದ್ದರು?
೨. ಕಲಾಂ ಅವರು ಕನಸಿನಲ್ಲಿ ಕಂಡ ಪ್ರದೇಶ ಯಾವುದು?
೩. ಕಲಾಂ ಅವರು ಕನಸಿನಲ್ಲಿ ಕಂಡ ಐವರು ಮಹಾಪುರುಷರು ಯಾರು?
೪. ಅಶೋಕನು ಪ್ರತಿಪಾದಿಸಿದ ಧರ್ಮ ಯಾವುದು?
೫. ಅಶೋಕನ ಪ್ರಕಾರ ನಿಜವಾದ ಗೆಲುವು ಯಾವುದು?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕಲಾಂ ಅವರು ರಾಂಚಿಯಿಂದ ಬೊಕಾರೋಗೆ ವಿಮಾನದಲ್ಲಿ ತೆರಳುವಾಗ ಯಾವ ದುರ್ಘಟನೆ ನಡೆಯಿತು?
೨. ಕಲಾಂ ಅವರಿಗೆ ನಿದ್ದೆಯಲ್ಲಿ ಯಾವ ಯಾವ ಯೋಚನೆಗಳು ಸುಳಿದಾಡಿದವು?
೩. ಕಲಾಂ ಅವರು ಕನಸಿನಲ್ಲಿ ಕಂಡ ಪ್ರದೇಶ ಯಾವ ರೀತಿ ಇತ್ತು?
೪. ಅಶೋಕನು ನಡೆಸಿದ ಎರಡು ಬಗೆಯ ಬದುಕು ಯಾವುವು?
೫. ಕಳಿಂಗ ಯುದ್ಧದ ಪರಿಣಾಮವೇನು?

©KTBS Not to be republished



ನಾವು ಎತ್ತರಕ್ಕೆ ಏರಿದ್ದೇವೆ, ಆಳಕ್ಕೆ ಇಳಿದಿದ್ದೇವೆ. ಆದರೆ ಹತ್ತಿರಕ್ಕೆ ಮಾತ್ರ ಬರಲಿಲ್ಲ.

೬. ಕಲಾಂ ಅವರಿಗೆ ಕನಸಿನಲ್ಲಿ ಅಶೋಕನು ಕಂಡದ್ದು ಹೇಗೆ?

೭. ಯುದ್ಧ ಹಾಗೂ ಹತ್ಯೆಯ ಬಗೆಗೆ ಕಲಾಂ ಅವರನ್ನು ಕಾಡಿದ ಪ್ರಶ್ನೆಗಳಾವುವು?

೮. ಕಲಾಂ ಅವರ ಕನಸಿನಲ್ಲಿ ಅಶೋಕನು ಯಾವ ಸಂದೇಶ ನೀಡಿದನು?

೯. ಕನಸಿನ ಬಗ್ಗೆ ಕಲಾಂ ಅವರ ಸಂದೇಶವೇನು?

**ಇ) ಕೆಳಗಿನ ಪ್ರಶ್ನೆಗಳಿಗೆ ಏಳು-ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಅಶೋಕನಲ್ಲಿ ಅಹಿಂಸಾ ಧರ್ಮ ಹೇಗೆ ಉದಯಿಸಿತು?

೨. ಕಲಾಂ ಅವರ ಕನಸಿನಲ್ಲಿ ಮಹಾತ್ಮಾ ಗಾಂಧೀಜಿ ಏನೆಂದು ಮಾತನಾಡಿದರು?

೩. ಮಾನವನ ತನುಮನಗಳಲ್ಲಿ ಸುಖ ಸಂತೋಷ ಅರಳಲು ಏನು ಮಾಡಬೇಕು?

**ಈ) ಸಂದರ್ಭದೊಡನೆ ವಿವರಿಸಿರಿ.**

೧. ನಾವು ನಿಜಕ್ಕೂ ಅದೃಷ್ಟ ಮಾಡಿರಬೇಕು!

೨. ನನ್ನ ಅತ್ಯಂತ ಮೆಚ್ಚಿನ ಮಹಾ ಪುರುಷರು ಅವರು, ನಾನು ಆರಾಧಿಸುವಂಥವರು.

೩. ಅಹಿಂಸಾ ಧರ್ಮದ ಉದಯವಾಯಿತು.

೪. ಶಾಂತಿ ನೆಮ್ಮದಿಯ ಸಾಮ್ರಾಜ್ಯ ನಿರ್ಮಾಣವೇ ನಿಜವಾದ ಗೆಲುವು.

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ದಿಟ್ಟಿಸು, ಪವಾಡಸದೃಶ, ಕೃಪಾದೃಷ್ಟಿ, ಸವಿನಿದ್ದೆ, ಅಹಿಂಸೆ, ಶಿರಸಾವಹಿಸಿ, ಸತ್ಕಾರ್ಯ.

**ಆ) ಕೆಳಗಿನ ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ.**

ಸಹಸ್ರ, ದಿಟ್ಟಿ, ಸೃಷ್ಟಿ, ಕ್ಷಣ, ಧರ್ಮ, ಪಯಣ, ಆಗಸ, ಯುದ್ಧ.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.**

ಕೃತಜ್ಞತೆ, ದಯೆ, ಸತ್ಕಾರ್ಯ, ಅನಿರೀಕ್ಷಿತ, ಅದೃಷ್ಟ, ಹಿಂಸೆ, ಅಸಹನೆ.

**ಈ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ನೆಲಕ್ಕಪ್ಪಳಿಸು, ಅಂಗಾಂಗ, ದಿಗಂತ, ಅತ್ಯಂತ, ದಿಗ್ವಿಜಯ, ಕಳೆಗುಂದು.

**ಉ) ಕೆಳಗಿನ ಪದಗಳಿಗೆ ಸಮನಾರ್ಥಕ ಪದಗಳನ್ನು ಬರೆಯಿರಿ.**

ಯುದ್ಧ, ಭೂಮಿ, ಆರಾಧಿಸು, ಯಾತನೆ.

©KTBS Not to be republished

## IV. ಸೈದ್ಧಾಂತಿಕ ವ್ಯಾಕರಣ :

**೧. ಗುಣಿತಾಕ್ಷರಗಳು :** ವ್ಯಂಜನಗಳಿಗೆ ಸ್ವರಾಕ್ಷರಗಳು ಸೇರಿ ಆಗುವ ಅಕ್ಷರಗಳೆ ಗುಣಿತಾಕ್ಷರಗಳು.

| **ಉದಾ :** | **ವ್ಯಂಜನ** | + | **ಸ್ವರ** | = | **ಗುಣಿತಾಕ್ಷರ** |
|---|---|---|---|---|---|
| | ಕ್ | + | ಅ | = | ಕ |
| | ಚ್ | + | ಆ | = | ಚಾ |
| | ಟ್ | + | ಇ | = | ಟಿ |
| | ತ್ | + | ಈ | = | ತೀ |

ಈ ರೀತಿ ಎಲ್ಲಾ ವ್ಯಂಜನಗಳಿಗೂ ಎಲ್ಲಾ ಸ್ವರಗಳನ್ನು ಸೇರಿಸಿ ಗುಣಿತಾಕ್ಷರಗಳನ್ನು ಮಾಡಬಹುದು. ನೀವು ಕಾಗುಣಿತವನ್ನು ಬರೆದು ಅಭ್ಯಾಸ ಮಾಡಿರಿ, ಜೊತೆಗೆ ಗುಣಿತಾಕ್ಷರಗಳಲ್ಲಿರುವ ವ್ಯಂಜನ ಹಾಗೂ ಸ್ವರಾಕ್ಷರಗಳನ್ನು ಬಿಡಿಸಿ ಬರೆಯಿರಿ.

**೨. ಸಂಯುಕ್ತಾಕ್ಷರಗಳು :** ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರವನ್ನು ಸಂಯುಕ್ತಾಕ್ಷರ ಅಥವಾ ಒತ್ತಕ್ಷರ ಎಂದು ಕರೆಯಲಾಗುತ್ತದೆ. ಇವುಗಳಲ್ಲಿ ಸಜಾತಿಯ ಸಂಯುಕ್ತಾಕ್ಷರ ಹಾಗೂ ವಿಜಾತಿಯ ಸಂಯುಕ್ತಾಕ್ಷರಗಳೆಂದು ಎರಡು ವಿಧಗಳಿವೆ.

©KTBS Not to be republished

೧. **ಸಜಾತಿಯ ಸಂಯುಕ್ತಾಕ್ಷರ** : ಒಂದೇ ಜಾತಿಯ (ಮೂಲದ) ಎರಡು ವ್ಯಂಜನಗಳೊಂದಿಗೆ ಒಂದು ಸ್ವರ ಸೇರಿದಾಗ ಸಜಾತಿಯ ಸಂಯುಕ್ತಾಕ್ಷರ ಉಂಟಾಗುತ್ತದೆ.
**ಉದಾ :** ಅಮ್ಮ, ಅಣ್ಣ, ಕಲ್ಲು, ಮಣ್ಣು, ಕನ್ನಡ, ಸದ್ದು.

೨. **ವಿಜಾತಿಯ ಸಂಯುಕ್ತಾಕ್ಷರ** : ಬೇರೆ ಜಾತಿಯ ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳ ಜತೆಯಲ್ಲಿ ಒಂದು ಸ್ವರ ಸೇರಿದಾಗ ವಿಜಾತಿಯ ಸಂಯುಕ್ತಾಕ್ಷರ ಉಂಟಾಗುತ್ತದೆ.
**ಉದಾ :** ಶಾಸ್ತ್ರ, ಸ್ತ್ರೀ, ಅಕ್ಷರ, ವಿದ್ಯೆ, ಕಷ್ಟ, ತ್ರಿಶೂಲ.

## V. ಚಟುವಟಿಕೆಗಳು :

೧. ನೀವು ಕಂಡ ಕನಸನ್ನು ವಿವರಿಸಿ ಬರೆಯಿರಿ.
೨. ಕಲಾಂ ಅವರ ಕನ್ನಡ ಅನುವಾದದ ಕೃತಿಗಳನ್ನು ಓದಿರಿ.
೩. 'ಕನಸುಗಳು ಭವಿಷ್ಯದ ದಿಕ್ಸೂಚಿ' ಈ ವಿಷಯದ ಮೇಲೆ ಚರ್ಚೆ ನಡೆಸಿರಿ.



ಅನ್ಯಾಯವನ್ನು ಕೊಲ್ಲುವುದೇ ಧರ್ಮ – ಸುಭಾಸ್ ಚಂದ್ರ ಬೋಸ್

# ೩. ಗಾಂಧೀಜಿಯ ಬಾಲ್ಯ

C2S6R8

**ಮೂಲ:** ಗಾಂಧೀಜಿ


**ಕನ್ನಡಕ್ಕೆ:** ಗೊರೂರು ರಾಮಸ್ವಾಮಿ ಅಯ್ಯಂಗಾರ್

**ಪಾಠ ಪ್ರವೇಶ :** ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಆತನ ಬಾಲ್ಯ ಪ್ರಮುಖ ಪಾತ್ರ ವಹಿಸುತ್ತದೆ. ವಿದ್ಯಾರ್ಥಿ ಜೀವನದಲ್ಲಿ ನೋಡಿದ್ದು, ಕೇಳಿದ್ದು, ಕಲಿತದ್ದು, ಇಟ್ಟುಕೊಂಡ ಆದರ್ಶ, ಪಡೆದ ಪ್ರೇರಣೆ ಇವು ಆತನ ಜೀವನದುದ್ದಕ್ಕೂ ಪ್ರಭಾವ ಬೀರುತ್ತವೆ. ಹೀಗಾಗಿಯೇ ಗಾಂಧೀಜಿ ತಮ್ಮ ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಶಾಲೆಯಲ್ಲಿ ನಡೆದ ಒಂದು ಘಟನೆ ಹಾಗೂ ನೋಡಿದ ಎರಡು ನಾಟಕಗಳು ಸತ್ಯದ ದಾರಿಯಲ್ಲಿ ನಡೆಯುವಂತೆ ಅವರನ್ನು ಪ್ರೇರೇಪಿಸಿದವು. ಶ್ರವಣಕುಮಾರ ಹಾಗೂ ಹರಿಶ್ಚಂದ್ರರ ಆದರ್ಶದ ನೆರಳಿನಲ್ಲಿಯೇ ಬಾಳಿ, ಬದುಕು ರೂಪಿಸಿಕೊಂಡ ಗಾಂಧೀಜಿ ದೇಶಕ್ಕೆ ಆಸ್ತಿಯಾದರು. ಇಡೀ ಜಗತ್ತಿಗೆ ಬೆಳಕಾದರು. ಗಾಂಧೀಜಿಯವರಂತೆ ಶಿವಾಜಿ, ಭಗತ್‌ಸಿಂಗ್, ಚಂದ್ರಶೇಖರ್ ಅಜಾದ್, ಲಾಲ್ ಬಹದ್ದೂರ್ ಶಾಸ್ತ್ರೀ, ಸ್ವಾಮಿ ವಿವೇಕಾನಂದ ಮುಂತಾದ ವ್ಯಕ್ತಿಗಳು ತಮ್ಮ ಬಾಲ್ಯದಲ್ಲಿ ಅನುಸರಿಸಿದ ಆದರ್ಶಗಳಿಂದಲೇ ಮಹಾತ್ಮರಾದರು. ನಾವೂ ಅವರಂತೆ ಸತ್ಯ ಮಾರ್ಗದಲ್ಲಿ ನಡೆಯುವುದಕ್ಕೆ ಈ ಪಾಠ ಪ್ರೇರಣೆ ನೀಡುತ್ತದೆ.

©KTBS Not to be republished

ನಮ್ಮ ತಂದೆ ಪೋರಬಂದರನ್ನು ಬಿಟ್ಟು ರಾಜಕೋಟೆಯ ರಾಜಾಸ್ಥಾನಿಕ ನ್ಯಾಯಾಲಯದ ಸದಸ್ಯರಾಗಿ ಹೊರಟಾಗ, ನನಗೆ ಕೇವಲ ಏಳು ವರ್ಷಗಳು. ಅಲ್ಲಿ ನನ್ನನ್ನು ಪ್ರಾಥಮಿಕ ಶಾಲೆಗೆ ಸೇರಿಸಿದರು. ಆ ದಿನಗಳಲ್ಲಿ ನನಗೆ ಬೋಧಿಸಿದ ಉಪಾಧ್ಯಾಯರ ಹೆಸರುಗಳು ಮೊದಲಾದ ವಿವರಗಳೆಲ್ಲ ನನಗೆ ಚೆನ್ನಾಗಿ ನೆನಪಿದೆ. ಪೋರಬಂದರಿನಲ್ಲಿ ಇದ್ದಂತೆಯೇ ಇಲ್ಲಿಯೂ ನನ್ನ ವಿದ್ಯಾಭ್ಯಾಸದ ವಿಷಯದಲ್ಲಿ ಹೇಳಬೇಕಾದ ಹೆಚ್ಚಿನದೇನೂ ಇಲ್ಲ. ನಾನು ಸಾಮಾನ್ಯ ಯೋಗ್ಯತೆಯುಳ್ಳ ವಿದ್ಯಾರ್ಥಿಯಾಗಿದ್ದೆನು. ಆ ಪಾಠಶಾಲೆಗೆ ಸಮೀಪದಲ್ಲಿದ್ದ ಮತ್ತೊಂದು ಶಾಲೆ ಮುಗಿಸಿ ಮುಂದೆ ಪ್ರೌಢಶಾಲೆಯನ್ನು ಮುಟ್ಟುವ ವೇಳೆಗೆ ನನಗೆ ಹನ್ನೆರಡು ವರ್ಷ ತುಂಬಿತ್ತು. ಆ ಕಾಲದಲ್ಲಿ ನಾನು ಶಿಕ್ಷಕರಿಗಾಗಲಿ ಸ್ನೇಹಿತರಿಗಾಗಲಿ ಎಂದೂ ಸುಳ್ಳು ಹೇಳಿದ ನೆನಪಿಲ್ಲ. ನಾನು ಬಹಳ ನಾಚಿಕೆಯ ಸ್ವಭಾವದವನಾಗಿದ್ದೆನು. ಯಾರ ಜತೆಗೂ ಸೇರುತ್ತಿರಲಿಲ್ಲ. ನನ್ನ ಪುಸ್ತಕ, ಪಾಠಗಳು ಇವೇ ನನ್ನ ಮಿತ್ರರು. ಗಂಟೆ ಹೊಡೆಯುವ ಹೊತ್ತಿಗೆ ಶಾಲೆಗೆ ಹೋಗುವುದು, ಶಾಲೆ ಮುಗಿಯುತ್ತಲೇ ಮನೆಗೆ ಓಡುವುದು, ಇದು ನನ್ನ ದಿನನಿತ್ಯದ ಅಭ್ಯಾಸವಾಗಿತ್ತು. ನಾನು ನಿಜವಾಗಿಯೂ ಓಡಿಯೇ ಮನೆ ಸೇರುತ್ತಿದ್ದೆ. ಏಕೆಂದರೆ ನನಗೆ ಯಾರೊಂದಿಗೂ ಮಾತನಾಡುವ ಧೈರ್ಯವಿರಲಿಲ್ಲ. ಯಾರಾದರೂ ನನ್ನನ್ನು ಕುಚೋದ್ಯ ಮಾಡುವರೋ ಎಂಬ ಭಯ ನನಗಿತ್ತು.

ಪ್ರೌಢಶಾಲೆಯ ಮೊದಲನೆಯ ವರ್ಷದ ಪರೀಕ್ಷೆಯ ವೇಳೆಯಲ್ಲಿ ನಡೆದ ಘಟನೆಯೊಂದನ್ನು ಹೇಳಬೇಕು. ಇನ್‌ಸ್ಪೆಕ್ಟರ್ ಮಿ. ಗೈಲ್ಸ್ ಪರಿಶೀಲನೆಗಾಗಿ ಶಾಲೆಗೆ ಬಂದಿದ್ದರು. ಅವರು ಮೊದಲನೆಯ ತರಗತಿಯ ವಿದ್ಯಾರ್ಥಿಗಳಿಗೆ ಐದು ಪದಗಳನ್ನು ಬರೆಯಲು ಕೊಟ್ಟರು. ಅವುಗಳ ಪೈಕಿ ಕೆಟಲ್ (Kettle) ಎಂಬ ಪದವೂ ಒಂದು. ನಾನು ಅದನ್ನು ತಪ್ಪಾಗಿ ಬರೆದೆ. ನಮ್ಮ ಉಪಾಧ್ಯಾಯರು ತಮ್ಮ ಪಾದರಕ್ಷೆಯ ತುದಿಯಿಂದ ನನ್ನನ್ನು ಎಚ್ಚರಿಸಲು ಪ್ರಯತ್ನಿಸಿದರು. ನಾನು ಆ ಸೂಚನೆಯಂತೆ ನಡೆಯಲಿಲ್ಲ. ಮುಂದಿನ ಹುಡುಗನ ಸ್ಲೇಟನ್ನು ನೋಡಿಕೊಂಡು ನನ್ನ ತಪ್ಪನ್ನು ತಿದ್ದಿಕೊಳ್ಳಬೇಕೆಂಬುದು ನಮ್ಮ ಉಪಾಧ್ಯಾಯರ ಉದ್ದೇಶ. ಅದು ನನಗೆ ಒಪ್ಪಿಗೆಯಾಗಲಿಲ್ಲ. ಏಕೆಂದರೆ ನಾವು ಕಾಪಿ ಮಾಡದಂತೆ ನೋಡಿಕೊಳ್ಳುವುದೇ ಉಪಾಧ್ಯಾಯರ ಕೆಲಸವೆಂದು ನಾನು ತಿಳಿದಿದ್ದೆ. ಇದರ ಪರಿಣಾಮವಾಗಿ ನನ್ನನ್ನು ಹೊರತು ಉಳಿದ ಹುಡುಗರೆಲ್ಲ ಐದೂ ಪದಗಳನ್ನೂ ಸರಿಯಾಗಿ ಬರೆದಿದ್ದರು. ನಾನೊಬ್ಬನೇ ದಡ್ಡ. ಇದಾದ ಮೇಲೆ, ಉಪಾಧ್ಯಾಯರು ನನ್ನ ಮೂರ್ಖತನವನ್ನು ನನಗೆ ತೋರಿಸುವುದಕ್ಕೆ ಪ್ರಯತ್ನಪಟ್ಟರು. ಅದರಿಂದ ಅವರಿಗೆ ವೃಥಾ ಶ್ರಮವಾಯಿತೇ ಹೊರತು ಕಾಪಿ ಮಾಡುವ ಕಲೆ ನನಗೆ ಕೊನೆಗೂ ಬರಲೇ ಇಲ್ಲ. ಇಷ್ಟಾದರೂ ಉಪಾಧ್ಯಾಯರಲ್ಲಿ ನನಗಿದ್ದ ಗೌರವ ಕಿಂಚಿತ್ತೂ ಕಡಿಮೆಯಾಗಲಿಲ್ಲ. ಏಕೆಂದರೆ ಹಿರಿಯರ ದೋಷಗಳನ್ನು ಎಣಿಸದಿರುವುದು ನನ್ನ ಸ್ವಾಭಾವಿಕ ಗುಣವಾಗಿತ್ತು. ಅನಂತರ ಆ ಉಪಾಧ್ಯಾಯರ ಇತರ ದೋಷಗಳೂ ನನಗೆ ತಿಳಿದುಬಂದವು. ಆದರೆ ಅವರಲ್ಲಿ ನನ್ನ ಆದರಭಾವ ಕಡಿಮೆಯಾಗಲಿಲ್ಲ. ಹಿರಿಯರ ಆಣತಿಯನ್ನು ಪಾಲಿಸುವುದು ನಮ್ಮ ಕರ್ತವ್ಯ, ಅವರ ಕಾರ್ಯವನ್ನು ಪರೀಕ್ಷಿಸುವುದಲ್ಲ ಎಂಬುದನ್ನು ನಾನು ಅರಿತಿದ್ದೆ.




©KTBS Not to be republished



ತಪ್ಪು ಮಾಡುವುದು ಮಾನವ ಗುಣ, ಕ್ಷಮಿಸುವುದು ದೈವಿಕ ಗುಣ

ಇದೇ ಸಮಯದಲ್ಲಿ ನಡೆದ ಮತ್ತೆರಡು ಸಂಗತಿಗಳು ಯಾವಾಗಲೂ ನನ್ನ ನೆನಪಿನಲ್ಲಿ ಉಳಿದಿವೆ. ಪಠ್ಯಪುಸ್ತಕಗಳನ್ನು ಹೊರತು ಬೇರೆ ಏನನ್ನೂ ಓದುವುದು ಸಾಧಾರಣವಾಗಿ ನನಗೆ ಸೇರುತ್ತಿರಲಿಲ್ಲ. ನಿತ್ಯದ ಪಾಠಗಳನ್ನಂತೂ ಓದಲೇಬೇಕಾಗಿತ್ತು. ಉಪಾಧ್ಯಾಯರು ನನ್ನನ್ನು ಗದರಿಸುವುದು ನನಗೆ ಇಷ್ಟವಿರಲಿಲ್ಲ. ಅವರಿಗೆ ಮೋಸ ಮಾಡಲು ನನಗೆ ಇಷ್ಟವಿರಲಿಲ್ಲ. ಆದುದರಿಂದ ಪಾಠವನ್ನೇನೋ ಓದುತ್ತಿದ್ದೆ. ಆದರೆ ಪಾಠದಲ್ಲಿ ಮನಸ್ಸು ಇರುತ್ತಿರಲಿಲ್ಲ. ಹೀಗೆ ಪಾಠಗಳನ್ನೇ ಸರಿಯಾಗಿ ಓದುತ್ತಿರಲಿಲ್ಲವೆಂದ ಮೇಲೆ, ಇನ್ನು ಇತರ ಹೆಚ್ಚಿನ ವ್ಯಾಸಂಗದ ಪ್ರಶ್ನೆ ಎಲ್ಲಿ ಬಂತು? ಆದರೆ ಹೇಗೋ ನಮ್ಮ ತಂದೆ ಕೊಂಡುಕೊಂಡು ಬಂದಿದ್ದ ಒಂದು ಪುಸ್ತಕ ನನ್ನ ಕಣ್ಣಿಗೆ ಬಿತ್ತು. ಅದರ ಹೆಸರು 'ಶ್ರವಣನ ಪಿತೃಭಕ್ತಿ' ನಾಟಕ. ಅದನ್ನು ನಾನು ಅತ್ಯಂತ ಆಸಕ್ತಿಯಿಂದ ಓದಿದೆ. ಅದೇ ಸಮಯದಲ್ಲಿ ಸಂಚಾರೀ ಬೊಂಬೆ ಪ್ರದರ್ಶಕರು ನಮ್ಮ ಊರಿಗೆ ಬಂದರು. ಅವರು ನನಗೆ ತೋರಿಸಿದ ಒಂದು ಚಿತ್ರ, ಶ್ರವಣ ತನ್ನ ಕುರುಡು ತಂದೆತಾಯಿಯರನ್ನು ಅಡ್ಡೆಯಲ್ಲಿ ಕೂರಿಸಿಕೊಂಡು, ಅದನ್ನು ಹೆಗಲಿನ ಮೇಲೆ ಹೊತ್ತುಕೊಂಡು ಯಾತ್ರೆಗಾಗಿ ಹೋಗುತ್ತಿದ್ದ ಚಿತ್ರ. ಆ ಪುಸ್ತಕ, ಆ ದೃಶ್ಯ ಎರಡೂ ನನ್ನ ಅಂತರಂಗದಲ್ಲಿ ಶಾಶ್ವತವಾಗಿ ಅಂಕಿತವಾದವು. "ಇಗೋ ಇಲ್ಲಿ ನಿನಗೊಂದು ಆದರ್ಶವಿದೆ. ಅದನ್ನು ಅನುಸರಿಸು" ಎಂದು ನನಗೆ ನಾನೇ ಹೇಳಿಕೊಂಡೆ. ಶ್ರವಣ ಮರಣ ಹೊಂದಲು, ಅವನ ಮಾತಾಪಿತೃಗಳ ಆರ್ತವಿಲಾಪ ನನ್ನ ಕಿವಿಗೆ ಈಗಲೂ ಕೇಳುವಂತಿದೆ. ಆ ರಾಗ, ನನ್ನ ಹೃದಯವನ್ನು ಕರಗಿಸಿತು. ನಮ್ಮ ತಂದೆ ತಂದುಕೊಟ್ಟಿದ್ದ ರಾಗಮಾಲಿಕೆಯಲ್ಲಿ ಅದನ್ನು ಬಾರಿಸಲು ಕಲಿತೆ.


ಮತ್ತೊಂದು ನಾಟಕಕ್ಕೆ ಸಂಬಂಧಿಸಿದಂತೆ ಇದೇ ಬಗೆಯ ಪ್ರಸಂಗ ನಡೆಯಿತು. ಆ ಕಾಲದಲ್ಲಿ ಒಂದು ನಾಟಕ ಮಂಡಳಿಯವರು ಪ್ರದರ್ಶಿಸುತ್ತಿದ್ದ ನಾಟಕವೊಂದನ್ನು ನೋಡಲು ನಮ್ಮ ತಂದೆಯವರು ನನಗೆ ಅನುಮತಿ ಕೊಟ್ಟಿದ್ದರು. ಅದು ಹರಿಶ್ಚಂದ್ರ ನಾಟಕ. ಅದು ನನ್ನ ಮನಸ್ಸನ್ನು ಸೂರೆಗೊಂಡಿತು. ಅದನ್ನು ಎಷ್ಟು ನೋಡಿದರೂ ನನಗೆ ತೃಪ್ತಿಯೇ ಆಗಲಿಲ್ಲ. ಆದರೆ ಎಷ್ಟು ಸಲ ನೋಡಲು ಅನುಮತಿ ಕೊಟ್ಟಾರು? ಅದರ ಹುಚ್ಚು ನನ್ನನ್ನು ಹಗಲೂ ರಾತ್ರಿ ಬಿಡಲೇ ಇಲ್ಲ. ಲೆಕ್ಕವಿಲ್ಲದಷ್ಟು ಸಲ ನಾನೇ ಹರಿಶ್ಚಂದ್ರನಾಗಿ ಆ ನಾಟಕವನ್ನು ಅಭಿನಯಿಸಿಕೊಂಡೆ. ಎಲ್ಲರೂ ಏಕೆ ಹರಿಶ್ಚಂದ್ರನಂತೆ ಸತ್ಯಸಂಧರಾಗಿರಬಾರದು? ಇದೇ ಹಗಲೂ ರಾತ್ರಿ ನನ್ನನ್ನು ನಾನೇ ಕೇಳಿಕೊಳ್ಳುತ್ತಿದ್ದ ಪ್ರಶ್ನೆ. ಸತ್ಯವನ್ನು ಅನುಸರಿಸಬೇಕು. ಹರಿಶ್ಚಂದ್ರ ಸತ್ಯಕ್ಕಾಗಿ ಪಟ್ಟ ಕ್ಲೇಶವನ್ನೆಲ್ಲ, ಆಪತ್ತುಗಳನ್ನೆಲ್ಲ ನಾನೂ ಪಡಬೇಕು. ಇದೊಂದೇ ನನ್ನ ಮನಸ್ಸಿನಲ್ಲಿ ಸ್ಫೂರ್ತಿ ತುಂಬಿದ ಆದರ್ಶ. ಹರಿಶ್ಚಂದ್ರನ ಕಥೆಯನ್ನು ನಾನು ಅಕ್ಷರಶಃ ನಂಬಿದೆನು. ನೆನಪು ಮಾಡಿಕೊಂಡು ಪದೇಪದೇ ಅಳುತ್ತಿದ್ದೆ. ಹರಿಶ್ಚಂದ್ರ ಐತಿಹಾಸಿಕ ವ್ಯಕ್ತಿ ಆಗಿರಲಾರ ಎಂಬುದು, ಇಂದು ನನ್ನ ಬುದ್ಧಿಗೆ ಗೋಚರಿಸುತ್ತಿದೆ. ಆದರೆ ನನ್ನ ಮಟ್ಟಿಗೆ ಹರಿಶ್ಚಂದ್ರ, ಶ್ರವಣ ಇಬ್ಬರೂ ಜೀವಂತ ವ್ಯಕ್ತಿಗಳು. ಆ ನಾಟಕಗಳನ್ನು ಓದಿದರೆ ಮತ್ತೆ ಮೊದಲಿನಂತೆ ನಾನು ಕಣ್ಣೀರು ಹಾಕದೆ ಇರಲಾರೆನೆಂಬುದು ನನ್ನ ನಂಬಿಕೆ.

* * * *


©KTBS Not to be republished

## ಕೃತಿಕಾರರ ಪರಿಚಯ :

### ೧. ಮಹಾತ್ಮಾ ಗಾಂಧೀಜಿ : (ಮೂಲ ಲೇಖಕರು)



ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಪೂರ್ಣ ಹೆಸರು **'ಮೋಹನದಾಸ ಕರಮಚಂದ ಗಾಂಧಿ'**. ತಂದೆ ಹೆಸರು ಕರಮಚಂದ ಗಾಂಧಿ, ತಾಯಿ ಹೆಸರು ಪುತಲಿಬಾಯಿ. ಇವರು **೧೮೬೯ ನೇ ಅಕ್ಟೋಬರ್ ೦೨** ರಂದು ಗುಜರಾತಿನ ಪೋರಬಂದರಿನಲ್ಲಿ ಜನಿಸಿದರು. ತಮ್ಮ ಬದುಕಿನ ಅನುಭವಗಳನ್ನು ಹಾಗೂ ಪ್ರಯೋಗಗಳನ್ನು ಕುರಿತು ಅವರೇ ಬರೆದ **'ಮೈ ಎಕ್ಸ್‌ಪಿರಿಮೆಂಟ್ ವಿಥ್‌ಟ್ರೂತ್'** ಜಗತ್ತಿನ ಹಲವು ಭಾಷೆಗಳಿಗೆ ಭಾಷಾಂತರಗೊಂಡಿದೆ. ಗಾಂಧೀಜಿಯವರ ಈ ಆತ್ಮಕಥೆಯನ್ನು **ಗೊರೂರು ರಾಮಸ್ವಾಮಿ ಅಯ್ಯಂಗಾರರು** ಕನ್ನಡಕ್ಕೆ ಭಾಷಾಂತರಿಸಿದ್ದಾರೆ.



### ೨. ಗೊರೂರು ರಾಮಸ್ವಾಮಿ ಅಯ್ಯಂಗಾರ್ : (ಅನುವಾದಕರು)

ಗೊರೂರು ರಾಮಸ್ವಾಮಿ ಅಯ್ಯಂಗಾರರು ಹಾಸನ ಜಿಲ್ಲೆಯ ಗೊರೂರು ಗ್ರಾಮದವರು. ಇವರು **೧೯೦೪ ನೇ ಜುಲೈ ೦೪** ರಂದು ಜನಿಸಿದರು. ಇವರು ಹೊಸಗನ್ನಡ ಸಾಹಿತ್ಯದಲ್ಲಿ ಕಥೆ, ಕಾದಂಬರಿ, ಪ್ರಬಂಧ, ಜೀವನಚರಿತ್ರೆ, ಪ್ರವಾಸ ಕಥೆ, ಅನುವಾದ ಮುಂತಾದ ವಿವಿಧ ಪ್ರಕಾರಗಳಲ್ಲಿ ೬೦ ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವರ ಕೃತಿಗಳಲ್ಲಿ ಗ್ರಾಮೀಣ ಸಂಸ್ಕೃತಿ ಹಾಗೂ ಗಾಂಧೀ ಚಿಂತನೆಗಳನ್ನು ಕಾಣಬಹುದು.

©KTBS
Not to be republished

'ಸ್ವಾತಂತ್ರ್ಯವೇ ಧರ್ಮ', 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', 'ಹಳ್ಳಿಯ ಹಾಡು', 'ಮೆರವಣಿಗೆ', 'ನಮ್ಮ ಊರಿನ ರಸಿಕರು', 'ಗರುಡಗಂಬದ ದಾಸಯ್ಯ' ಮುಂತಾದವು ಅವರು ರಚಿಸಿದ ಪ್ರಮುಖ ಕೃತಿಗಳು. ಇವರು ೨೮ ನೇ ಸೆಪ್ಟೆಂಬರ್ **೧೯೯೧** ರಂದು ನಿಧನರಾದರು.

ಪ್ರಸ್ತುತ ಗದ್ಯಭಾಗವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರು ಅನುವಾದಿಸಿರುವ ಮೋ. ಕ. ಗಾಂಧಿ ಅವರ **'ನನ್ನ ಸತ್ಯಾನ್ವೇಷಣೆ'** ಕೃತಿಯಿಂದ ಆಯ್ದುಕೊಳ್ಳಲಾಗಿದೆ.



ಅವಕಾಶ ಸಿಕ್ಕರೆ ಆಕಾಶವನ್ನು ಮುಟ್ಟು.

# ಅಭ್ಯಾಸ

## I. ಪದಗಳ ಅರ್ಥ ತಿಳಿಯಿರಿ :

**ಅಂಕಿತ** – ಗುರುತು

**ಅಡ್ಡೆ** – ಹೆಗಲ ಮೇಲೆ ಹೊರುವುದಕ್ಕಾಗಿ ತಕ್ಕಡಿಯಂತೆ ಮಾಡಿರುವ ಬಿದಿರ ದಬ್ಬೆಯ ಸಾಧನ.

**ಅಕ್ಷರಶಃ** – ಪ್ರತಿಯೊಂದು ವಿವರದಲ್ಲೂ

**ಆದರ** – ಗೌರವ; ಪ್ರೀತಿ.

**ಆಣತಿ** – ಆಜ್ಞೆ

**ಆರ್ತ** – ಕಷ್ಟಕ್ಕೆ ಸಿಲುಕಿದ; ದುಃಖಿತ.

**ಕಲೆ** – ನೈಪುಣ್ಯತೆ

**ಕಾಪಿ** – ನಕಲು; ಕದ್ದು ಬರೆಯುವುದು

**ಕಿಂಚಿತ್ತೂ** – ಸ್ವಲ್ಪವೂ; ಕೊಂಚವೂ

**ಕುಚೋದ್ಯ** – ಕಿಡಿಗೇಡಿತನ; ಅಪಹಾಸ್ಯ.

**ಕೆಟಲ್** – ಕಾಫಿ ಸಂಗ್ರಹಿಸಿಡುವ ಸಾಧನ.

**ಕ್ಲೇಶ** – ದುಃಖ; ನೋವು.

**ಗದರಿಸು** (ಕ್ರಿ) – ಅಬ್ಬರಿಸು

**ಪಾದರಕ್ಷೆ** – ಚಪ್ಪಲಿ

**ಪಿತೃ** – ತಂದೆ

**ಪೈಕಿ** (ಅ) – ಸಂಬಂಧದಲ್ಲಿ

**ರಾಗಮಾಲಿಕೆ** – ಸಂಗೀತ ಸಾಧನ

**ವಿಲಾಪ** – ಅಳುವಿಕೆ

**ವೃಥಾ** – ನಿಷ್ಕಾರಣವಾಗಿ; ವ್ಯರ್ಥವಾಗಿ.

**ಸತ್ಯಸಂಧ** – ನಿಜವನ್ನು ನುಡಿಯುವವನು

**ಸೂರೆ** – ಕೊಳ್ಳೆ; ಲೂಟಿ.

©KTBS Not to be republished

## II. ಪ್ರಶ್ನೆಗಳು :

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

೧. ಮಹಾತ್ಮ ಗಾಂಧೀಜಿಯವರ ಆತ್ಮಕಥೆಯ ಹೆಸರು ______________

೨. ಗಾಂಧೀಜಿಯವರು ಪರೀಕ್ಷೆಯಲ್ಲಿ ತಪ್ಪಾಗಿ ಬರೆದ ಪದ ______________

೩. ಗಾಂಧೀಜಿಯವರು ಬಾಲ್ಯದಲ್ಲಿ ಓದಿದ ಮೊದಲ ಪುಸ್ತಕ ______________

೪. ಬಾಲ್ಯದಲ್ಲಿ ಗಾಂಧೀಜಿಯವರ ಮೇಲೆ ಪ್ರಭಾವ ಬೀರಿದ ನಾಟಕದ ಹೆಸರು ______________

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಗಾಂಧೀಜಿಯವರಿಗೆ ಪರೀಕ್ಷೆಯಲ್ಲಿ ಕಾಪಿ ಮಾಡುವಂತೆ ಉಪಾಧ್ಯಾಯರು ಏಕೆ ಸೂಚಿಸಿದರು?

೨. ಉಪಾಧ್ಯಾಯರು ಸೂಚಿಸಿದರೂ ಗಾಂಧೀಜಿ ಪರೀಕ್ಷೆಯಲ್ಲಿ ಕಾಪಿ ಮಾಡಲಿಲ್ಲ ಏಕೆ?

೩. ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ಕಾಪಿ ಮಾಡಲು ಸೂಚಿಸುವುದು ಸರಿಯಲ್ಲ ಏಕೆ?



ನಿನ್ನ ಉಡುಪು ನಿನ್ನ ವ್ಯಕ್ತಿತ್ವದ ಮೆರುಗು.

೪. ಗಾಂಧೀಜಿಯವರಿಗೆ ಕಾಪಿ ಮಾಡಲು ಹೇಳಿದ ಉಪಾಧ್ಯಾಯರ ಮೇಲೆ ಗೌರವ ಏಕೆ ಕಡಿಮೆ ಆಗಲಿಲ್ಲ?

೫. ಗಾಂಧೀಜಿಯವರಿಗೆ ಬಾಲ್ಯದಲ್ಲಿ ಪ್ರಭಾವ ಬೀರಿದ ಇಬ್ಬರು ವ್ಯಕ್ತಿಗಳಾರು?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಗಾಂಧೀಜಿಯವರ ಬಾಲ್ಯದಲ್ಲಿದ್ದ ಸ್ವಭಾವಗಳಾವುವು?

೨. ಗಾಂಧೀಜಿಯವರಿಗೆ ಪರೀಕ್ಷೆಯಲ್ಲಿ ಕಾಪಿ ಮಾಡುವಂತೆ ಉಪಾಧ್ಯಾಯರು ಯಾವ ರೀತಿ ಸೂಚಿಸಿದರು?

೩. ಶ್ರವಣನ ಪಿತೃಭಕ್ತಿ ನಾಟಕದಲ್ಲಿನ ಯಾವ ಅಂಶ ಗಾಂಧೀಜಿಯವರ ಮೇಲೆ ಪ್ರಭಾವ ಬೀರಿತು?

೪. ಹರಿಶ್ಚಂದ್ರ ನಾಟಕ ಗಾಂಧೀಜಿಯವರ ಮನಸ್ಸಿನಲ್ಲಿ ಯಾವ ರೀತಿಯ ಸ್ಫೂರ್ತಿ ತುಂಬಿತು?

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಗಾಂಧೀಜಿಯವರು ಪ್ರೌಢಶಾಲೆಯಲ್ಲಿ ಓದುತ್ತಿರುವಾಗ ಪರೀಕ್ಷಾ ಕೊಠಡಿಯಲ್ಲಿ ಯಾವ ಘಟನೆ ನಡೆಯಿತು?

೨. ಗಾಂಧೀಜಿಯವರಿಗೆ ಬಾಲ್ಯದಲ್ಲಿ ಶ್ರವಣನ ಪಿತೃಭಕ್ತಿ ಹಾಗೂ ಸತ್ಯ ಹರಿಶ್ಚಂದ್ರ ನಾಟಕಗಳು ಯಾವ ರೀತಿ ಪ್ರಭಾವ ಬೀರಿದವು?

©KTBS Not to be republished

**ಉ) ಸಂದರ್ಭದೊಡನೆ ವಿವರಿಸಿರಿ.**

೧. ಹಿರಿಯರ ಆಣತಿಯನ್ನು ಪಾಲಿಸುವುದು ನಮ್ಮ ಕರ್ತವ್ಯ.

೨. ಇಗೋ ಇಲ್ಲಿ ನಿನಗೊಂದು ಆದರ್ಶವಿದೆ. ಅದನ್ನು ಅನುಸರಿಸು.

೩. ಎಲ್ಲರೂ ಏಕೆ ಹರಿಶ್ಚಂದ್ರನಂತೆ ಸತ್ಯಸಂಧರಾಗಿರಬಾರದು?

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ಅಕ್ಷರಶಃ, ಸೂರೆಗೊಳ್ಳು, ಸ್ಫೂರ್ತಿ, ಆದರ್ಶ, ಕರ್ತವ್ಯ.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ.**

ಸತ್ಯ, ಹಗಲು, ಯೋಗ್ಯ, ದಡ್ಡ, ಪ್ರಶ್ನೆ, ಆಸಕ್ತಿ.



ಉಪಾಯ ಬಲ್ಲವನಿಗೆ ಅಪಾಯವಿಲ್ಲ.

ಇ) **ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ನ್ಯಾಯಾಲಯ, ವಿದ್ಯಾಭ್ಯಾಸ, ವಿದ್ಯಾರ್ಥಿ, ಮತ್ತೊಂದು, ಶಾಲೆಯನ್ನು.

ಈ) **ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪ ಬರೆಯಿರಿ.**

ಅಕ್ಷರ, ದೃಶ್ಯ, ಪುಸ್ತಕ, ವರ್ಷ, ನಿತ್ಯ, ಕಥೆ.

# IV. ಸೈದ್ಧಾಂತಿಕ ವ್ಯಾಕರಣ :

## ಸಂಧಿಗಳು :

ಎರಡು ಅಕ್ಷರಗಳು ಪರಸ್ಪರ ಕಾಲ ವಿಳಂಬವಾಗದಂತೆ ಅರ್ಥಕ್ಕೆ ಅನುಸಾರವಾಗಿ ಸೇರುವುದನ್ನು 'ಸಂಧಿ' ಎಂದು ಕರೆಯಲಾಗುತ್ತದೆ.

### ಕನ್ನಡ ಸಂಧಿಗಳು :

ಸಂಧಿ ಆಗುವ ಎರಡು ಪದಗಳು ಕನ್ನಡ, ಇಲ್ಲವೇ ಒಂದು ಕನ್ನಡ ಮತ್ತೊಂದು ಸಂಸ್ಕೃತವಾಗಿದ್ದರೆ ಅದನ್ನು **'ಕನ್ನಡ ಸಂಧಿ'** ಎಂದು ಕರೆಯಲಾಗುತ್ತದೆ. ಕನ್ನಡ ಸಂಧಿಯಲ್ಲಿ ಮೂರು ವಿಧಗಳಿವೆ.

©KTBS Not to be republished

**೧. ಲೋಪಸಂಧಿ :** ಎರಡು ಸ್ವರಾಕ್ಷರಗಳ ನಡುವೆ ಸಂಧಿ ಕಾರ್ಯ ನಡೆಯುವಾಗ ಪೂರ್ವ ಪದದ ಅಂತ್ಯದಲ್ಲಿರುವ ಸ್ವರವು ಅರ್ಥ ಕೆಡದಿರುವ ಸಂದರ್ಭದಲ್ಲಿ ಇಲ್ಲವಾಗುವುದನ್ನು 'ಲೋಪಸಂಧಿ' ಎಂದು ಕರೆಯಲಾಗುತ್ತದೆ.

| **ಉದಾ :** | **ಪೂರ್ವಪದ** | + | **ಉತ್ತರಪದ** | = | **ಸಂಧಿಪದ** |
|---|---|---|---|---|---|
| | ಮಾತು | + | ಇಲ್ಲ | = | ಮಾತಿಲ್ಲ |
| | ಬೇರೆ | + | ಒಬ್ಬ | = | ಬೇರೊಬ್ಬ |
| | ನಿನಗೆ | + | ಅಲ್ಲದೆ | = | ನಿನಗಲ್ಲದೆ |

**೨. ಆಗಮ ಸಂಧಿ :** ಲೋಪ ಸಂಧಿ ಮಾಡಿದರೆ ಅರ್ಥ ಕೆಡುವಂತಿದ್ದರೆ, ಆ ಎರಡು ಸ್ವರಗಳ ನಡುವೆ 'ಯ್' ಇಲ್ಲವೆ 'ವ್' ಅಕ್ಷರವನ್ನು ಹೊಸದಾಗಿ ಸೇರಿಸಿ ಸಂಧಿ ಮಾಡಿದರೆ ಅದನ್ನು 'ಆಗಮ ಸಂಧಿ' ಎಂದು ಕರೆಯುತ್ತಾರೆ.



ಎಲ್ಲರ ಕೆಲಸ ಎಂದರೆ, ಯಾರ ಕೆಲಸವೂ ಅಲ್ಲ.

'ಯ್' ಅಕ್ಷರ ಬಂದಲ್ಲಿ ಯಕಾರಾಗಮ ಸಂಧಿ ಎಂತಲೂ, 'ವ್' ಅಕ್ಷರ ಬಂದಲ್ಲಿ ವಕಾರಾಗಮ ಸಂಧಿ ಎಂತಲೂ ಎರಡು ವಿಧಗಳನ್ನು ಗುರುತಿಸಲಾಗುತ್ತದೆ.

| ಉದಾ : | ಪೂರ್ವಪದ | + | ಉತ್ತರಪದ | = | ಸಂಧಿಪದ |
|---|---|---|---|---|---|
| | ಗುರು | + | ಅನ್ನು | = | ಗುರುವನ್ನು |
| | ಪಿತೃ | + | ಅನ್ನು | = | ಪಿತೃವನ್ನು |
| | ಕೈ | + | ಅಲ್ಲಿ | = | ಕೈಯಲ್ಲಿ |
| | ಶಾಲೆ | + | ಇಂದ | = | ಶಾಲೆಯಿಂದ |

೩. **ಆದೇಶ ಸಂಧಿ :** ಎರಡು ಅಕ್ಷರಗಳ ನಡುವೆ ಸಂಧಿಕಾರ್ಯ ನಡೆಯುವಾಗ ಉತ್ತರ ಪದದ ಆದಿಯಲ್ಲಿರುವ 'ಕ್' 'ತ್' 'ಪ್' ವ್ಯಂಜನಗಳಿಗೆ ಕ್ರಮವಾಗಿ 'ಗ್' 'ದ್' 'ಬ್' ವ್ಯಂಜನಗಳು ಬದಲಿಯಾಗಿ ಬರುವುದನ್ನು 'ಆದೇಶ ಸಂಧಿ' ಎಂದು ಕರೆಯಲಾಗುತ್ತದೆ.

| ಉದಾ : | ಪೂರ್ವಪದ | + | ಉತ್ತರಪದ | = | ಸಂಧಿಪದ |
|---|---|---|---|---|---|
| | ಮಳೆ | + | ಕಾಲ | = | ಮಳೆಗಾಲ |
| | ಬೆಟ್ಟ | + | ತಾವರೆ | = | ಬೆಟ್ಟದಾವರೆ |
| | ಹೂ | + | ಪುಟ್ಟಿ | = | ಹೂಬುಟ್ಟಿ |

©KTBS Not to be republished

## V. ಚಟುವಟಿಕೆಗಳು :

೧. ಶ್ರವಣನ ಪಿತೃಭಕ್ತಿ ಹಾಗೂ ಸತ್ಯ ಹರಿಶ್ಚಂದ್ರ ಪುಸ್ತಕಗಳನ್ನು ಕೊಂಡು ಓದಿರಿ.
೨. ಗಾಂಧೀಜಿಯವರ ಆತ್ಮಚರಿತ್ರೆಯನ್ನು ಗ್ರಂಥಾಲಯದಿಂದ ಪಡೆದು ಓದಿರಿ.
೩. ಬಾಲ್ಯದಲ್ಲಿ ನಿಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರಿದ ಪುಸ್ತಕ ಹಾಗೂ ಘಟನೆಗಳನ್ನು ಬರೆದಿಡಿ.

# ೪. ಸುಕ್ರಿ ಬೊಮ್ಮನ ಗೌಡ

D9H1C3

– ಶಾಂತಿ ನಾಯಕ

**ಪಾಠ ಪ್ರವೇಶ :** ನಮ್ಮ ಜನಪದರು ಓದು ಬರೆಹ ಕಲಿಯದವರು. ಆದರೆ ಅವರಲ್ಲಿರುವ ವಿದ್ವತ್ತು, ಭಾಷಾ ಪ್ರೌಢಿಮೆ, ಲೋಕ ಜ್ಞಾನ, ನೆನಪಿನ ಶಕ್ತಿ, ಎಂಥವರನ್ನೂ ಬೆರಗುಗೊಳಿಸುತ್ತದೆ. ಅವರಿಗೆ ತಿಳಿಯದಿರುವ ವಿಚಾರಗಳೇ ಇಲ್ಲ. ಪರಿಸರದಲ್ಲಿರುವ ಬೆಟ್ಟಗುಡ್ಡ, ಮರಗಿಡ, ಪ್ರಾಣಿಪಕ್ಷಿ, ನದಿ, ಮಳೆ ಎಲ್ಲವೂ ಅವರಿಗೆ ಆಪ್ತವಾಗಿದ್ದವು. ಆಧುನಿಕತೆಯ ಪ್ರಭಾವ ಹೆಚ್ಚಾದಂತೆಲ್ಲಾ ಜಾನಪದ ಸಂಸ್ಕೃತಿ ಮರೆಯಾಗಲಾರಂಭಿಸಿತು. ಇದಕ್ಕೆ ಅಪವಾದವೆಂಬಂತೆ ಕೆಲವು ಭಾಗದಲ್ಲಿ ಜಾನಪದ ಕಲೆ ಸಂಸ್ಕೃತಿಗಳನ್ನು ಮೈಗೂಡಿಸಿಕೊಂಡಿರುವ ಜನಪದರು ಈಗಲೂ ಇದ್ದಾರೆ. ಅವರುಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಬುಡಕಟ್ಟು ಜನಾಂಗಕ್ಕೆ ಸೇರಿದ 'ಸುಕ್ರಿ ಬೊಮ್ಮನಗೌಡ' ಅಪರೂಪದ ಜಾನಪದ ಮಹಿಳೆ. ತಮ್ಮ ಜನಾಂಗದ ಒಟ್ಟು ಸಂಸ್ಕೃತಿಯನ್ನು ಈಗಲೂ ಜೀವಂತವಾಗಿ ಉಳಿಸಿಕೊಂಡಿದ್ದಾರೆ. ಜೊತೆಗೆ ಸಮಾಜದ ಒಳಿತಿಗೆ ಹೋರಾಡುತ್ತ, ಸರ್ಕಾರದ ಒಳಗಣ್ಣನ್ನು ತೆರೆಸುವ ಪ್ರಯತ್ನ ಮಾಡುತ್ತಿದ್ದಾರೆ. ಅವರ ಬದುಕು ಇಂದಿನವರಿಗೆ ಆದರ್ಶವಾಗಬೇಕು, ಜೊತೆಗೆ ಅಕ್ಷರ ಕಲಿತವರು ಜಾನಪದ ಸಂಸ್ಕೃತಿಯನ್ನು ದಾಖಲಿಸುವ, ಉಳಿಸುವ ಪ್ರಯತ್ನ ಮಾಡಬೇಕೆಂಬ ಆಶಯವೂ ಇಲ್ಲಿದೆ.

©KTBS Not to be republished

ಸುಕ್ರಿಯ ಪೂರ್ವಜರು ಬೇಸಾಯಗಾರರು. ರಾಗಿ ಇವರ ಪ್ರಮುಖ ಆಹಾರ. ಉತ್ತರ ಕನ್ನಡ ಜಿಲ್ಲೆಯಲ್ಲಿ ನೆಲೆ ನಿಂತ ಪ್ರಾರಂಭದ ದಿನಗಳಲ್ಲಿ ತಮ್ಮ ಹೊಟ್ಟೆಪಾಡಿಗಾಗಿ ಇವರು ಕುಂಬರಿ ಬೇಸಾಯವನ್ನು ಅವಲಂಬಿಸಿಕೊಂಡರು. ಸುಮಾರು ೧೦೦ ವರ್ಷಗಳ ಹಿಂದೆ ಇಲ್ಲಿ ದೇವಿ ಮತ್ತು ಸುಬ್ಬ ಎಂಬ ದಂಪತಿಗಳು ನೆಲೆಸಿದ್ದರು. ಇವರಿಗೆ ಇಬ್ಬರು ಹೆಣ್ಣು ಮಕ್ಕಳು, ನಾಲ್ವರು ಗಂಡು ಮಕ್ಕಳು, ಸುಕ್ರಿ ಇವರಲ್ಲಿ ನಾಲ್ಕನೆಯವರಾಗಿ ೧೯೪೨ ರಲ್ಲಿ ಜನಿಸಿದರು.

**ಜಾನಪದದ ಗಣಿ :**

ಸುಕ್ರಿಯ ಅಕ್ಕ ಮತ್ತು ತಾಯಿ ಉತ್ತಮ ಹಾಡುಗಾರರಾಗಿದ್ದರು. ಅಪ್ಪ ಗುಮಟೆ ವಾದ್ಯಗಾರಿಕೆಯನ್ನು ಸುಗ್ಗಿ ನೃತ್ಯಗಾರಿಕೆಯನ್ನು ಬಲ್ಲವರಾಗಿದ್ದರು. ಸುಕ್ರಿಯೂ ಶಾಲೆ ಕಲಿತವಳಲ್ಲ. ಚಿಕ್ಕವಳಿರುವಾಗ ತನ್ನ ಕೇರಿಯ ಮಕ್ಕಳ ಜೊತೆಗೆ ಸಗಣಿ ತರಲು ಹೋಗುತ್ತಿದ್ದಳು. ಸಗಣಿ ಹೆಕ್ಕಿ ಸುಸ್ತಾಗದ ಈ ಮಕ್ಕಳು ತಮ್ಮ ಸಗಣಿ ಬುಟ್ಟಿಗಳನ್ನು ಗದ್ದೆ ಬಯಲಿನಲ್ಲಿಟ್ಟು ಗದ್ದೆ ಬಯಲನ್ನೆ ಕ್ರೀಡಾಂಗಣವನ್ನಾಗಿಸಿಕೊಳ್ಳುತ್ತಿದ್ದರು. ಅಟ್ಟೆ ಆಟ; ಕಣ್ಣಟ್ಟಾಟ; ಹುಳ್ಕಿ ಮಂಡದ ಆಟಗಳಿಗೆ ಈ ಬಯಲುಗಳೇ ಜನಪದ ಆಟಗಳ ತರಬೇತಿ ಶಾಲೆಗಳಾದವು. ಇಲ್ಲಿಯೇ ಸುಕ್ರಿ ಹೆಣ್ಣುಮಕ್ಕಳ ಜೊತೆ ತಾರ್ಲೆ ಕುಣಿದರು. ಗೊಬ್ಬರಹಾಕಿ ಹಾಳೆ ಕೊಚ್ಚಿ

ಹೂಡಿ ಬೀಜಬಿತ್ತಲು ಅಣಿ ಮಾಡಿಕೊಂಡಿರುವಾಗ ಮಳೆರಾಯ ಬೆದೆಬಂದ ಭೂಮಿಗೆ ನೀರು ಹನಿಸದೆ ಮೋಡಗಟ್ಟಿ ಮುನಿಸಿನಲ್ಲಿರುತ್ತಾನೆ. ಆಗ ಮಳೆರಾಯನನ್ನು ಒಲಿಸಿಕೊಳ್ಳಲು ಆಯಾ ಊರಿನ ಹೆಂಗಸರು ಪುರಸೊತ್ತು ಆದ ದಿನ ತಮ್ಮೊಳಗೆ ಮಾತಾಡಿಕೊಂಡು ಕತ್ತಲೆಯಾದ ಬಳಿಕ ಬಯಲಿಗಿಳಿಯುತ್ತಾರೆ; ಹಾಡುತ್ತ ಕುಣಿಯುತ್ತಾರೆ.



ಚಣ್ಣಮೊಳೆ ಹೊಯ್ಯಲೆ ಚಣ್ಣ ಕೆರೆ ತುಂಬಲೆ
ಕಯಡಿಗಳೆಲ್ಲ ಹಯನಾಗಲೆ
ದೊಡ್ಡಾ ಮೊಳೆ ಹೋಯ್ಯಲೆ ದೊಡ್ಡ ಕೆರೆ ತುಂಬಲೆ
ಗವಿಯಗಳೆಲ್ಲ ಹಯನಾಗಲೆ
ಹೊಯ್ಯೆಹೊಯ್ಯೆ ಮೊಳಿಯೆ ನಮ್ಮೂರಿಗೆ
ನಮ್ಮೂರ ಮಕ್ಕಿ ಕತ್ತಿ ಹೊದೊ
ನಮ್ಮೂರ ಗದ್ದೆ ಸುಟ್ಟಿ ಹೊದೊ
ಹೊಯ್ಯೆ ಹೊಯ್ಯೆ

ಇಂಥ ಹಾಡುಗಳು ಕಾಡಿನ ಜೀವಿಗಳೊಂದಿಗಿನ ಹಾಲಕ್ಕಿ ಒಕ್ಕಲ ಹಳೆಯ ಸಂಬಂಧಕ್ಕೆ ಸಾಕ್ಷಿಯಾಗಿವೆ. ಕಾಡಿನ ಜೀವಿಗಳಿಗೆ ನೀರಿಲ್ಲ ಮಳೆರಾಯ ಬೇಗ ಬಾ, ಮಳೆ ತಾ ಎಂದು ಹಾರೈಸುವ ಹಾಡೇ ತಾರ್ಲೆ. ಈ ಹಾಡಿನಲ್ಲಿ ಬೆಳತನಕ ಹಾಡಬಲ್ಲ ಸಾಹಿತ್ಯವಿದೆ. ಜನ ಜೀವನದ ಚಿತ್ರವಿದೆ. ಕೇಳುಗರಿಲ್ಲ ದಾಖಲಿಸುವವರಿಲ್ಲ.

©KTBS Not to be republished

**ಕಾಡಿನ ಸಸ್ಯಜ್ಞಾನ :**

ಸುಕ್ರಿ ಪ್ರಾಣಿ, ಪಕ್ಷಿ ಮುಂತಾದ ಚರಜೀವಿಗಳ, ಸಸ್ಯಾದಿ ಅಚರ ಜೀವವೈವಿಧ್ಯದ ಜ್ಞಾನ ನಿಧಿ. ಅಪ್ಪ ಬೆಟ್ಟದಲ್ಲಿರುವ ಒಡೆಯನ ಗದ್ದೆಯನ್ನು ಹೂಡಲು ಹೋಗುತ್ತಿದ್ದಾಗ ತಾಯಿ ಹಾಗೂ ಮನೆಯ ಸದಸ್ಯರು ಕೃಷಿ ಕೆಲಸಕ್ಕೆ ಹೊರಡುತ್ತಿದ್ದರು. ಸುಕ್ರಿ ತನ್ನ ಸುಮಾರು ಹತ್ತನೆಯ ವರ್ಷಕ್ಕೆ ಇವರ ಜೊತೆಗೆ ಕೃಷಿ ಕೆಲಸಕ್ಕೆ ಹೋಗುತ್ತಿದ್ದರು. ಸೊಂಟಕ್ಕೆ ತಾಡಿದ ಚಿಕ್ಕ ಸುಳಿಮುಟ್ಟಿ ; ಈ ಮುಟ್ಟಿಯಲ್ಲೊಂದು ಚಿಕ್ಕ ಹಲ್ಗತ್ತಿ ಇವರ ಜೊತೆಯಲ್ಲಿರುತ್ತಿತ್ತು. ಬೆಟ್ಟದಲ್ಲಿ ನಡೆಯುವಾಗ, ಹಾದಿಯ ಇಕ್ಕೆಲಗಳಲ್ಲಿಯ ಮರಗಿಡಗಳು ಇವರಿಗೆ ಆಪ್ತವಾದವು. ಚಿರಕಲ, ಹಳ್ಚೆರಿ, ಪೆಪೆ, ಸಗಡೆ, ಹಪ್ಸಗಡೆ, ಕುಚುಮಾಲೆ, ಏಕನಾಯಕ, ಅಡಕೋಳಿ ಮುಂತಾದ ಸೊಪ್ಪುಗಳ ಜ್ಞಾನ ಇವರಿಗಾಯಿತು. ದೊಡ್ಡವರಾದ ಮೇಲೆ ಸೌದೆ ತರುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆಗ ಮರಮುಟ್ಟುಗಳ ಇನ್ನಷ್ಟು ಜ್ಞಾನ ಇವರ ಮಡಿಲು ತುಂಬಿದವು. ಸುಕ್ರಿಯವರ ಜೊತೆ ಕಾಡಿನಲ್ಲಿ ನಡೆಯುವುದೊಂದು ಅಪೂರ್ವ ಅನುಭವ. ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಔಷಧಶಾಸ್ತ್ರ

ಮುಂತಾದ ಜನಪದ ಶಾಸ್ತ್ರಗಳ ಭಂಡಾರವೇ ನಮ್ಮ ಜೊತೆ ನಡೆಯುತ್ತಿದ್ದಂತೆ ಅನಿಸುತ್ತದೆ. ಸುಕ್ರಿ ಪ್ರತಿ ಗಿಡಕ್ಕೂ ತನ್ನ ಪರಿಸರದ ಕನ್ನಡ ಜನಪದ ಹೆಸರುಗಳನ್ನು ಹೇಳುತ್ತ ಆಯಾ ಸಸ್ಯಗಳನ್ನು ತೋರಿಸುತ್ತ ಸಾಗುತ್ತಾರೆ. ಇವರ ಈ ಸಸ್ಯ ಜ್ಞಾನ ನಿಧಿಯನ್ನು ಅಕ್ಷರಕ್ಕಿಳಿಸಿದರೆ ಹಲವು ಗ್ರಂಥಗಳು ಸಿದ್ಧವಾಗಬಹುದು.

ಸುಕ್ರಿ ಸಾಮಾನ್ಯ ಹುಲ್ಲುಕಡ್ಡಿಗಳ ಬಗ್ಗೆಯೂ ಚೆನ್ನಾಗಿ ಬಲ್ಲರು. ಒಮ್ಮೆ ನನ್ನ ಜೊತೆ ಬಯಲಿನಲ್ಲಿ ನಡೆಯುತ್ತಿದ್ದಾಗ ಸುಕ್ರಿ ಒಂದು ಜಾತಿಯ ಹುಲ್ಲಿನ ಉದ್ದದೇಟಿನ ಹತ್ತಾರು ಹೂ ತೆನೆಗಳನ್ನು ಕೊಯ್ದುಕೊಂಡು 'ಕಟ್ಟಾಡೆ ಕುಟ್ಟಾಡೆ ಕಟ್ಟಿದ್ರೆ ಚೂಡಾಡೆ' ಎಂದು ಮತ್ತೆಮತ್ತೆ ಹೇಳತೊಡಗಿದರು, "ಇದೇನು ಒಗಟಾ ಹೇಳು ಮತ್ತೆ" ಎನ್ನುತ್ತಾ ನಾನು ಬರೆದುಕೊಳ್ಳಲೆಂದು ಪೆನ್ನೆತ್ತಿಕೊಂಡರೆ ಸುಕ್ರಿ ಮತ್ತೆ ಅದೇ ಹಾಡು "ಕಟ್ಟಾಡೇ ಕುಟ್ಟಾಡೆ ಕಟ್ಟಿದ್ರೆ ಚೂಡಾಡೇ" ಎಂದು ಹೇಳುತ್ತ ನನ್ನ ಮುಖನೋಡಿ ನಗುವರು. ಆಗ ನನ್ನ ತಲೆಯ ಟ್ಯೂಬ್‌ಲೈಟ್ ಹೊತ್ತಿಕೊಳ್ಳುತ್ತದೆ. ಈ ಹುಲ್ಲಿಗೆ ಇಷ್ಟುದ್ದದ ಇಂಥಾ ಹೆಸರಾ? ಎಂದು ಪ್ರಶ್ನಿಸುತ್ತೇನೆ. ಹೌದು ಇದಕ್ಕೆ ಇಷ್ಟು ಉದ್ದದ ಹೆಸರಿದೆ ಎಂದು ತಿಳಿಸಿ, ಹೆಸರನ್ನು ಒಂದೊಂದಾಗಿ ವಿವರಿಸಿ ಹೇಳುತ್ತಾರೆ. ಇವರೊಬ್ಬ ನಾಡವೈದ್ಯರೂ ಅಹುದು. ಮೂಲವ್ಯಾಧಿ, ಅರಿಶಿನ ಗುಂಡಗೆ, ಬಂಜೆತನಗಳಿಗೆ ಉತ್ತಮ ಔಷಧ ನೀಡಬಲ್ಲರು.

**ಚಳುವಳಿಗಳು :**

ಸುಕ್ರಿ ರೈತರ ಜೊತೆ ಕಾಲ್ನಡಿಗೆಯಲ್ಲಿಯೇ ಕಾರವಾರಕ್ಕೆ ಹೋಗಿ ಚಳುವಳಿ ನಡೆಸಿದರು. ಸಮಾಜಕ್ಕೆ ಒಳಿತಾಗುವ ಎಲ್ಲ ಚಳುವಳಿಗಳಲ್ಲಿ ಅಗ್ರ ಪಂಕ್ತಿಯಲ್ಲಿ ನಿಂತರು. ಕೋಟೆಬಾವಿ ಚಳುವಳಿ, ಬುಡಕಟ್ಟು ಜಿಲ್ಲಾ ಚಳುವಳಿ, ಸಾಕ್ಷರತಾ ಆಂದೋಲನ, ಮದ್ಯಪಾನ ವಿರೋಧಿ ಚಳುವಳಿಗಳಲ್ಲಿ ಸುಕ್ರಿಯವರ ಕಲಾ ತಂಡ ಪಾಲ್ಗೊಂಡಿರುತ್ತಿತ್ತು. ಓದು-ಬರಹ ಅರಿಯದವರಾದರೂ ಸಾಮಾಜಿಕ ಕೆಡಕು ಯಾವುದು, ಒಳಿತು ಯಾವುದು ಎಂಬುದರ ಅರಿವುಳ್ಳವರು. ಸಮಾಜಕ್ಕೆ ಒಳಿತಾಗುವ ಚಳುವಳಿಗಳಲ್ಲಿ ಭಾಗವಹಿಸಿ ಜೊತೆಯ ಹೋರಾಟಗಾರರಿಗೆ ಪ್ರೋತ್ಸಾಹ ನೀಡುವಲ್ಲಿ ಸುಕ್ರಿಯದು ಎತ್ತಿದ ಕೈ. ಇವರು ಕೊರಳ ತುಂಬ ಅಂಕೋಲೆಯ ಪರಂಪರಾಗತ ಶೈಲಿಯಲ್ಲಿ ಮಣಿಸರಗಳನ್ನು ಧರಿಸಿ ಅಲ್ಲಿಯ ಹಾಲಕ್ಕಿ ಒಕ್ಕಲ ಗೇಟ್ಗಿ ಶೈಲಿಯಲ್ಲಿ ಸೀರೆಯುಟ್ಟು ಮುಂಚೂಣಿಯಲ್ಲಿದ್ದಾರೆಂದರೆ ಚಳುವಳಿಕಾರರಿಗೆ ಆನೆಬಲ ಬರುತ್ತದೆ.

**ಸನ್ಮಾನ ಪ್ರಶಸ್ತಿಗಳು :**

ನಾಡಿನ ಬಹುದೊಡ್ಡ ಪ್ರಶಸ್ತಿಗಳಾದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಶ್ರೀ ಪ್ರಶಸ್ತಿ ಸುಕ್ರಿಯವರ ಮುಡಿಗೇರಿದವು. ರಾಜ್ಯಮಟ್ಟದ ಸಂಘ ಸಂಸ್ಥೆಗಳಲ್ಲದೆ ಜಿಲ್ಲೆ ಹಾಗೂ ಸ್ಥಳೀಯ ಸಂಘಸಂಸ್ಥೆಗಳು ಸುಕ್ರಿಯನ್ನು ಸನ್ಮಾನಿಸಿ ಗೌರವಿಸಿವೆ. ಇವರಿಗೆ ದೊರೆತ ಸನ್ಮಾನ ಪ್ರಶಸ್ತಿಗಳ ಸಂಖ್ಯೆ ಸುಮಾರು ಅರ್ಧಶತಕ ದಾಟಿವೆ. ನಾಡಿನ ಅತ್ಯುನ್ನತ ನಾಡೋಜ

©KTBS Not to be republished

ಪ್ರಶಸ್ತಿಯು ೨೦೦೭ ರಲ್ಲಿ ಒದಗಿ ಬಂದಾಗ, ಜಾನಪದಕ್ಕೆ ಹೊಸ ಗರಿ ಮೂಡಿತು. ನಾಡಿನ ಪತ್ರಿಕೆಗಳು ಇವರ ಹೋರಾಟ ಮತ್ತು ಸಾಧನೆಯನ್ನು ಕುರಿತು ಬರೆದವು.

ಸುಕ್ರಿ ಬೆಟ್ಟದ ಸೆರಗಿನ ನಾಡಿನಲ್ಲಿ ಈಗ ವಾಸವಾಗಿದ್ದರೂ, ಬಾಲ್ಯದಿಂದಲೇ ಇವರಿಗೆ ಕಾಡಿನೊಂದಿಗೆ ನಿತ್ಯ ನಿರಂತರ ಸಂಬಂಧ. ಪೂರ್ವದಲ್ಲಿ ಬೆಳಗಾಗುವ ಹಲವು ತಾಸು ಮುನ್ನವೇ ಇವರು ತನ್ನ ಜೊತೆಗಾರರ ಜೊತೆ ಕಾಡಿಗೆ ಹೊರಟರೆ ತಿರುಗಿ ಬರುವುದು ಹೊತ್ತು ಪಶ್ಚಿಮಕ್ಕೆ ತಿರುಗುವ ಸಮಯದಲ್ಲಿ. ಬಿತ್ತನೆ ಸಂದರ್ಭದಲ್ಲಿ ಕಾಡಿನಲ್ಲಿಯೇ ಸಂಜೆಯನ್ನು ಕಳೆಯುವುದೂ ಉಂಟು. ಇವರ ಪೂರ್ವಜರು ಕಾಡಿನಲ್ಲಿ ನೆಲೆಸಿ ಪಡೆದ ಅನುಭವವೂ ಪರಂಪರಾಗತವಾಗಿ ಇವರ ಬಳಿಗೆ ಬಂದಿದೆ. ಇವರು ಇದನ್ನು ಬಿಟ್ಟು ಬಿಸಾಡದೆ ಹಿಡಿದಿಟ್ಟುಕೊಂಡಿದ್ದಾರೆ. ಇದು ಇವರ ವಿಶೇಷ ಗುಣ.

* * * *

## ಕೃತಿಕಾರರ ಪರಿಚಯ :



**ಶಾಂತಿ ನಾಯಕ** ಅವರು ೧೯೪೩ ರಂದು **ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಬೇಲೇಕೇರಿಯಲ್ಲಿ** ಜನಿಸಿದರು. ಇವರು ಶಿಕ್ಷಕ ವೃತ್ತಿಯಿಂದ ನಿವೃತ್ತರಾಗಿದ್ದು, ಸುಮಾರು ೫೦ ವರ್ಷಗಳಿಂದ ಜಾನಪದ ಕ್ಷೇತ್ರದಲ್ಲಿ ಸಕ್ರಿಯವಾಗಿ ದುಡಿಯುತ್ತಿದ್ದಾರೆ.

ಜಾನಪದಕ್ಕೆ ಸಂಬಂಧಿಸಿದಂತೆ ೩೫ ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. **'ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು', 'ಉತ್ತರಕನ್ನಡ ಜಿಲ್ಲೆಯ ಹವ್ಯಕರ ಕಥೆಗಳು', 'ಜಾಣೆ ಕನ್ನಡವ ತಿಳಿದ್ದೇಳೆ', 'ಜಾನಪದ ಸುಧಾ ಸಂಚಯ', 'ಕಾಗಕ್ಕ ಗುಬ್ಬಕ್ಕ', 'ಜಾನಪದ ವೈದ್ಯಕೀಯ ಅಡುಗೆಗಳು', 'ರಂಗೋಲಿ', 'ಕುಡಿತ ನಿಮಗೆಷ್ಟು ಹಿತ', 'ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಹುಡುಕುವುದೇ', 'ದೇವಕಿ ಓದಿದಳು', 'ಜೀವ ಉಳಿಸುವ ಮರಗಳು', 'ಸುಕ್ರಿ ಬೊಮ್ಮನಗೌಡ'** – ಇವು ಅವರ ಪ್ರಮುಖ ಕೃತಿಗಳಾಗಿವೆ. ಇವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ, ಜಾನಪದ ತಜ್ಞೆ, ಮಲ್ಲಿಕಾ ಪ್ರಶಸ್ತಿ, ಪದ್ಮಭೂಷಣ ಡಾ.ಸರೋಜಾದೇವಿ ಸಾಹಿತ್ಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಹಲವು ಗೌರವಗಳೂ ಲಭಿಸಿವೆ. ಪ್ರಸ್ತುತ ಪಾಠವನ್ನು ಇವರ 'ಸುಕ್ರಿ ಬೊಮ್ಮನಗೌಡ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

©KTBS Not to be republished

## ಟಿಪ್ಪಣಿಗಳು :

೧. **ತಾರ್ಲೆ ಕುಣಿತ** : ಮಳೆ ಬಾರದಿದ್ದಾಗ ಹಾಲಕ್ಕಿ ಒಕ್ಕಲಗಿತ್ತಿಯರು ಮಳೆಗಾಗಿ ದೇವರನ್ನು ಪ್ರಾರ್ಥಿಸುವ ವಿಶಿಷ್ಟ ನರ್ತನ.

**೨. ಕುಂಬರಿ ಬೇಸಾಯ** : ಕಾಡು ಕಡಿದು, ನೆಲವನ್ನು ಬೆಂಕಿಯಿಂದ ಸುಟ್ಟು ಬೇಸಾಯ ಮಾಡುವ ಪದ್ಧತಿ. ಕುಂಬರಿ ಬೇಸಾಯದಿಂದಾಗಿ ಕಾಡು ನಾಶವಾಗುತ್ತದೆಯೆಂದು ೧೮೮೫ ರ ಹೊತ್ತಿಗೆ ಬ್ರಿಟೀಷರು ಈ ಪದ್ಧತಿಯನ್ನು ಪ್ರತಿಬಂಧಿಸಿದರು. ಆದರೂ ಸುಕ್ರಿಯ ಇತ್ತೀಚಿನ ಕಾಲಮಾನದವರೆಗೂ ಈ ಬೇಸಾಯ ಜೀವ ಹಿಡಿದುಕೊಂಡಿತ್ತು.

## ಅಭ್ಯಾಸ

### I. ಪದಗಳ ಅರ್ಥ ತಿಳಿಯಿರಿ :

**ಅಚರ** – ಸ್ಥಿರ; ಅಚಲ.
**ಅಣಿ** –ಸಿದ್ಧತೆ
**ಒಕ್ಕಲ** – ಮನೆತನ; ಬೇಸಾಯ.
**ಗದ್ದೆ** – ಜಮೀನು; ಬೇಸಾಯದ ಭೂಮಿ.
**ಗಣಿ** – ಆಶ್ರಯಸ್ಥಾನ
**ಗವಿಯಗಳೆಲ್ಲ** – ಕಾಡಿನ ಜೀವಿಗಳೆಲ್ಲ
**ಚಣ್ಣಮೊಳೆ** – ಜೋರಾದ ಮಳೆ
**ಚರ** – ಚಲಿಸು
**ಪರಂಪರಾಗತ** – ಹಿಂದಿನವರಿಂದ ಬಂದಿರುವ
**ಪೂರ್ವಜರು** – ವಂಶದ ಹಿರಿಯರು.
**ಬಂಜೆತನ** – ಮಕ್ಕಳಾಗದಿರುವುದು
**ಬೆದೆ** – ಬಿತ್ತನೆಗೆ ಹದವಾದ ಕಾಲ.
**ಬುಡಕಟ್ಟು** – ಮೂಲ ಜನಾಂಗ
**ಮಕ್ಕಿಕತ್ತಿ** – ಬೆಳೆ ಬೆಳೆದಿರುವ ಎತ್ತರದ ಭೂಮಿ.
**ಮುಂಚೂಣಿ** – ಮುಂದಾಳತ್ವ; ನಾಯಕತ್ವ
**ಸಪ್ದೆ** – ಉರುವಲು ಕಟ್ಟಿಗೆ
**ಸುಗ್ಗಿ** – ಧಾನ್ಯಗಳ ಕೊಯ್ಲಿನ ಕಾಲ
**ಹನಿಸದೆ** – ಬೀಳದೆ
**ಹಯನಾಗು** – ಸಮೃದ್ಧವಾಗು
**ಹಲ್ಗತ್ತಿ** – ಹಲ್ಲುಗಳಿರುವ ಕತ್ತಿ
**ಹಾಳೆ** – ಗದ್ದೆಯ ಸೀಳು
**ಹೆಕ್ಕಿ** – ಆರಿಸು
**ಹೊಟ್ಟೆಪಾಡು** – ಜೀವನೋಪಾಯ
**ಹೊಯ್ಯಲೆ** – ಸುರಿಯುವುದು

©KTBS Not to be republished

### II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಸುಕ್ರಿಯ ತಂದೆ ತಾಯಿಗಳ ಹೆಸರೇನು?

೨. ಸುಕ್ರಿಯ ತಂದೆಯಲ್ಲಿದ್ದ ಜಾನಪದ ಕಲೆಗಳಾವುವು?

೩. ಲೇಖಕರಿಗೆ ಸುಕ್ರಿ ಪರಿಚಯಿಸಿದ ಉದ್ದದ ಹೆಸರಿನ ಹುಲ್ಲು ಯಾವುದು?

೪. ಸುಕ್ರಿಯವರಿಗೆ ದೊರೆತ ನಾಡಿನ ಅತ್ಯುನ್ನತ ಪ್ರಶಸ್ತಿ ಯಾವುದು?

೫. ಸುಕ್ರಿಯವರಲ್ಲಿ ಕಾಣಬರುವ ವಿಶೇಷ ಗುಣ ಯಾವುದು?

೬. ಸುಕ್ರಿ ಯಾವ ಒಕ್ಕಲು ಜನಾಂಗಕ್ಕೆ ಸೇರಿದ ಮಹಿಳೆ?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಸುಕ್ರಿ ಬಾಲ್ಯದಲ್ಲಿ ಜನಪದ ಆಟಗಳನ್ನು ಹೇಗೆ ಕಲಿತಳು?

೨. ತಾರ್ಲೆ ಕುಣಿತದ ವಿಶೇಷವೇನು?

೩. ಸುಕ್ರಿಯವರಿಗೆ ಯಾವ ಯಾವ ಸೊಪ್ಪುಗಳ ಜ್ಞಾನವಿದೆ?

೪. ಸುಕ್ರಿಯವರು ಪಾಲ್ಗೊಂಡ ಚಳುವಳಿಗಳಾವುವು?

೫. ಸುಕ್ರಿಯವರ ವೇಷಭೂಷಣಗಳು ಹೇಗಿರುತ್ತವೆ?

೬. ಸುಕ್ರಿಯವರಿಗೆ ದೊರೆತ ಪ್ರಶಸ್ತಿಗಳಾವುವು?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಸುಕ್ರಿಯವರು ಜಾನಪದದ ಗಣಿ ಆದುದು ಹೇಗೆ?

೨. ಸುಕ್ರಿಗೆ ಕಾಡಿನ ಸಸ್ಯಜ್ಞಾನ ಹೇಗೆ ದೊರೆಯಿತು?

೩. ಸುಕ್ರಿ ಬೊಮ್ಮನಗೌಡ ಸಾಮಾಜಿಕ ಕಳಕಳಿ ಹೊಂದಿರುವ ಮಹಿಳೆ ಎಂಬುದನ್ನು ಹೇಗೆ ಹೇಳಬಹುದು?

©KTBS Not to be republished

**ಈ) ಸಂದರ್ಭದೊಡನೆ ವಿವರಿಸಿರಿ.**

೧. ಈ ಬಯಲುಗಳೇ ಜನಪದ ಆಟಗಳ ತರಬೇತಿ ಶಾಲೆಗಳಾದವು.

೨. ಜನಪದ ಶಾಸ್ತ್ರಗಳ ಭಂಡಾರವೇ ನಮ್ಮ ಜೊತೆ ನಡೆಯುತ್ತಿದ್ದಂತೆ ಅನಿಸುತ್ತದೆ.

೩. 'ಕಟ್ಟಾಡೆ ಕುಟ್ಟಾಡೆ ಕಟ್ಟಿದ್ರೆ ಚೂಡಾಡೆ'

೪. ಚಳುವಳಿಗಾರರಿಗೆ ಆನೆಬಲ ಬರುತ್ತದೆ.

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಸುಸ್ವಾಗದ, ಕ್ರೀಡಾಂಗಣ, ಕಣ್ಣುಕಟ್ಟಾಟ, ಹಲ್ಗತ್ತಿ, ಕಾಲ್ನಡಿಗೆ, ಅತ್ಯುನ್ನತ.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಚರ, ಜ್ಞಾನ, ಕೆಡಕು, ಸನ್ಮಾನ.



ಕೋತಿ ತಾನು ಕೆಡುವುದಲ್ಲದೆ, ವನವನ್ನೆಲ್ಲಾ ಕೆಡಿಸಿತು.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ಹೊಟ್ಟೆಪಾಡು, ಆಪ್ತವಾಗು, ಅಪೂರ್ವ ಅನುಭವ, ಜ್ಞಾನ ನಿಧಿ, ಪರಂಪರಾಗತ, ಆನೆಬಲ.

**ಈ) ಕೆಳಗಿನ ಪದಗಳಿಗೆ ತತ್ಸಮ–ತದ್ಭವಗಳನ್ನು ಬರೆಯಿರಿ.**

ಸಾಲೆ, ಜ್ಞಾನ, ಅಕ್ಷರ, ಮುಖ, ಪಕ್ಷಿ.

**ಉ) ಕೆಳಗಿನ ಮಾದರಿಯಂತೆ ಹತ್ತು ಪದಗಳನ್ನು ಬರೆಯಿರಿ.**

| | | | | |
|---|---|---|---|---|
| **ಮಾದರಿ :** | ಹಾಡು | + | ಗಾರ | = ಹಾಡುಗಾರ |
| | ನೃತ್ಯ | + | ಗಾರ | = ನೃತ್ಯಗಾರ |

## IV. ಸೈದ್ಧಾಂತಿಕ ವ್ಯಾಕರಣ :

### ನಾಮಪದ

(ನಾಮಪದ–ನಾಮಪ್ರಕೃತಿ–ನಾಮ ವಿಭಕ್ತಿ ಪ್ರತ್ಯಯ)

©KTBS Not to be republished

ಶಾಲೆಯು ಶಾಲೆಯನ್ನು, ಶಾಲೆಯಿಂದ, ಶಾಲೆಗೆ, ಶಾಲೆಯದೆಸೆಯಿಂದ, ಶಾಲೆಯ, ಶಾಲೆಯಲ್ಲಿ – ಈ ಎಲ್ಲಾ ಪದಗಳು ನಾಮಪದಗಳು. ಇವುಗಳಲ್ಲಿ 'ಶಾಲೆ' ಎಂಬುದು ಮೂಲರೂಪ. ನಾಮಪದದ ಮೂಲ ರೂಪವನ್ನು **'ನಾಮಪ್ರಕೃತಿ'** ಎನ್ನುತ್ತೇವೆ. ನಾಮ ಪದದ ಮೂಲರೂಪದೊಂದಿಗೆ ಸೇರಿರುವ – ಉ, ಅನ್ನು, ಇಂದ, ಗೆ, ದೆಸೆಯಿಂದ, ಅ, ಅಲ್ಲಿ – ಇವು ವಿಭಕ್ತಿ ಪ್ರತ್ಯಯಗಳು. ಹೀಗೆ ನಾಮಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರಿದ ರೂಪವನ್ನು **'ನಾಮಪದ'** ಎಂದು ಕರೆಯುತ್ತೇವೆ.

| **ನಾಮಪ್ರಕೃತಿ** | + | **ಪ್ರತ್ಯಯ** | = **ನಾಮಪದ** |
|---|---|---|---|
| ಮನೆ | + | ಅನ್ನು | = ಮನೆಯನ್ನು |
| ರಾಮ | + | ಅನ್ನು | = ರಾಮನನ್ನು |

ಒಂದು ವಸ್ತು, ಒಬ್ಬ ವ್ಯಕ್ತಿ, ಒಂದು ಸ್ಥಳದ ಹೆಸರಾಗಿರಬಹುದು ಅಥವಾ ಒಂದು ಗುಂಪನ್ನು ಸೂಚಿಸುವ ಪದವಾಗಿರಬಹುದು ಅಥವಾ ಗುಣ, ಸ್ವಭಾವ, ಸಂಖ್ಯೆ, ಸ್ಥಾನ, ಅಳತೆ, ತೂಕ ಇತ್ಯಾದಿಗಳನ್ನು ಸೂಚಿಸುವ ಪದಗಳಾಗಿರಬಹುದು. ಅವುಗಳನ್ನು ನಾಮಪದಗಳೆಂದು ಕರೆಯುತ್ತೇವೆ.



ದುಡಿಯದೆ ತಿನ್ನಬಾರದು, ಉಣ್ಣದೆ ಮಲಗಬಾರದು.

**ನಾಮಪದದ ವಿಧಗಳು :**

೧. ವಸ್ತುವಾಚಕ ಅಥವಾ ನಾಮವಾಚಕ
೨. ಗುಣವಾಚಕ
೩. ಸಂಖ್ಯಾವಾಚಕ
೪. ಸಂಖ್ಯೇಯ ವಾಚಕ
೫. ಭಾವನಾಮಗಳು
೬. ಪರಿಮಾಣವಾಚಕ
೭. ಪ್ರಕಾರವಾಚಕ
೮. ದಿಗ್ವಾಚಕ
೯. ಸರ್ವನಾಮಗಳು

## ವಿಭಕ್ತಿಗಳು ಪ್ರತ್ಯಯಗಳು :

'ಭೀಮನು ತನ್ನ ಬಲಗಾಲಿನಿಂದ ಚೆಂಡನ್ನು ಒದೆದನು' ಈ ವಾಕ್ಯವು – ಭೀಮ, ತಾನು, ಬಲಗಾಲು, ಚೆಂಡು – ಹೀಗೆ ಕೇವಲ ನಾಮಪ್ರಕೃತಿಗಳನ್ನೇ ಹೇಳಿ ಒದೆದನು ಎಂದಿದ್ದರೆ ಅರ್ಥವಾಗುತ್ತಿರಲಿಲ್ಲ.

'ಭೀಮ, ತಾನು, ಬಲಗಾಲು, ಚೆಂಡು' ಈ ನಾಲ್ಕು ಪ್ರಕೃತಿಗಳಿಗೆ ಪರಸ್ಪರ ವಾಕ್ಯದಲ್ಲಿ ಒಂದು ಸಂಬಂಧವಿದೆ. ಈ ಸಂಬಂಧವನ್ನು ವಿಭಕ್ತಿ ಪ್ರತ್ಯಯಗಳು ಉಂಟುಮಾಡುತ್ತವೆ. ಈ ರೀತಿ ನಾಮಪ್ರಕೃತಿಗೆ ಸೇರುವ ಪ್ರತ್ಯಯಗಳನ್ನು **'ವಿಭಕ್ತಿ ಪ್ರತ್ಯಯಗಳು'** ಎನ್ನುತ್ತಾರೆ.

| ವಿಭಕ್ತಿಯ ಹೆಸರು | ನಾಮಪ್ರಕೃತಿ | ವಿಭಕ್ತಿ ಪ್ರತ್ಯಯ | ನಾಮಪದ |
|---|---|---|---|
| ಪ್ರಥಮಾ ವಿಭಕ್ತಿ | ಮರ | ಉ | ಮರವು |
| ದ್ವಿತೀಯಾ ವಿಭಕ್ತಿ | ಮರ | ಅನ್ನು | ಮರವನ್ನು |
| ತೃತೀಯಾ ವಿಭಕ್ತಿ | ಮರ | ಇಂದ | ಮರದಿಂದ |
| ಚತುರ್ಥೀ ವಿಭಕ್ತಿ | ಮರ | ಕೆ, ಗೆ, ಇಗೆ | ಮರಕ್ಕೆ |
| ಪಂಚಮೀ ವಿಭಕ್ತಿ | ಮರ | ದೆಸೆಯಿಂದ | ಮರದದೆಸೆಯಿಂದ |
| ಷಷ್ಠೀ ವಿಭಕ್ತಿ | ಮರ | ಅ | ಮರದ |
| ಸಪ್ತಮೀ ವಿಭಕ್ತಿ | ಮರ | ಅಲ್ಲಿ | ಮರದಲ್ಲಿ |
| ಸಂಬೋಧನಾ ವಿಭಕ್ತಿ | ಮರ | ಏ, ಇರಾ | ಮರಗಳಿರಾ |

©KTBS Not to be republished

## V. ಚಟುವಟಿಕೆ :

೧. ನಿಮ್ಮ ಸುತ್ತಮುತ್ತ ಕಂಡುಬರುವ ಒಗಟು, ಗಾದೆ, ಚೌಟಗಿಪದ, ಗೀಗೀ ಪದ, ಸೋಬಾನೆ ಪದ ಇತ್ಯಾದಿಗಳನ್ನು ಧ್ವನಿಮುದ್ರಿಸಿಕೊಂಡು, ಬರೆವಣಿಗೆಯ ರೂಪಕ್ಕೆ ತನ್ನಿರಿ.

೨. ವಿವಿಧ ಜಾತಿಯ ಸೊಪ್ಪು ಹಾಗೂ ತರಕಾರಿಗಳ ಗುಣ ವಿಶೇಷತೆಗಳನ್ನು ಕೇಳಿ ತಿಳಿಯಿರಿ ಹಾಗೂ ನಿತ್ಯ ಊಟದಲ್ಲಿ ಬಳಸಿರಿ.



ನಾಲಿಗೆ ಒಳ್ಳೆಯದಾದರೆ, ನಾಡೆಲ್ಲಾ ಒಳ್ಳೆಯದು.

G8M8I2

# ೫. ಕಾಲವನ್ನು ಗೆದ್ದವರು

**– ಕೆ. ಟಿ. ಗಟ್ಟಿ**

**ಪಾಠ ಪ್ರವೇಶ : "ಪ್ರವಾಸ ಸಾಹಿತ್ಯ"** ಎಂಬುದು ಯಾವುದೇ ಭಾಷೆಯಲ್ಲಿ ಅತ್ಯಂತ ವಿಶಿಷ್ಟವಾದ ಸಾಹಿತ್ಯ ಪ್ರಕಾರ. ನಾವು ಎಲ್ಲರೂ ಪ್ರವಾಸ ಹೋಗುತ್ತೇವೆ. ಆದರೆ ಹೋಗಿಬಂದ ಸ್ಥಳದ ಬಗ್ಗೆ ಬರೆಯುವವರು ಕಡಮೆ. ಕೆಲವರು ಖುಷಿಗಾಗಿ ಪ್ರವಾಸ ಮಾಡುತ್ತಾರೆ, ರಜೆ ಸಿಕ್ಕಿತೆಂದು ಹೊಸ ಊರುಗಳನ್ನು ನೋಡಿಕೊಂಡು ಬರುವವರಿದ್ದಾರೆ, ಮನಸ್ಸಿಗೊಂದು ಬದಲಾವಣೆ ಬೇಕು ಎಂಬ ಕಾರಣಕ್ಕೆ ಹೊಸ ಸ್ಥಳಗಳನ್ನು ಸಂದರ್ಶಿಸುವವರಿದ್ದಾರೆ. ಇನ್ನು ಕೆಲವರು ಅಧ್ಯಯನ ಮಾಡಲೆಂದೇ ಪ್ರವಾಸ ಮಾಡುತ್ತಾರೆ. ಹೀಗೆ ಒಬ್ಬೊಬ್ಬರ ಉದ್ದೇಶಗಳೂ ಭಿನ್ನವಾಗಿರುತ್ತವೆ. ಪ್ರವಾಸ ಮಾಡಿದ ಅನುಭವಗಳನ್ನು ಬರೆಯುವವರ ಸಂಖ್ಯೆ ಕಡಮೆ – ಹಾಗೆ ಬರೆಯುವವರು ಕೂಡ ತಾವು ಹೋದ ಬಸ್ಸಿನ ಅಥವಾ ವಿಮಾನದ ಪ್ರಯಾಣವನ್ನೋ, ತಾವು ಉಳಿದುಕೊಂಡ ಹೊಟೇಲು, ವಸತಿಗೃಹಗಳ ಬಗ್ಗೆಯೋ ಬರೆಯುವುದೇ ಹೆಚ್ಚು. ತಾವು ಸಂದರ್ಶಿಸಿದ ಸ್ಥಳಗಳ ಬಗ್ಗೆ ಬರೆಯುವವರು ಕೂಡ ಅಲ್ಲಿ ಕಂಡ ಪ್ರಕೃತಿ, ಕಟ್ಟಡಗಳ ವರ್ಣನೆ ಮಾಡುತ್ತಾರೆ. ಆದರೆ ಕೆಲವರು ಮಾತ್ರ ತಾವು ಭೇಟಿಕೊಟ್ಟ ಸ್ಥಳದ ಐತಿಹಾಸಿಕ, ಸಾಂಸ್ಕೃತಿಕ ಆಯಾಮಗಳನ್ನು ಬಿಚ್ಚಿಡುತ್ತಾರೆ. ಹೊಸ ಒಳನೋಟಗಳನ್ನು ಕೊಡುತ್ತಾರೆ. ಅವರು ಕೇವಲ ಸ್ಥಳಗಳನ್ನು ನೋಡುವುದಲ್ಲ, "ಕಾಣುತ್ತಾರೆ".



ವೀರ ಸಾವರ್ಕರ್ ಎಂದೇ ಪ್ರಸಿದ್ಧರಾದ ವಿನಾಯಕ ದಾಮೋದರ ಸಾವರ್ಕರ್ ಅವರು ಬ್ರಿಟಿಷರಿಂದ ಕಠೋರ ಶಿಕ್ಷೆಗೆ ಗುರಿಯಾದರು. ಅವರನ್ನು ಎರಡು ಜೀವಾವಧಿ ಶಿಕ್ಷೆಗಳಿಗೆ ಗುರಿಪಡಿಸಲಾಯಿತು. ಒಟ್ಟು ಐವತ್ತು ವರ್ಷಗಳ ಜೈಲುವಾಸವನ್ನು ಅನುಭವಿಸಬೇಕೆಂಬ ತೀರ್ಪು! ಅದೂ ಅತ್ಯಂತ ಕಠಿಣ ಸೆರೆ. ಅವರನ್ನು ಭಾರತದ ಮುಖ್ಯಭೂಮಿಯಿಂದ ಸಾವಿರಾರು ಮೈಲಿ ದೂರದಲ್ಲಿರುವ ಅಂಡಮಾನ್ ದ್ವೀಪಕ್ಕೆ ಕಳಿಸಲಾಯಿತು. ತಮ್ಮ ನಿರಂಕುಶ ಪ್ರಭುತ್ವಕ್ಕೆ ಅತ್ಯಂತ ಅಪಾಯಕಾರಿ ಎಂದು ಪರಿಗಣಿಸಿದ ಮಂದಿಯನ್ನು ಅಂಡಮಾನಿನ ದ್ವೀಪದಲ್ಲಿ ಕಟ್ಟಿದ್ದ ಅತ್ಯಂತ ಬಲಿಷ್ಠ ಜೈಲಿನಲ್ಲಿ ಹಾಕುತ್ತಿದ್ದರು ಬ್ರಿಟಿಷರು. ಸಾವರ್ಕರರನ್ನೂ ಅಲ್ಲಿಗೇ ಕಳಿಸಲಾಯಿತು. ಅಲ್ಲಿ ಮೊದಲ ಆರು ತಿಂಗಳು ಅವರನ್ನು ಏಕಾಂತಶಿಕ್ಷೆಗೆ ಗುರಿಪಡಿಸಲಾಯಿತು. ಅಂದರೆ ಅವರು ಕತ್ತಲಗೂಡಿನಲ್ಲಿ ಕಳೆಯಬೇಕು. ಹಗಲು–ಇರುಳುಗಳ ವ್ಯತ್ಯಾಸವೇ ಗೊತ್ತಾಗದ ಪರಿಸ್ಥಿತಿ. ಈ ಸ್ಥಿತಿಯಲ್ಲಿ ಮೂರ್ನಾಲ್ಕು ದಿನ ಕಳೆಯುವಷ್ಟರಲ್ಲೇ ಬಹುತೇಕ ಮಂದಿಯ ಮಾನಸಿಕ ಸ್ವಾಸ್ಥ್ಯ ಕೆಡುತ್ತದೆ. ಅಂಥ ಕತ್ತಲೆಯಲ್ಲಿ ಕೋಳಿಗೂಡಿನಂಥ ಕೋಣೆಯಲ್ಲಿ ಸಾವರ್ಕರ್ ಆರು ತಿಂಗಳು ಕಳೆದರು. ನಂತರ ಅವರನ್ನು ಕಠಿಣ ಪರಿಶ್ರಮದ ದುಡಿಮೆಗೆ ತಳ್ಳಲಾಯಿತು. ಎತ್ತುಗಳನ್ನು ಹೂಡುವ ಜಾಗಕ್ಕೆ ಅವರನ್ನು ಹೂಡಿ ಗಾಣದಿಂದ ಎಣ್ಣೆ ತೆಗೆಯಲಾಗುತ್ತಿತ್ತು. ತೆಂಗಿನ ನಾರನ್ನು ಹೊಸೆದು ಹಗ್ಗ ಮಾಡಬೇಕಿತ್ತು. ವಿಪರೀತ ದುಡಿಮೆಯಿಂದ ಕೈಯ ಚರ್ಮ ಕಿತ್ತು ನೆತ್ತರು ಬಂದರೂ ಕೆಲಸವನ್ನಂತೂ ನಿಲ್ಲಿಸುವಂತೆಯೇ ಇರಲಿಲ್ಲ. ಕ್ಷಣಹೊತ್ತು ಚಟುವಟಿಕೆ ನಿಲ್ಲಿಸಿ ವಿರಾಮ ತೆಗೆದುಕೊಂಡರೂ ಬಾರುಕೋಲಿನ ಹೊಡೆತ ಬೆನ್ನ ಮೇಲೆ! ಇಂಥ ಅಮಾನುಷ ಶಿಕ್ಷೆಯನ್ನೆಲ್ಲ ಸಾವರ್ಕರ್ ಅನುಭವಿಸಿದ್ದು ಅಂಡಮಾನಿನ ಸೆಲ್ಯುಲಾರ್ ಜೈಲಿನಲ್ಲಿ. ಆ ಜೈಲಿಗೆ ಭೇಟಿಕೊಟ್ಟಾಗ ಲೇಖಕರು ಅನುಭವಿಸಿದ ಭಾವನೆಗಳನ್ನು ಇಲ್ಲಿ ದಾಖಲಿಸಿದ್ದಾರೆ.

©KTBS Not to be republished



ಬೆಳೆಯುವ ಸಿರಿಯನ್ನು ಮೊಳಕೆಯಲ್ಲಿ ನೋಡು.

"ಸಾಗರಕ್ಕೆ ತೊಡಿಸಿದ ಆಭರಣದಂತೆ, ದೇವತೆಗಳಿಗೆಂದು ನಿರ್ಮಿಸಿದ ಅರಮನೆಯಂತೆ ಕಂಗೊಳಿಸುವ ಈ ದ್ವೀಪಗಳ ಸೌಂದರ್ಯವು ಕಾಲುಗಳಿಗೆ ಸಂಕೋಲೆ ಹಾಕಿ ಎಳೆದೊಯ್ಯಲ್ಪಡುವ ಈ ಸ್ಥಿತಿಯಲ್ಲಿಯೂ ನನ್ನ ಕಣ್ಸೆಳೆಯುತ್ತಿದೆ" ವೀರ ಸಾವರ್ಕರ್‌ರ ಮಾತುಗಳು.

ನಾಲ್ಕೂವರೆ ಮೀಟರ್ ಉದ್ದ ಎರಡೂ ಮುಕ್ಕಾಲು ಮೀಟರ್ ಅಗಲದ ಕೋಣೆ. ಯಾರಿಂದಲೂ ಮುರಿಯಲಾಗದ ದಪ್ಪನೆಯ ಸರಳುಗಳಿರುವ ಬಾಗಿಲು. ಬಾಗಿಲ ಪಕ್ಕದಿಂದ ಗೋಡೆಯ ಮೂಲಕ ಹಾದು ಗೋಡೆಯ ಕಿಂಡಿಯಲ್ಲಿರುವ ಕೊಂಡಿಗೆ ಸಿಲುಕಿಸುವ ಬೋಲ್ಟ್. ದಪ್ಪನೆಯ ಬೀಗ. ಪ್ರತಿಯೊಂದು ಕೋಣೆಗೂ ಬೆಳಕು ಬೀಳುವಂತೆ ಜಗಲಿಯಲ್ಲಿ ಎತ್ತರಕ್ಕೆ ಕೋಣೆಗೊಂದರಂತೆ ತೂಗುಹಾಕಿದ ಲಾಟೀನು.

ಕೋಣೆಯೊಳಗಿನ ಹಿಂಬದಿ ಗೋಡೆಯಲ್ಲಿ ಎತ್ತರದಲ್ಲಿ ಆಕಾಶ ಕೂಡ ಕಾಣಿಸದ ಕಿಂಡಿ. ಸಾವರ್ಕರ್‌ರ ಕೋಣೆಯಲ್ಲಿ ಆ ಕಿಂಡಿ ಕೂಡ ಇಲ್ಲ. ಆದರೂ ಎಲ್ಲಿಂದಲೋ ಬುಲ್‌ಬುಲ್ ಹಕ್ಕಿಗಳು ಹಾರಿ ಸೆಲ್‌ನೊಳಗೆ ಬರುತ್ತಿದ್ದವು. ಅವುಗಳ ರೆಕ್ಕೆಯ ಮೇಲೆ ಕುಳಿತು ಸಾವರ್ಕರ್ ಪ್ರತಿದಿನ ತಾಯ್ನಾಡಿನ ನೆಲವನ್ನು ಸಂದರ್ಶಿಸಿ ಬರುತ್ತಿದ್ದರು.

ನಮ್ಮ ಸ್ವಾತಂತ್ರ್ಯಕ್ಕಾಗಿ ಲಕ್ಷಗಟ್ಟಲೆ ಜನರು ಮಾಡಿದ ತ್ಯಾಗ, ಬಲಿದಾನ ಮತ್ತು ಅನುಭವಿಸಿದ್ದ ಯಾತನೆಯ ನೆನಪಾದರೂ ನಮ್ಮ ದೇಶದ ಆಡಳಿತ ಯಂತ್ರವನ್ನು ನಡೆಸುವ ಯಾವನೇ ಮಂತ್ರಿಗೆ ಅಥವಾ ಅಧಿಕಾರಿಗೆ ಆಗುತ್ತದೆಯೇ ಎಂದು ಯೋಚಿಸುತ್ತ ಸೆಲ್ಯುಲರ್ ಜೈಲಿನ ದೀರ್ಘವಾದ ಜಗಲಿಯುದ್ದಕ್ಕೆ ನಡೆದೆ.

ಸಾವರ್ಕರ್‌ರ ಕೋಣೆ ನೋಡಿದೆ. ಗೋಡೆಯ ಮೇಲೆ ಅವರ ಭಾವಚಿತ್ರವಿದೆ. ಒಂದು ಗೋಡೆಯಲ್ಲಿ ಯಾರೋ ಅವರ ಚಿತ್ರ ಬರೆದಿದ್ದಾರೆ. ಅವರ ಕೆಲವು ಮಾತುಗಳನ್ನೂ ಬರೆಯಲಾಗಿದೆ. ಮೊದಲು ಎಷ್ಟೋ ದಿನಗಳವರೆಗೆ ಸಾವರ್ಕರ್‌ರ ಕೈಗೆ ಹಾಕಿದ ಕೋಳದ ಸಂಕೋಲೆಯನ್ನು ಬಾಗಿಲ ಮೇಲಿನ ಕೊಂಡಿಗೆ ಸಿಲುಕಿಸಿಡಲಾಗುತ್ತಿತ್ತಂತೆ. ಶೌಚ, ಊಟ ಮತ್ತು ನಿದ್ರೆಯ ವೇಳೆಯ ಹೊರತು ಇತರೆಲ್ಲ ವೇಳೆಯಲ್ಲಿ ಈ ಸ್ಥಿತಿಯಲ್ಲಿ ನಿಂತೇ ಇರಬೇಕು. ದುಡಿಮೆಯಾದರೋ ಕಾಲುಗಳಿಗೆ ಸರಪಳಿ ತೊಡಿಸಿದ ಸ್ಥಿತಿಯಲ್ಲಿ ಬೆಳಗ್ಗೆ ನಾಲ್ಕು ಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೆ. ಎಂಥ ದುಡಿಮೆ? ತೆಂಗಿನ ಸಿಪ್ಪೆ ಗುದ್ದಿ ನಾರು ತೆಗೆದು ಹಗ್ಗ ಹೊಸೆಯಬೇಕು. ಚರ್ಮ ಸುಲಿದು ರಕ್ತ ಬಂದರೆ ಚಿಕಿತ್ಸೆ ಇಲ್ಲ. ಎತ್ತಿನಂತೆ ಗಾಣ ತಿರುಗಿಸುವಾಗ ಮಲಮೂತ್ರಕ್ಕೆ ಕೂಡ ಅವಕಾಶ ಇಲ್ಲ. ಮೈಮೇಲೆ ಲಂಗೋಟಿ ಮಾತ್ರ. ಕೆಲಸ ನಿಧಾನವಾದರೆ ಚಾಟಿಯೇಟು!

ಅಣ್ಣ ದಾಮೋದರ್ ಸಾವರ್ಕರ್ ಮತ್ತು ತಮ್ಮ ವೀರ ವಿನಾಯಕ ಸಾವರ್ಕರ್ ಇಬ್ಬರನ್ನೂ ಒಟ್ಟಿಗೇ ಸೆಲ್ಯುಲರ್ ಜೈಲಿನಲ್ಲಿ ಇರಿಸಲಾಗಿತ್ತು. ಆದರೆ ಸಹೋದರರು ಒಬ್ಬರನ್ನೊಬ್ಬರು ಕಂಡದ್ದು ಒಂಬತ್ತು ತಿಂಗಳ ಅನಂತರ! ಯಾತನೆಯನ್ನು ಸಹಿಸಿ ಸಹಿಸಿ ಕೊನೆಗೆ ವೀರ ಸಾವರ್ಕರ್ ಕ್ಷಯ ರೋಗಕ್ಕೆ ತುತ್ತಾದರು. ತಮ್ಮನಾದ ಡಾಕ್ಟರ್ ಬಾಲ್‌ಸಾವರ್ಕರ್‌ಗೆ ವರ್ಷಕ್ಕೊಂದು ಪತ್ರ ಬರೆಯಲು ಅವಕಾಶ. ಹಾಗೆ ಒಂಬತ್ತು ವರ್ಷಗಳಲ್ಲಿ ಬರೆದ ಪತ್ರ ಒಟ್ಟು ಎಂಟು.

೧೯೧೧, ಜನವರಿ ೩೧ರಂದು ಸೆಲ್ಯುಲರ್ ಜೈಲಿನಲ್ಲಿರಿಸಲ್ಪಟ್ಟ ಹದಿನೆಂಟು ತಿಂಗಳ ಅನಂತರ ಪೂನಾದಲ್ಲಿರುವ ತಮ್ಮನಿಗೆ ಬರೆದ ಮೊದಲ ಪತ್ರದಲ್ಲಿ ಸಾವರ್ಕರ್ ಬರೆಯುತ್ತಾರೆ. "ನನ್ನ ಮುದ್ದು ಬಾಲು, ನನ್ನ ಬಗ್ಗೆ ಹೇಳಹೊರಡುತ್ತೇನೆ. ನಾನು ಇಲ್ಲಿ ಕುಶಲವಾಗಿದ್ದೇನೆ. ನನ್ನ ದೈಹಿಕ, ಮಾನಸಿಕ ಆರೋಗ್ಯ ಚೆನ್ನಾಗಿದೆ. ನನ್ನ ಪ್ರೀತಿಯ ತಮ್ಮ, ಇದು ಸತ್ಯ. ಜೈಲಿಗೆ ಬರುವುದು ವ್ಯಕ್ತಿಯ ಜೀವನದಲ್ಲಿ





©KTBS Not to be republished

ಅಪೂರ್ವ ಸಂಧಿ. ಜೈಲಿನೊಳಗೆ ಅಡಿಯಿಟ್ಟಾಗ ವ್ಯಕ್ತಿ ಹೇಗಿರುತ್ತಾನೋ ಹಾಗೆಯೇ ಹೊರಬರುವಾಗಲೂ ಇರುತ್ತಾನೆ ಎಂದು ಹೇಳಲಾಗದು. ಜೈಲಿಗೆ ಬರುವಾಗ ಮನುಷ್ಯನಾಗಿದ್ದ ವ್ಯಕ್ತಿ ಹೊರಬೀಳುವಾಗ ದೇವನಾಗಿ ಬದಲಾಗಬಹುದು ಅಥವಾ ದಾನವನಾಗಿ ಬದಲಾಗಬಹುದು. ನನ್ನ ವಿಷಯದಲ್ಲಿ ಏನೂ ವ್ಯತ್ಯಾಸ ಆಗದು. ನಾನು ಜೈಲಿನ ಜೀವನಕ್ಕೆ ಹೊಂದಿಕೊಂಡಿದ್ದೇನೆ. ಅದು ಅಚ್ಚರಿಯಲ್ಲವೆ! ಹೇಳು. ನಾನು ಯಾವಾಗಲೂ ಅಲೆಯುತ್ತಿದ್ದೆ. ದೇಶದೇಶಗಳನ್ನು ತಿರುಗುವ, ಸದಾ ಯಾವುದಾದರೊಂದು ಹವ್ಯಾಸದಲ್ಲಿ ತೊಡಗಿರುವ ನನ್ನಂಥ ವ್ಯಕ್ತಿ ಕೇವಲ ಹನ್ನೆರಡು ಅಡಿಗಳಷ್ಟು ವಿಸ್ತೀರ್ಣವುಳ್ಳ ಒಂದು ಕೂಪದಲ್ಲಿ ಬಂಧಿತನಾಗಿ ಕಾಲ ತಳ್ಳಬೇಕಾಗಿದೆ. ಇದು ಸಾಧ್ಯವೆ! ಎಂದರೆ, ನನ್ನ ವಿಷಯದಲ್ಲಿ ಇದು ಸಾಧ್ಯವಾಗಿದೆ. ಜೈಲಿನ ಜೀವನಕ್ಕೆ ಹೊಂದಿಕೊಂಡು ಬಿಟ್ಟಿದ್ದೇನೆ ನಾನು. ಮಾನವನಿಗೆ ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳುವ ಈ ಸ್ವಭಾವ ಇರುವುದರಿಂದಲೇ ಅಲ್ಲವೆ ಅವನು ಜೀವಿಸಲು ಶಕ್ಯವಾದದ್ದು ಎನಿಸುತ್ತದೆ."

ಕೊನೆ ಕೊನೆಗೆ ಸಾವರ್ಕರ್‌ರ ಆರೋಗ್ಯ ಕೆಟ್ಟಿತು. ಆದರೆ ಜೈಲಿನ ಸ್ಥಿತಿಯಲ್ಲಾದ ಅಲ್ಪ ಸುಧಾರಣೆಯಿಂದಾಗಿ ಸಂಜೆ ನಾಲ್ಕರ ಅನಂತರ ಬಿಡುವು ಸಿಗತೊಡಗಿತು. ಓದುವ ಬರೆಯುವ ಅವಕಾಶ. "ಬೆಳಗ್ಗೆ ಐದು ಗಂಟೆಗೆ ಕೆಲಸ ಪ್ರಾರಂಭವಾಗುತ್ತದೆ. ನಾನು ಎದ್ದು ಕೆಲಸಕ್ಕೆ ಹೊರಡುವಾಗ ಯಾವುದೋ ಉಚ್ಚ ವಿಶ್ವವಿದ್ಯಾಲಯದಲ್ಲಿ ಕಠಿಣ ಶಿಕ್ಷಣ ಪಡೆಯುತ್ತಿದ್ದೇನೆ ಎನಿಸುತ್ತದೆ ನನಗೆ. ಐದರಿಂದ ಹತ್ತರವರೆಗೆ ಎಡೆಬಿಡದ ಕೆಲಸದಲ್ಲಿರುವಾಗಲೂ ಮನಸ್ಸು ಗಿರಿಗಹ್ವರಗಳಲ್ಲಿ, ಕಾಂತಾರ–ಕಾನನಗಳಲ್ಲಿ, ಬೆಟ್ಟ ಗುಡ್ಡಗಳಲ್ಲಿ, ಉನ್ನತ ಆದರ್ಶಗಳೆಂಬ ಉಚ್ಚ ತುಂಗ ಶೃಂಗಗಳಲ್ಲಿ ಹೂವನ್ನರಸುವ ದುಂಬಿಯೋಪಾದಿಯಲ್ಲಿ ವಿಹರಿಸುತ್ತಿರುತ್ತದೆ" ಎಂದು ಬರೆಯುತ್ತಾರೆ ಸಾವರ್ಕರ್.

ಅಂದಿನ ಆ ಜೈಲುವಾಸದ ಒಂದು ದಿನ ಇವತ್ತು ನನಗೆ ಸಿಕ್ಕರೆ ಹೇಗಿರಬಹುದು, ನನ್ನಿಂದ ಅದನ್ನು ತಡೆದುಕೊಳ್ಳಲಾದೀತೆ ಎಂದು ಯೋಚಿಸುತ್ತಾ ಎಣ್ಣೆಗಾಣವನ್ನು, ವಿಸ್ತಾರವಾದ ವರ್ಕ್‌ಶೆಡ್ಡಿನಲ್ಲಿ ಬಿದ್ದಿದ್ದ ಯಾವ್ಯಾವುದೋ ಕೆಲಸದ ಸಲಕರಣೆಗಳನ್ನು, ತೆಂಗಿನ ನಾರು ಗುದ್ದುತ್ತಿದ್ದ ಜಾಗವನ್ನು ನೋಡಿದೆ. ಊಟದ ಮನೆ ನೋಡಿದೆ. ನೇಣುಗಂಬವನ್ನು ನೋಡಿದೆ. ಕೊರಳಿಗೆ ಸಿಕ್ಕಿಸುವ ಹಗ್ಗ ಕಂಬದ ಮೇಲೆ ನೇತಾಡುತ್ತಿತ್ತು. ಕುಣಿಕೆಯ ಭಾಗ ಬಹಳ ಸವೆದಿತ್ತು. ಕೈದಿಯನ್ನು ನಿಲ್ಲಿಸುವ ವೃತ್ತಾಕಾರದ ಜಾರುವ ಕಾಲು ಹಲಿಗೆ, ರಂಧ್ರದ ಮೂಲಕ ಕೆಳ ಜಾರಿದ ಶವ ಬೀಳುವ ನೆಲದಡಿಯ ಕೋಣೆ ಎಲ್ಲವೂ ನಿನ್ನೆ ಮೊನ್ನೆಯವರೆಗೂ ಉಪಯೋಗದಲ್ಲಿತ್ತು ಎಂಬಂತಿದೆ.

ಸರಕಾರ ಸೆಲ್ಯುಲರ್ ಜೈಲಿನ ನಾಲ್ಕು ವಿಂಗ್‌ಗಳನ್ನು ತೆಗೆದು ಹಾಕಿ ಆ ಜಾಗದಲ್ಲಿ ಆಸ್ಪತ್ರೆ ನಿರ್ಮಿಸಿದೆ. ಒಂದನ್ನು ಆಫೀಸಿನಂತೆಯೂ, ಇನ್ನೊಂದನ್ನು ಪ್ರಸ್ತುತ ಜೈಲನ್ನಾಗಿಯೂ ಉಪಯೋಗಿಸುತ್ತಿದ್ದಾರೆ. ಒಂದು ವಿಂಗನ್ನು ಸ್ಮಾರಕವಾಗಿ ಉಳಿಸಿಕೊಳ್ಳಲಾಗಿದೆ. 'ಧ್ವನಿ ಬೆಳಕು ಪ್ರದರ್ಶನ'ದಲ್ಲಿ ಈ ವಿಂಗನ್ನು ಬೇರೆ ಬೇರೆ ರೀತಿಯಲ್ಲಿ ಬೆಳಗಿಸಿ ತೋರಿಸಲಾಗುತ್ತದೆ. ಪ್ರತಿ ಕೋಣೆಯ ಮುಂದೆ ತೂಗುಹಾಕಿದ ಲಾಟೀನು ಅದೇ ಆಕಾರದಲ್ಲಿ ಈಗ ವಿದ್ಯುದ್ದೀಪವಾಗಿ ಬದಲಾಗಿದೆ. ವಾಚ್ ಟವರ್ ೧೯೪೧ರಲ್ಲಿ ಸಂಭವಿಸಿದ ಭೂಕಂಪಕ್ಕೆ ಕುಸಿದು ಬಿತ್ತು. ಆಮೇಲೆ ನಿರ್ಮಿಸಿದ್ದು ಮರದ ವಾಚ್ ಟವರ್. ಅದರ ಮೇಲೆ ಕೈದಿಗಳ ಬದುಕನ್ನು ಮುಂಜಾವದಿಂದ ನಡುರಾತ್ರಿಯವರೆಗೆ ನಿಯಂತ್ರಿಸುವ ಗಂಟೆ ತೂಗಾಡುತ್ತಿದೆ. ಸುಮಾರು ಐವತ್ತು ವರ್ಷಗಳ ಕಾಲ ಸಾವಿರಾರು ಜೀವಗಳ ಆಯುಷ್ಯವನ್ನು ಅಳೆದು ಈಗ ನಿಶ್ಶಬ್ದವಾಗಿದೆ.

©KTBS Not to be republished

ಒಂದು ದಿನದ ಜೈಲು ಶಿಕ್ಷೆಯ ಅನುಭವವನ್ನು ಪುನಃ ಕಲ್ಪಿಸಿಕೊಳ್ಳತೊಡಗಿದೆ. ಆ ದುಡಿತ, ಹೊಡೆತ, ಅರೆಹೊಟ್ಟೆ, ಗಾಳಿ ಬೆಳಕು ಕೂಡ ಸರಿಯಾಗಿ ಆಡದ ಗೂಡಿನಲ್ಲಿ ಏಕಾಂತ ವಾಸ. ಒಂದು ದಿನವೆಂದರೆ ಒಂದು ವರ್ಷದಂತೆ ಕಾಣಿಸಿರಬೇಕು!

ಆದರೆ ಜೈಲಿನಲ್ಲಿ ಕೂಡ ಕಾಲದ ಓಟ ಅನುಭವಕ್ಕೆ ಬರುವ ರೀತಿ ಎಲ್ಲರಿಗೂ ಒಂದೇ ಅಲ್ಲ ಎನ್ನುವುದನ್ನು ವೀರ ಸಾವರ್ಕರ್‌ರ ಮೊದಲ ಪತ್ರವೇ ಹೇಳುತ್ತದೆ.

"ನನ್ನ ಪತ್ರವನ್ನು ನನ್ನ ಪ್ರಿಯ ಯಮುನಾಗೆ ತೋರಿಸಿದೆಯಾ? ದಯೆಯಿಟ್ಟು ಪತ್ರವನ್ನು ಅವಳಿಗೆ ಭಾಷಾಂತರಿಸಿ ಹೇಳು. ಇನ್ನು ಕೆಲವೇ ವರ್ಷಗಳು. ಇನ್ನೈದು ವರ್ಷಗಳ ಅನಂತರ ಒಳ್ಳೆಯ ದಿನ ಬರುತ್ತದೆ. ಅದುವರೆಗೆ ತಡೆದುಕೋ. ನನ್ನ ಪ್ರಿಯೆ, ನನ್ನ ಆದರಪೂರ್ವಕ ನಮಸ್ಕಾರಗಳನ್ನು ವಾಹಿನಿಗೆ ತಿಳಿಸು..."

ವರ್ಷಗಳನ್ನು ದಿನಗಳು ಎಂದು ಭಾವಿಸಿಕೊಂಡರೆ ಮಾತ್ರ ಎಂಟೊಂಬತ್ತು ವರ್ಷಗಳ ಬಗ್ಗೆ 'ಇನ್ನು ಕೆಲವೇ ವರ್ಷಗಳು' ಎಂದು ಹೇಳಲು ಸಾಧ್ಯ!

* * * *

## ಕೃತಿಕಾರರ ಪರಿಚಯ :



**ಕೆ. ಟಿ. ಗಟ್ಟಿ ೧೯೩೮ರ ಜುಲೈ ೨೨ರಂದು** (ಈಗ ಕೇರಳ ರಾಜ್ಯಕ್ಕೆ ಸೇರಿರುವ) **ಕಾಸರಗೋಡಿನ ಕೂಡ್ಲು** ಎಂಬಲ್ಲಿ ಜನಿಸಿದರು. ತಮ್ಮ ೧೯ನೆಯ ವಯಸ್ಸಿನಲ್ಲೇ ಅವರು ಬರವಣಿಗೆಯನ್ನು ಪ್ರಾರಂಭಿಸಿದರು. ಇವರ ತಂದೆ ಧೂಮಪ್ಪನವರು ಯಕ್ಷಗಾನಪ್ರಿಯರಾಗಿದ್ದರು. ಹಾಗಾಗಿ ಮನೆಯಲ್ಲಿ ಅವರಿಗೆ ಯಕ್ಷಗಾನ ಪ್ರಸಂಗಗಳು ಅಥವಾ ಯಕ್ಷಗಾನಕ್ಕೆ ಸಂಬಂಧಿಸಿದ ಪುಸ್ತಕಗಳು ಓದಲು ಸಿಗುತ್ತಿದ್ದವು. ತಾಯಿಯವರು ತುಳು ಮತ್ತು ಮಲಯಾಳಂ ಭಾಷೆಗಳಲ್ಲಿ ಸೊಗಸಾಗಿ ಪಾಡ್ದನಗಳನ್ನು ಹಾಡಬಲ್ಲವರಾಗಿದ್ದರು. ಹೀಗೆ ಭಾಷೆಯ ಬಗ್ಗೆ ಕುತೂಹಲ, ಪ್ರೀತಿಗಳನ್ನು ಬೆಳೆಸಿಕೊಂಡ ಕೆ. ಟಿ. ಗಟ್ಟಿ ನಂತರದ ದಿನಗಳಲ್ಲಿ ಶಿಕ್ಷಕ ತರಬೇತಿಯನ್ನು ಪಡೆದು, ಸೂಕ್ತ ಪದವಿಗಳನ್ನು ಸಂಪಾದಿಸಿ ನಂತರ ಶಿಕ್ಷಣ ಕ್ಷೇತ್ರಕ್ಕೆ ಕಾಲಿರಿಸಿದರು. ಪ್ರೊಫೆಸರ್ ಆಗಿ, ಶಿಕ್ಷಣತಜ್ಞರಾಗಿ ದೇಶವಿದೇಶಗಳಲ್ಲಿ ಕೆಲಸ ಮಾಡಿದರು.

©KTBS Not to be republished

**ಅಬ್ರಾಹ್ಮಣ, ಅಮುಕ್ತ, ಅವಿಭಕ್ತರು, ಬಿಸಿಲುಗುದುರೆ, ಯುಗಾಂತರ, ಶಿಲಾತಪಸ್ವಿ, ಅರಗಿನ ಮನೆ** ಮುಂತಾದ ಹಲವು ಕಾದಂಬರಿಗಳನ್ನು ಬರೆದರು. ಕೆ. ಟಿ. ಗಟ್ಟಿಯವರ ಕಾದಂಬರಿಗಳು ಕನ್ನಡದ ವಾರಪತ್ರಿಕೆಗಳಲ್ಲಿ ಮೂರ್ನಾಲ್ಕು ದಶಕಗಳ ಕಾಲ ನಿರಂತರವಾಗಿ ಪ್ರಕಟವಾದವು. **ಮನುಷ್ಯನ ವಾಸನೆ, ನೀಲಿ ಗುಲಾಬಿ, ಭೂಗತ, ವಿಶ್ವಸುಂದರಿ, ಪ್ರೀತಿ ಎಂಬ ಮಾಯೆ** ಮುಂತಾದ ಕಥಾಸಂಕಲನಗಳನ್ನೂ ಪ್ರಕಟಿಸಿದ್ದಾರೆ. **"ತೀರ"** ಇವರ ಆತ್ಮಕಥೆ. ಇವರಿಗೆ **ಕರ್ನಾಟಕ ಸಾಹಿತ್ಯ ಅಕಾಡೆಮಿಯ** ಪ್ರಶಸ್ತಿ ಸಂದಿದೆ.

# ಅಭ್ಯಾಸ

## I. ಪದಗಳ ಅರ್ಥ ತಿಳಿಯಿರಿ :

ಕಣ್ಸೆಳೆ – ಆಕರ್ಷಿಸು

ಬೋಲ್ಟ್ – ಚಿಲಕ

ಲಾಟೀನು – ಕಂದೀಲು

ಆಡಳಿತಯಂತ್ರ – ಸರಕಾರೀ ವ್ಯವಸ್ಥೆ

ದೀರ್ಘ – ಉದ್ದನೆ

ಕೋಳ – ಕೈಗೆ ಬಿಗಿವ ಸಂಕೋಲೆ

ಸಂಧಿ – ಸಂಗಮಬಿಂದು, ಅವಕಾಶ

ದಾನವ – ರಾಕ್ಷಸ

ಶಕ್ಯ – ಸಾಧ್ಯ

ಗಿರಿ – ಗುಡ್ಡ

ಗಹ್ವರ – ಗುಹೆ

ಕಾಂತಾರ – ಕಾನನ, ಅರಣ್ಯ, ಕಾಡು

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ದ್ವೀಪಗಳ ಸೌಂದರ್ಯ ಹೇಗಿದೆ ಎಂದು ಸಾವರ್ಕರ್ ಹೇಳುತ್ತಾರೆ?

೨. ಸೆಲ್‌ನೊಳಗೆ ಯಾವ ಹಕ್ಕಿಗಳು ಹಾರಿಬರುತ್ತಿದ್ದವು?

೩. ಸಾವರ್ಕರ್ ಅವರನ್ನು ಇರಿಸಿದ್ದ ಜೈಲಿನ ಹೆಸರೇನು?

೪. ಸಾವರ್ಕರ್ ಅವರಿಗೆ ಜೈಲಿನಲ್ಲಿ ಯಾವ ಕೆಲಸವನ್ನು ಕೊಡಲಾಗಿತ್ತು?

೫. ಯಾತನೆಯನ್ನು ಸಹಿಸಿ ಸಹಿಸಿ ವೀರ ಸಾವರ್ಕರ್ ಕೊನೆಗೆ ಯಾವ ರೋಗಕ್ಕೆ ತುತ್ತಾದರು?

೬. ಜೈಲಿನಿಂದ ಹೊರಬರುವಾಗ ವ್ಯಕ್ತಿ ಏನಾಗಬಹುದು?

೭. ಮನುಷ್ಯನು ಜೀವಿಸಲು ಶಕ್ಯವಾದದ್ದು ಯಾವ ಗುಣದಿಂದಾಗಿ?

೮. ಸೆಲ್ಯುಲಾರ್ ಜೈಲಿನ ಒಂದು ಭಾಗದಲ್ಲಿ ಈಗ ಏನು ನಿರ್ಮಿಸಿದ್ದಾರೆ?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಸಾವರ್ಕರ್ ಬಂಧಿಯಾಗಿದ್ದ ಕೊಠಡಿಯ ವ್ಯವಸ್ಥೆ ಹೇಗಿತ್ತು?

೨. ಸಾವರ್ಕರ್ ಅವರು ಇದ್ದ ಕೊಠಡಿ ಈಗ ಹೇಗಿದೆ?

೩. ಜೈಲಿನಲ್ಲಿ ಸಾವರ್ಕರ್ ಅವರ ದಿನಚರಿ ಹೇಗಿರುತ್ತಿತ್ತು?

೪. ಸೋದರನಿಗೆ ಬರೆದ ಪತ್ರದಲ್ಲಿ ಸಾವರ್ಕರ್ ತಮ್ಮ ಬಗ್ಗೆ ಏನು ಹೇಳುತ್ತಾರೆ?

೫. ಬಂಧನದಲ್ಲಿದ್ದಾಗ ನೋವನ್ನು ಮರೆಯಲು ಸಾವರ್ಕರ್ ಏನು ಮಾಡುತ್ತಿದ್ದರು?

೬. ಜೈಲಿನಲ್ಲಿರುವ ನೇಣುಗಂಬದ ಚಿತ್ರಣವನ್ನು ಮಾಡಿರಿ.

೭. ಸಾವರ್ಕರ್ ವಿರಾಮದ ಸಮಯದಲ್ಲಿ ಹೇಗಿರಬೇಕಿತ್ತು?

೮. ಎಡೆಬಿಡದ ಕೆಲಸಗಳ ನಡುವೆಯೂ ತನ್ನ ಮನಸ್ಸು ಎಲ್ಲಿ ವಿಹರಿಸುತ್ತಿತ್ತೆಂದು ಸಾವರ್ಕರ್ ಬರೆಯುತ್ತಾರೆ?

©KTBS Not to be republished

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಸೆಲ್ಯುಲಾರ್ ಜೈಲಿನಲ್ಲಿ ಸಾವರ್ಕರ್ ಅನುಭವಿಸುತ್ತಿದ್ದ ಶಿಕ್ಷೆಯ ಯಾವ ಬಗೆಯಲ್ಲಿತ್ತು?

೨. ಶಿಕ್ಷೆಯ ನೋವನ್ನು ಸಾವರ್ಕರ್ ಹೇಗೆ ಮರೆಸಿಕೊಳ್ಳುತ್ತಿದ್ದರು?

೩. ಸಾವರ್ಕರ್ ಸೋದರನಿಗೆ ಬರೆದ ಪತ್ರದಿಂದ ನಮಗೆ ಏನು ತಿಳಿದುಬರುತ್ತದೆ?

೪. ಲೇಖಕರು ಸೆಲ್ಯುಲಾರ್ ಜೈಲಿನಲ್ಲಿ ನೋಡಿದ ಸಂಗತಿಗಳನ್ನು ವಿವರಿಸಿ.

**ಈ) ಕೆಳಗಿನ ವಾಕ್ಯಗಳ ಸ್ವಾರಸ್ಯವನ್ನು ಸಂದರ್ಭ ಸಹಿತ ವಿವರಿಸಿ.**

೧. ಈ ಸ್ಥಿತಿಯಲ್ಲಿಯೂ ನನ್ನ ಕಣ್ಸೆಳೆಯುತ್ತಿದೆ.

೨. ಪ್ರತಿದಿನ ತಾಯ್ನಾಡಿನ ನೆಲವನ್ನು ಸಂದರ್ಶಿಸಿ ಬರುತ್ತಿದ್ದರು.

೩. ಕೆಲಸ ನಿಧಾನವಾದರೆ ಚಾಟಿಯೇಟು!

೪. ನನ್ನ ವಿಷಯದಲ್ಲಿ ಏನೂ ವ್ಯತ್ಯಾಸ ಆಗದು.

೫. ಉಚ್ಚ ವಿಶ್ವವಿದ್ಯಾಲಯದಲ್ಲಿ ಕಠಿಣ ಶಿಕ್ಷಣ ಪಡೆಯುತ್ತಿದ್ದೇನೆ ಎನಿಸುತ್ತದೆ.

೬. ಕುಣಿಕೆಯ ಭಾಗ ಬಹಳ ಸವೆದಿತ್ತು.

೭. ಸಾವಿರಾರು ಜೀವಗಳ ಆಯುಷ್ಯವನ್ನು ಅಳೆದು ಈಗ ನಿಶ್ಶಬ್ದವಾಗಿದೆ.

೮. ಇನ್ನು ಕೆಲವೇ ವರ್ಷಗಳು!

## III. ಭಾಷಾಭ್ಯಾಸ :

**ಅ) ಕೆಳಗಿನ ಅನ್ಯದೇಶೀಯ ಪದಗಳಿಗೆ ಕನ್ನಡದ ಅರ್ಥ ಬರೆಯಿರಿ.**

೧. ಬೋಲ್ಟ್    ೨. ಸೆಲ್    ೩. ವಿಂಗ್

೪. ವಾಚ್ ಟವರ್    ೫. ಆಫೀಸ್

©KTBS Not to be republished

**ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ದೀರ್ಘ, ಸರಪಳಿ, ಅಪೂರ್ವ, ವಿಹರಿಸು

## IV. ಸೈದ್ಧಾಂತಿಕ ವ್ಯಾಕರಣ :

### ತತ್ಸಮ – ತದ್ಭವಗಳು :

ಸಂಸ್ಕೃತದಿಂದ ಅಸಂಖ್ಯಾತ ಪದಗಳು ಕನ್ನಡಕ್ಕೆ ಬಂದು ಬಳಕೆಯಾಗುತ್ತಿವೆ. ಹೀಗೆ ಸಂಸ್ಕೃತ ಪದಗಳು ಕನ್ನಡಕ್ಕೆ ಬರುವಾಗ ಹಲಕೆಲವು ವ್ಯತ್ಯಾಸಮಾಡಿ ಕನ್ನಡಿಗರು ಕನ್ನಡ ಭಾಷೆಗೆ ಸೇರಿಸಿ ಕೊಂಡಿದ್ದಾರೆ. ಅವುಗಳನ್ನು ತತ್ಸಮ – ತದ್ಭವಗಳೆಂದು ಕರೆಯಲಾಗುತ್ತದೆ.



ಎತ್ತಿನಂತೆ ದುಡಿದು, ಇಲಿಯಂತೆ ತಿನ್ನಬೇಕು.

೧. **ತತ್ಸಮಗಳು :** ಸಂಸ್ಕೃತದಿಂದ ಬದಲಾವಣೆ ಹೊಂದದೆ ಕನ್ನಡದಲ್ಲಿ ಬಳಸಲ್ಪಡುವ ಶಬ್ದಗಳು ತತ್ಸಮಗಳು. 'ತತ್' ಎಂದರೆ 'ಅದಕ್ಕೆ', 'ಸಮ' ಎಂದರೆ ಸಮಾನವಾದುದು – ಇಲ್ಲಿ ಅದಕ್ಕೆ ಎಂದರೆ ಸಂಸ್ಕೃತಕ್ಕೆ ಸಮಾನವಾದುದು ಎಂದು ಅರ್ಥ. ಇವುಗಳನ್ನು ಸಮಸಂಸ್ಕೃತಗಳೆಂದೂ ಕರೆಯುವುದುಂಟು.

**ಉದಾ :** ರಾಮ, ಭೀಮ, ವಸಂತ, ಚಂದ್ರ, ಶ್ರೀ, ಕರ್ತೃ, ಶತ್ರು, ಕವಿ, ಕಾವ್ಯ, ಶಿಶು, ಪತಿ, ಸತಿ, ಲಿಪಿ, ಶುದ್ಧಿ, ಸಿದ್ಧಿ, ವಿದ್ಯಾರ್ಥಿ, ವಧು, ಸೂರ್ಯ – ಇತ್ಯಾದಿ.

೨. **ತದ್ಭವಗಳು :** ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪ ಸ್ವಲ್ಪ ಇಲ್ಲವೇ ಪೂರ್ಣ ಬದಲಾವಣೆ ಹೊಂದಿ ಬಂದಿರುವ ಶಬ್ದಗಳನ್ನು ತದ್ಭವಗಳು ಎಂದು ಕರೆಯಲಾಗುತ್ತದೆ. 'ತತ್' ಎಂದರೆ ಅದರಿಂದ ಅಂದರೆ, ಸಂಸ್ಕೃತದಿಂದ, 'ಭವ' ಎಂದರೆ ಹುಟ್ಟಿದ ಎಂದು ಅರ್ಥ.

**ಉದಾ :**

| **ಸಂಸ್ಕೃತ ರೂಪ** | > | **ವ್ಯತ್ಯಾಸ ರೂಪ** | **ಸಂಸ್ಕೃತ ರೂಪ** | > | **ವ್ಯತ್ಯಾಸ ರೂಪ** |
|---|---|---|---|---|---|
| ಯಾತ್ರೆ | > | ಜಾತ್ರೆ | ಯೋಧ | > | ಜೋದ |
| ಉದ್ಯೋಗ | > | ಉಜ್ಜುಗ | ಛಂದ | > | ಚಂದ |
| ಘಂಟಾ | > | ಗಂಟೆ | ಆಕಾಶ | > | ಆಗಸ |
| ವಸತಿ | > | ಬಸದಿ | ತ್ರಿಪದಿ | > | ತಿವದಿ |
| ಶರ್ಕರಾ | > | ಸಕ್ಕರೆ | ರಾಕ್ಷಸ | > | ರಕ್ಕಸ |

©KTBS Not to be republished

## V. ಚಟುವಟಿಕೆಗಳು :

೧. ವಿನಾಯಕ ದಾಮೋದರ ಸಾವರ್ಕರ ಅವರ ಜೀವನಚರಿತ್ರೆಯನ್ನು ಓದಿ ತಿಳಿಯಿರಿ.

೨. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಕ್ರಾಂತಿಕಾರಿಗಳ ಮಾಹಿತಿ ಸಂಗ್ರಹಿಸಿ.

೩. ಸೆಲ್ಯುಲಾರ್ ಜೈಲಿನ ಚಿತ್ರ, ಮಾಹಿತಿ ಕಲೆಹಾಕಿ.

Q5B7W1

# ೬. ಪರಿವರ್ತನೆ

– ಜಿ. ಎಸ್. ಬಸವರಾಜಶಾಸ್ತ್ರಿ

**ಪಾಠ ಪ್ರವೇಶ :** ಹುಟ್ಟುತ್ತಲೇ ಯಾರೂ ಕೆಟ್ಟವರಾಗಿರುವುದಿಲ್ಲ. ಸಂದರ್ಭಗಳು ಅವರನ್ನು ಕೆಟ್ಟವರನ್ನಾಗಿ ಮಾಡಿರುತ್ತವೆ. ಅಂತಹವರಿಗೆ ಬದಲಾಗುವ ಅವಕಾಶಗಳನ್ನು ಮಾಡಿಕೊಟ್ಟಾಗ ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಪರಿವರ್ತನೆಗೊಳ್ಳುತ್ತಾರೆ. ಪರಿಶುದ್ಧ ಮನಸ್ಸಿನ ವ್ಯಕ್ತಿಯ ಒಡನಾಟ ಯಾವಾಗಲೂ ಸಂತೋಷವನ್ನು ತರುತ್ತದೆ. ಅದಕ್ಕೇ ಹೇಳುವುದು ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ ಎಂದು. ಪ್ರಸ್ತುತ ಪಾಠದಲ್ಲಿ ಸಜ್ಜನ ನಡೆವಳಿಕೆಗಳಿಂದ ಕಳ್ಳರ ಮನಸ್ಸು ಪರಿವರ್ತನೆಗೊಂಡ ಎರಡು ಸನ್ನಿವೇಶಗಳನ್ನು ನೀಡಲಾಗಿದೆ. ಅಂತಹ ಸಜ್ಜನ ನಡೆವಳಿಕೆಗಳನ್ನು ನಾವು ರೂಢಿಸಿಕೊಳ್ಳಬೇಕು.

ಮನಸ್ಸಿಗೆ ಹಿತಕರವಾದ, ಆನಂದದಾಯಕವಾದ ಮಾತುಗಳು ಕಿವಿಗೆ ಬಿದ್ದರೆ ಎಂತಹ ದುಷ್ಟನಿದ್ದರೂ ಅವನ ಮನಸ್ಸು ಪರಿವರ್ತನೆಗೊಂಡು ಅವನು ಶಿಷ್ಯನಾಗುತ್ತಾನೆ. ಉದಾಹರಣೆಗೆ ನನ್ನ ತಂದೆಯ ತಂದೆಯಾದ ಗಣೇಕಲ್ ಶಿವಯ್ಯ ತಾತನು ಪಿಟೀಲು ವಾದಕ, ಬಯಲಾಟದ ನಿರ್ದೇಶಕನಾಗಿ ರಾಯಚೂರು ಜಿಲ್ಲೆಯಲ್ಲಿಯೇ ಪ್ರಸಿದ್ಧನಾಗಿದ್ದನು. ಒಂದು ಸಲ ಆಟ ಮುಗಿಸಿ ಸಂಭಾವನೆ ಪಡೆದು ಊರಿಗೆ ಮರಳುವಾಗ ದಾರಿಯಲ್ಲಿರುವ ಈಚಲ ಬನದಲ್ಲಿ ನಾಲ್ಕು ಜನ ಕಳ್ಳರು ಗಂಟು ಬೀಳುತ್ತಾರೆ. ಆಗ ನನ್ನ ತಾತನು ಹೆದರದೆ ಧೈರ್ಯದಿಂದ ಕಳ್ಳರನ್ನು ಕುರಿತು "ಅಯ್ಯಾ ನಿಮಗೆ ಹಣಬೇಕು, ಅದು ನನ್ನಲ್ಲಿದೆ. ಅದನ್ನು ನಿಮಗೆ ಕೊಡುತ್ತೇನೆ, ಯಾವ ತಕರಾರೂ ಇಲ್ಲ. ಆದರೆ ನೀವು ನನ್ನ ಆಸೆಯನ್ನು ಪೂರೈಸಬೇಕು." ಆಗ ಕಳ್ಳರು "ಹೇಳಿ ತಾತ ಖಂಡಿತವಾಗಿ ನಿಮ್ಮ ಆಸೆಯನ್ನು ಪೂರೈಸುತ್ತೇವೆ. ಅದೇನು ಹೇಳಿ" ಎನ್ನಲು, ತಾತನು "ಅದೇನೂ ಕಷ್ಟದಾಯಕವಲ್ಲ, ಕಿವಿಗಳಿಗೆ ಸುಖಕರವಾದುದು. ನೀವು ನಿಶ್ಚಿಂತೆಯಿಂದ ಕುಳಿತು ಅರ್ಧತಾಸು ನನ್ನ ಸಂಗೀತವನ್ನು ಕೇಳಬೇಕು." "ಆಗಲಿ ತಾತ ಖಂಡಿತವಾಗಿಯೂ ಕೇಳುತ್ತೇವೆ. ಅದರಿಂದ ನಾವೇನೂ ಕಳೆದುಕೊಳ್ಳುವುದು ಇಲ್ಲವಲ್ಲ" ಎಂದು ಮರದ ಕೆಳಗೆ ಕುಳಿತುಕೊಳ್ಳುತ್ತಾರೆ. ಮುಂದೆ ಹಳ್ಳದ ನೀರು ಜುಳುಜುಳು ಎಂದು ನಿಧಾನಕ್ಕೆ ಹರಿಯುತ್ತಲೇ ಇದೆ. ತಾತನು ಪಿಟೀಲು ಬಾರಿಸುತ್ತಾ ಮಧುರವಾದ ಕಂಠದಿಂದ ಹಾಡತೊಡಗಿದನು. ಬೈಜು ಹಾಡಿದಾಗ ಹಾರವನ್ನು ಹಾಕಿಸಿಕೊಂಡು ಹೋದ ಜಿಂಕೆಯು ಮರಳಿಬಂದು ಅವನ ಹಾಡು ಕೇಳುತ್ತಾ ಮೈ ಮರೆತು ನಿಂತಂತೆ ಆ ಕಳ್ಳರೂ ತಾತನ ಹಾಡಿಗೆ ಮೈಮರೆತು, ಕಣ್ಣು ಮುಚ್ಚಿಕೊಂಡು ತಲೆದೂಗುತ್ತಾ ಕುಳಿತುಕೊಂಡರು. ಅರ್ಧ ತಾಸೇನು ಒಂದು ತಾಸು ಆದರೂ ಅವರಿಗೆ ಎಚ್ಚರವಾಗಲೇ ಇಲ್ಲ. ಕೊನೆಗೆ ಎಚ್ಚೆತ್ತ ಕಳ್ಳರು ತಮ್ಮಲ್ಲಿರುವ ಹಣವನ್ನು ತೆಗೆದು ತಾತನ ಮುಂದೆ ಇಟ್ಟು ತಾತನ ಪಾದಕ್ಕೆ ಎರಗಿ "ತಾತ ನಿಮ್ಮ ಹಣವು ನಮಗೆ ಬೇಡ, ನಿಮ್ಮ ಆಶೀರ್ವಾದವಷ್ಟೇ ಸಾಕು" ಎಂದು

©KTBS Not to be republished

ಹೊರಡತೊಡಗಿದರು. ಆಗ ತಾತನು ಅವರನ್ನು ತಡೆದು "ಅಯ್ಯಾ ದಯಾಳುಗಳೇ ನಿಮ್ಮ ಹಣವು ನನಗೆ ಬೇಕಿಲ್ಲ, ನಿಮ್ಮ ಹಣದ ಜತೆಗೆ ನನ್ನ ಹಣವನ್ನೂ ಕೊಡುತ್ತೇನೆ. ಅದರಿಂದ ನಾಲ್ವರೂ ಒಟ್ಟುಗೂಡಿ ವ್ಯಾಪಾರ ಮಾಡುತ್ತಾ ಜೀವನ ನಡೆಸಿ. ಇನ್ನು ಮುಂದೆ ಈ ಕೆಟ್ಟ ಕಳ್ಳತನವನ್ನು ಮಾಡಬೇಡಿ, ಸತ್ಯವಂತರಾಗಿ ಬದುಕಿ" ಎಂದು ಹೇಳಿ ಅವರು ಕೊಟ್ಟ ಹಣದೊಂದಿಗೆ ತಮ್ಮ ಹಣವನ್ನೂ ಕೊಟ್ಟು ಆಶೀರ್ವದಿಸಿ ಕಳುಹಿಸುತ್ತಾರೆ. ಅಂದಿನಿಂದ ಅವರು ವ್ಯಾಪಾರ ಮಾಡಿಕೊಂಡು ಸುಖಜೀವನವನ್ನು ನಡೆಸುತ್ತಾರೆ. ಹೀಗೆ ನನ್ನ ತಾತನು ಸಂಗೀತದ ಮೂಲಕ ಕಳ್ಳರ ಮನವನ್ನು ಪರಿವರ್ತನೆಗೊಳಿಸಿ ಅವರನ್ನು ಸನ್ಮಾರ್ಗಕ್ಕೆ ತರುತ್ತಾನೆ.



©KTBS Not to be republished

ಹೀಗೆ ಅದೇ ರಾಯಚೂರು ಜಿಲ್ಲೆಗೆ ಸೇರಿದ ರಾಯಚೂರಿನವರೇ ಆದ ಪಂಡಿತ ತಾರಾನಾಥರು, ಬಡವರ ಬಂಧುಗಳು. ಬಡವರ ಉದ್ಧಾರಕ್ಕಾಗಿ ಹಗಲು ರಾತ್ರಿ ದುಡಿದವರು. ಬಡವರ ಉದ್ಧಾರವಾಗಬೇಕಾದರೆ ಮೊದಲು ಅವರ ಮಕ್ಕಳು ವಿದ್ಯಾವಂತರಾಗಬೇಕು. ಆ ಮೂಲಕ ನೌಕರಿಗೆ ಸೇರಿ ಸುಖಜೀವನ ನಡೆಸುವಂತಾಗಬೇಕು. ಅದಕ್ಕಾಗಿ ತಾರಾನಾಥರು ಮಕ್ಕಳಿಗಾಗಿ ಆಶ್ರಮ ಕಟ್ಟಿ, ಜಾತಿ ಭೇದವಿಲ್ಲದೆ ಬಡಮಕ್ಕಳನ್ನು ಸೇರಿಸಿಕೊಂಡು ಸಾಕತೊಡಗಿದರು. ಆ ಮಕ್ಕಳು ಚೆನ್ನಾಗಿ ಓದತೊಡಗಿದರು.

ತಾರಾನಾಥರು ಮಹಾಜ್ಞಾನಿಗಳೂ ದಯಾಳುಗಳೂ ಧೈರ್ಯವಂತರೂ ಪರೋಪಕಾರಿಗಳೂ ಪರರ ಹಿತೈಷಿಗಳೂ ಆತ್ಮವಿಶ್ವಾಸಿಗಳೂ ಆಗಿದ್ದರು. ಅವರಿಗೆ ಅಸಾಧ್ಯವಾದ ಕೆಲಸವೇ ಇಲ್ಲ. ಅದು



ಬಾಯಿಯಿದ್ದವನು ಬರಗಾಲದಲ್ಲೂ ಬದುಕಿದ.

ಎಂತಹದೇ ಇರಲಿ, ಸಾಧಿಸುವ ಶಕ್ತಿ ಅವರಲ್ಲಿ ಇತ್ತು. ಒಟ್ಟಿನಲ್ಲಿ ಅವರು ಎಲ್ಲರಿಗೂ ಬೇಕಾಗಿದ್ದರು. ನಮ್ಮ ದೇಶದವರಿಗೆ ಅಷ್ಟೇ ಅಲ್ಲ, ವಿದೇಶೀಯರಿಗೂ ಬೇಕಾಗಿದ್ದರು. ಒಂದು ಸಲ ವಿದೇಶೀಯರು ಅವರಿಗೆ ಒಂದು ಉತ್ತಮವಾದ ವಾಚನ್ನು ಬಹುಮಾನವಾಗಿ ಕೊಟ್ಟಿದ್ದರು. ಅದನ್ನು ಅವರು ಕಟ್ಟುತ್ತಲೇ ಇರಲಿಲ್ಲ. ಕೋಣೆಯಲ್ಲೇ ಇಡುತ್ತಿದ್ದರು. ಅದನ್ನು ಒಬ್ಬ ಬಾಲಕನು ಕದ್ದು ಅದೇ ರಾಯಚೂರಿನಲ್ಲಿ ಒಬ್ಬ ವ್ಯಾಪಾರಿಗೆ ಮಾರಿದ್ದನು. ಅದಕ್ಕಾಗಿ ತಾರಾನಾಥರು ವ್ಯಸನಪಡಲೇ ಇಲ್ಲ. ಆದರೆ ಅವರ ಸಹೋದರನಿಗೆ ಇದು ಸರಿ ಬರಲಿಲ್ಲ. ಅವನು ಪ್ರಯತ್ನಪಟ್ಟು ಕಳ್ಳನನ್ನು ಕಂಡುಹಿಡಿದನು. ಕದ್ದವನು ಅದೇ ಆಶ್ರಮದಲ್ಲಿ ಇರುವ ಒಬ್ಬ ಬಾಲಕನು. ಅವನು ಕದ್ದು ಒಬ್ಬ ವ್ಯಾಪಾರಿಗೆ ಮಾರಿದ್ದನು. ಸಹೋದರನು ಸುಮ್ಮನಿರದೆ ಪೊಲೀಸರಿಗೆ ದೂರು ನೀಡಿ ಸಾಬೀತುಪಡಿಸಿದನು. ಪೋಲೀಸರು ಬಾಲಕನನ್ನು ಅರೆಸ್ಟು ಮಾಡಲು ಆಶ್ರಮಕ್ಕೆ ಬರುತ್ತಾರೆ. ಅದನ್ನು ಕೇಳಿ ತಾರಾನಾಥರಿಗೆ ಬಾಲಕನ ಮೇಲೆ ಕರುಣೆಯು ಉಕ್ಕಿ ಬರುತ್ತದೆ. ಅವನನ್ನು ಪೊಲೀಸರ ವಶಕ್ಕೆ ಕೊಡಬಾರದೆಂದು ನಿರ್ಧರಿಸಿ ಪೊಲೀಸರು ಬರುವುದನ್ನೇ ಕಾಯುತ್ತಾ ಕುಳಿತರು. ಅವರು ಬಂದು ವಿಚಾರಿಸಿದ ನಂತರ ಆ ಬಾಲಕನನ್ನು ಕರೆದು "ಇವನು ಕಳ್ಳನಲ್ಲ, ತಪ್ಪು ಮಾಡಿಲ್ಲ. ಆದ್ದರಿಂದ ಇವನನ್ನು ಬಂಧಿಸುವ ಅವಶ್ಯಕತೆ ಇಲ್ಲ. ಏಕೆಂದರೆ ವಾಚನ್ನು ರಿಪೇರಿ ಮಾಡಿಸಲು ನಾನೇ ಅವನ ಕೈಲಿ ಕೊಟ್ಟು ಕಳಿಸಿದ್ದೆ. ನನ್ನ ಸಹೋದರನು ಮತ್ತು ಆ ವ್ಯಾಪಾರಿ ಇಬ್ಬರೂ ಸುಳ್ಳರೇ, ಅವರ ಮಾತನ್ನು ನಂಬಬೇಡಿ" ಎಂದು ಹೇಳಿ ಆ ಬಾಲಕನು ಶಿಕ್ಷೆ ಅನುಭವಿಸುವುದನ್ನು ತಪ್ಪಿಸುತ್ತಾರೆ. ಇದರಿಂದ ಆ ಬಾಲಕನಿಗೆ ಅರಿವು ಉಂಟಾಗಿ ಪಶ್ಚಾತ್ತಾಪವಾಗುತ್ತದೆ. ಅವನು ಪಂಡಿತ ತಾರಾನಾಥರ ಪಾದಕ್ಕೆ ಬಿದ್ದು ಗೋಳೋ ಎಂದು ಅಳುತ್ತಾನೆ. "ಗುರುಗಳೇ ನನಗೆ ಶಿಕ್ಷೆ ಕೊಡಿಸಬೇಕಿತ್ತು" ಎನ್ನಲು ತಾರಾನಾಥರು "ಮಗು ತಪ್ಪು ಮಾಡುವುದು ಸಹಜ, ಈಗ ನಿನಗೆ ಅದರ ಅರಿವಾಯಿತಲ್ಲ ಅಷ್ಟೇ ಸಾಕು. ಚೆನ್ನಾಗಿ ಓದಿ ಚೆನ್ನಾಗಿ ಬದುಕು. ಅದೇ ನಿನಗೆ ಸಂತಸ ತರುತ್ತದೆ. ಇಗೋ ಈ ವಾಚನ್ನೂ ನಿನ್ನ ಬಳಿಯೇ ಇಟ್ಟುಕೋ" ಎಂದು ಅವನಿಗೆ ಕೊಡುತ್ತಾರೆ. ಮುಂದೆ ಅವನು ವಿದ್ಯಾವಂತನಾಗಿ ನೌಕರಿ ಹಿಡಿದು ಉತ್ತಮ ಜೀವನ ನಡೆಸುತ್ತಾನೆ. ಆದರೆ ಆ ವಾಚನ್ನು ದೇವರ ಮುಂದೆ ಇಟ್ಟು ದಿನವೂ ಪೂಜಿಸುತ್ತಾನೆ. ನಾವೆಲ್ಲರೂ ತಾರಾನಾಥರ ಗುಣಗಳನ್ನೇ ಅಳವಡಿಸಿಕೊಳ್ಳಬೇಕೆಂಬುದು ಈ ಶಾಸ್ತ್ರಿಯ ಮಹದಾಸೆ.


* * * *

## ಟಿಪ್ಪಣಿ :

**ಬೈಜು :** ೧೬ ನೇ ಶತಮಾನದಲ್ಲಿದ್ದ ಗ್ವಾಲಿಯರಿನ ಒಬ್ಬ ಪ್ರಸಿದ್ಧ ಗಾಯಕ. ಈತನ ಪೂರ್ಣ ಹೆಸರು ಬೈಜೂಬಾವರಾ. ತಾನಸೇನನ ಸಮಕಾಲೀನ. ಸಂಗೀತ ವಿದ್ವಾಂಸ. ಈತ ಸ್ವಾಮಿ ಹರಿದಾಸರ ಶಿಷ್ಯನಾಗಿದ್ದನು. ಬೈಜು ಮತ್ತು ತಾನಸೇನನಿಗೂ ಒಮ್ಮೆ ಸಂಗೀತ ಸ್ಪರ್ಧೆ ನಡೆಯಿತೆಂದು ಚಿಕ್ಕ ಕಥೆ ಇದೆ. ಆ ಸ್ಪರ್ಧೆಯಲ್ಲಿ ಅರಮನೆಯಿಂದ ದೂರ ಕಳುಹಿಸಿದ ಜಿಂಕೆಯನ್ನು ಬೈಜು ತನ್ನ ಗಾಯನದ ಮೂಲಕ ಆಕರ್ಷಿಸಿ ಹಿಂತಿರುಗುವಂತೆ ಮಾಡಿದನು ಎಂದು ಹೇಳಲಾಗುತ್ತದೆ.

© KTBS Not to be republished

## ಕೃತಿಕಾರರ ಪರಿಚಯ :



**ಜಿ.ಎಸ್. ಬಸವರಾಜಶಾಸ್ತ್ರೀ** ಅವರು **೧೯೩೬** ರಲ್ಲಿ **ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಬೇಡರ ಗಣೇಕಲ್ ಗ್ರಾಮ**ದಲ್ಲಿ ಜನಿಸಿದರು. ಇವರು ಸಂಸ್ಕೃತ, ಹಿಂದಿ ಹಾಗೂ ಕನ್ನಡ ಭಾಷೆಗಳಲ್ಲಿ ಪ್ರವೀಣರಾಗಿದ್ದಾರೆ. ಶಿಕ್ಷಕ ವೃತ್ತಿಯಿಂದ ನಿವೃತ್ತರಾದ ನಂತರ ಯಾದಗಿರಿಯಲ್ಲಿ ನೆಲೆಸಿದ್ದಾರೆ.

ಇವರು ಬರೆದ ಪ್ರಮುಖ ಕೃತಿಗಳೆಂದರೆ **'ನಾಮಾವಳಿ', 'ಕರ್ಮಯೋಗಿ', 'ಕರುಣಾಮಯಿ', 'ಜಗದ್ಗುರು ರೇಣುಕ ಚರಿತೆ', 'ಸಮಾಜ ಜೀವಿ', 'ಗಟ್ಟಿಮಾತು', 'ದಾರಿದೀಪ', 'ವಚನಾಮೃತಧಾರೆ', 'ತ್ರಿವೇಣಿ ಸಂಗಮ', 'ಪ್ರತಿಸ್ಪಂದನ', 'ಮನುಕುಲತಿಲಕ'** ಇತ್ಯಾದಿಗಳು. **'ಮುಯ್ಯಿ', 'ಕತ್ತಲು ನಗರ ತಿಕ್ಕಲು ರಾಜ'** ಎಂಬ ಎರಡು ನಾಟಕಗಳನ್ನೂ ಬರೆದಿದ್ದಾರೆ.

ಇವರಿಗೆ ಹಲವು ಸಂಘ ಸಂಸ್ಥೆಗಳು ಗೌರವ ಹಾಗೂ ಸನ್ಮಾನಗಳನ್ನು ಮಾಡಿವೆ. ಅವರ ಅಭಿಮಾನಿಗಳು **'ಶಾಸ್ತ್ರಿ ಸಂಪದ'** ಎನ್ನುವ ಅಭಿನಂದನಾ ಗ್ರಂಥವನ್ನು ಅರ್ಪಿಸಿದ್ದಾರೆ. ಪ್ರಸ್ತುತ ಗದ್ಯಭಾಗವನ್ನು ಜಿ.ಎಸ್. ಬಸವರಾಜಶಾಸ್ತ್ರೀ ಅವರ **'ಶಾಸ್ತ್ರಿ ಕನಸು'** ಕೃತಿಯಿಂದ ಆಯ್ದುಕೊಳ್ಳಲಾಗಿದೆ.

©KTBS Not to be republished

## ಅಭ್ಯಾಸ

### I. ಪದಗಳ ಅರ್ಥ ತಿಳಿಯಿರಿ :

**ಅರಿವು** – ತಿಳಿವಳಿಕೆ; ಪ್ರಜ್ಞೆ.

**ಈಚಲ** – ತಾಳೆಯ ಜಾತಿಗೆ ಸೇರಿದ ಮರ.

**ತಕರಾರು** – ಆಕ್ಷೇಪಣೆ

**ಪರಿವರ್ತನೆ** – ಬದಲಾವಣೆ

**ಪಶ್ಚಾತ್ತಾಪ** – ತಪ್ಪು ಮಾಡಿದ ಕೆಲಸಕ್ಕೆ ಮರುಗುವಿಕೆ.

**ಮೈಮರೆ** (ನುಡಿಗಟ್ಟು) – ತಲ್ಲೀನತೆ

**ಸಂಭಾವನೆ** – ಗೌರವಧನ

**ಅರೆಷ್ಟು** (ಅನ್ಯ ದೇಶೀಯ) – ಬಂಧಿಸು; ಸೆರೆಹಿಡಿ.

**ಗಂಟುಬೀಳು** (ಕ್ರಿ) – ಬೆನ್ನುಹತ್ತು

**ತಲೆದೂಗು** (ನುಡಿಗಟ್ಟು) – ಮೆಚ್ಚುಗೆ ಸೂಚಿಸು

**ಪರೋಪಕಾರಿ** – ಇತರರಿಗೆ ನೆರವು ನೀಡುವವನು.

**ಬಯಲಾಟ** – ಬಯಲಲ್ಲಿ ನಡೆಯುವ ಜಾನಪದ ನಾಟಕ ಪ್ರಕಾರಗಳಲ್ಲಿ ಒಂದು ಬಗೆ.

**ವ್ಯಸನ** – ಚಿಂತೆ; ದುಃಖ.

**ಸನ್ಮಾರ್ಗ** – ಒಳ್ಳೆಯ ದಾರಿ; ಸರಿಯಾದ ಮಾರ್ಗ.

## II. ಪ್ರಶ್ನೆಗಳು :

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

೧. ಜಿ.ಎಸ್. ಬಸವರಾಜಶಾಸ್ತ್ರೀ ಅವರ ತಾತನ ಹೆಸರು ______________

೨. ತಾರಾನಾಥರ ಊರು ________________

೩. ತಾರಾನಾಥರ ವಾಚನ್ನು ಕದ್ದವನು _____________

೪. 'ಪರಿವರ್ತನೆ' ಪಾಠದ ಆಕರ ಕೃತಿ _____________

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ದುಷ್ಟನ ಮನಸ್ಸು ಯಾವ ಮಾತುಗಳಿಂದ ಪರಿವರ್ತನೆಯಾಗುತ್ತದೆ?

೨. ಗಣೇಕಲ್ ಶಿವಯ್ಯನವರು ಯಾವುದಕ್ಕೆ ಪ್ರಸಿದ್ಧರಾಗಿದ್ದರು?

೩. ಗಣೇಕಲ್ ಶಿವಯ್ಯನವರ ಸಂಗೀತ ಕೇಳಲು ಕಳ್ಳರು ಏಕೆ ಒಪ್ಪಿಕೊಂಡರು?

೪. ಗಣೇಕಲ್ ಶಿವಯ್ಯನವರು ಸಂಗೀತ ನಡೆಸಿಕೊಟ್ಟ ಸ್ಥಳದ ವಾತಾವರಣ ಹೇಗಿತ್ತು?

೫. ಕಳ್ಳರು ಗಣೇಕಲ್ ಶಿವಯ್ಯನವರ ಸಂಗೀತವನ್ನು ಹೇಗೆ ಆಲಿಸಿದರು?

೬. ಗಣೇಕಲ್ ಶಿವಯ್ಯನವರು ಕಳ್ಳರನ್ನು ಏನೆಂದು ಆಶೀರ್ವದಿಸಿದರು?

೭. ತಾರಾನಾಥರು ಆಶ್ರಮವನ್ನು ಏಕೆ ಕಟ್ಟಿದರು?

೮. ತಾರಾನಾಥರಿಗೆ ವಾಚನ್ನು ಯಾರು ನೀಡಿದ್ದರು?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಗಣೇಕಲ್ ಶಿವಯ್ಯನವರು ಕಳ್ಳರನ್ನು ಏನೆಂದು ಕೇಳಿಕೊಂಡರು?

೨. ಗಣೇಕಲ್ ಶಿವಯ್ಯನವರು ಕಳ್ಳರ ಸಮ್ಮುಖದಲ್ಲಿ ನಡೆಸಿದ ಸಂಗೀತ ಯಾವ ರೀತಿ ಇತ್ತು?

೩. ಗಣೇಕಲ್ ಶಿವಯ್ಯನವರ ಸಂಗೀತ ಕೇಳಿದ ನಂತರ ಕಳ್ಳರು ಏನು ಮಾಡಿದರು?

೪. ತಾರಾನಾಥರ ವ್ಯಕ್ತಿತ್ವದ ವಿಶೇಷತೆಗಳೇನು?

೫. ಬಾಲಕನು ಶಿಕ್ಷೆ ಅನುಭವಿಸುವುದನ್ನು ತಾರಾನಾಥರು ಹೇಗೆ ತಪ್ಪಿಸಿದರು?

೬. ತಾರಾನಾಥರು ಬಾಲಕನ ತಪ್ಪನ್ನು ಏಕೆ ಕ್ಷಮಿಸಿದರು?

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಗಣೇಕಲ್ ಶಿವಯ್ಯನವರು ಕಳ್ಳರ ಮನಸ್ಸನ್ನು ಹೇಗೆ ಪರಿವರ್ತಿಸಿದರು?

೨. ತಾರಾನಾಥರು ವಾಚನ್ನು ಕದ್ದ ಬಾಲಕನ ಮನಸ್ಸನ್ನು ಹೇಗೆ ಪರಿವರ್ತಿಸಿದರು?

©KTBS Not to be republished

ಉ) ಸಂದರ್ಭದೊಡನೆ ವಿವರಿಸಿರಿ.

೧. "ನೀವು ನಿಶ್ಚಿಂತೆಯಿಂದ ಕುಳಿತು ಅರ್ಧತಾಸು ನನ್ನ ಸಂಗೀತವನ್ನು ಕೇಳಬೇಕು."

೨. "ತಾತ ನಿಮ್ಮ ಹಣವು ನಮಗೆ ಬೇಡ. ನಿಮ್ಮ ಆಶೀರ್ವಾದವಷ್ಟೇ ಸಾಕು."

೩. "ಇವನು ಕಳ್ಳನಲ್ಲ. ತಪ್ಪು ಮಾಡಿಲ್ಲ. ಆದ್ದರಿಂದ ಇವನನ್ನು ಬಂಧಿಸುವ ಅವಶ್ಯಕತೆ ಇಲ್ಲ."

೪. "ಗುರುಗಳೇ ನನಗೆ ಶಿಕ್ಷೆ ಕೊಡಿಸಬೇಕಿತ್ತು."

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ಸನ್ಮಾರ್ಗ, ಮೈಮರೆ, ತಲೆದೂಗು, ದಯಾಳು, ಪರೋಪಕಾರಿ, ವ್ಯಸನ, ಪರಿವರ್ತನೆ.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಗಳನ್ನು ಬರೆಯಿರಿ.**

ನಿಶ್ಚಿಂತೆ, ಸನ್ಮಾರ್ಗ, ಅಸಾಧ್ಯ, ಧೈರ್ಯ, ವಿದೇಶಿ, ವಿದ್ಯಾವಂತ,

**ಇ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಪರೋಪಕಾರಿ, ತಲೆದೂಗು, ಒಟ್ಟುಗೂಡಿ, ಸಹೋದರ.

**ಈ) ಕೆಳಗಿನ ಮಾದರಿಯಂತೆ 'ವಂತ' ಪ್ರತ್ಯಯ ಸೇರಿರುವ ಪದಗಳನ್ನು ಪಟ್ಟಿಮಾಡಿರಿ.**

**ಮಾದರಿ :** ಸತ್ಯ + ವಂತ = ಸತ್ಯವಂತ

©KTBS Not to be republished

## IV. ಸೈದ್ಧಾಂತಿಕ ವ್ಯಾಕರಣ :

**ವಚನಗಳು :** ವ್ಯಾಕರಣ ಪರಿಭಾಷೆಯಲ್ಲಿ 'ವಚನ' ಎಂದರೆ ಸಂಖ್ಯೆ. ಕನ್ನಡ ಭಾಷೆಯಲ್ಲಿ ಏಕವಚನ ಮತ್ತು ಬಹುವಚನ ಎಂಬುದಾಗಿ ಎರಡು ವಿಧಗಳಿವೆ.

**೧. ಏಕವಚನ** : ಒಂದು ಎಂದು ಹೇಳಲಾಗುವ ಶಬ್ದಗಳೆಲ್ಲವೂ 'ಏಕವಚನ' ಎಂದು ಕರೆಸಿಕೊಳ್ಳುತ್ತವೆ.

ಉದಾ : ಹುಡುಗ, ಹುಡುಗಿ, ಅರಸು, ಮರ, ಅಣ್ಣ, ನೀನು, ಅವನು, ಅವಳು.

**೨. ಬಹುವಚನ** : ಒಂದಕ್ಕಿಂತ ಹೆಚ್ಚು ಎಂದು ಹೇಳಲಾಗುವ ಶಬ್ದಗಳೆಲ್ಲವೂ 'ಬಹುವಚನ' ಎಂದು ಕರೆಸಿಕೊಳ್ಳುತ್ತವೆ.

ಉದಾ : ಹುಡುಗರು, ಹುಡುಗಿಯರು, ಅರಸರು, ಮರಗಳು, ಅಣ್ಣಂದಿರು,
ನೀವು, ನಾವು, ಅವರು, ತಾಯಂದಿರು, ಮನೆಗಳು. ಕಣ್ಣುಗಳು.

'ಗಳು' 'ಅರು' 'ಅಂದಿರು' – ಇವು ಬಹುವಚನ ಪ್ರತ್ಯಯಗಳು. ಇವುಗಳನ್ನು ಬಳಸಿ ಬಹುವಚನ ಪದಗಳನ್ನು ಬರೆಯಿರಿ.

ಉದಾ : ಮನೆ + ಗಳು = ಮನೆಗಳು
ಹುಡುಗ + ಅರು = ಹುಡುಗರು
ಅಣ್ಣ + ಅಂದಿರು = ಅಣ್ಣಂದಿರು

**ವಾಕ್ಯ ರಚನೆ :** ನಾವು ನಮ್ಮ ಮನಸ್ಸಿನ ಅಭಿಪ್ರಾಯಗಳನ್ನು ಇತರರಿಗೆ ಮಾತುಗಳ ಮೂಲಕ ಇಲ್ಲವೇ ಬರವಣಿಗೆಯ ಮೂಲಕ ತಿಳಿಯಪಡಿಸುತ್ತೇವೆ. ಆ ಮಾತುಗಳು ವಾಕ್ಯ ರೂಪದಲ್ಲಿರುತ್ತವೆ.

ಉದಾ : ಚೇತನ ಹಣ್ಣನ್ನು ತಿಂದಳು.

ಇಲ್ಲಿ 'ತಿಂದಳು' ಎಂಬುದು ಕ್ರಿಯಾಪದ. ಈ ಕ್ರಿಯೆ ಯಾರಿಂದ ನಡೆಯಿತೋ ಅದು 'ಕರ್ತೃ' ಪದವಾಗುತ್ತದೆ. ಕರ್ತೃವಿನಿಂದ ಯಾವ ಕ್ರಿಯೆ ನಡೆಯಿತೋ ಅದು 'ಕರ್ಮಪದ' ಎಂದು ಕರೆಸಿಕೊಳ್ಳುತ್ತದೆ. ಹೀಗೆ ಕರ್ತೃ, ಕರ್ಮ ಹಾಗೂ ಕ್ರಿಯಾ ಪದಗಳಿಂದ ಕೂಡಿದ ಪದಸಮೂಹವನ್ನು 'ವಾಕ್ಯ' ಎಂದು ಹೇಳಲಾಗುತ್ತದೆ.

©KTBS Not to be republished

ಈ ಕೆಳಗಿನ ವಾಕ್ಯಗಳಲ್ಲಿರುವ ಕರ್ತೃ, ಕರ್ಮ ಹಾಗೂ ಕ್ರಿಯಾ ಪದಗಳನ್ನು ಗುರುತಿಸಿರಿ.

೧. ಇಬ್ರಾಹಿಂ ಬಾವುಟವನ್ನು ಹಾರಿಸಿದನು
೨. ರೀಟಾ ಅಡುಗೆಯನ್ನು ಮಾಡಿದಳು.
೩. ರಾಮ ಪೂಜೆಯನ್ನು ಮಾಡಿದನು.
೪. ಮಾನ್‌ಸಿಂಗ್ ಹಾಡನ್ನು ಹಾಡಿದನು.

## V. ಚಟುವಟಿಕೆಗಳು :

೧. ಬುದ್ಧನಿಂದ ಪರಿವರ್ತನೆಗೊಂಡ ಅಂಗುಲಿಮಾಲನ ಕಥೆಯನ್ನು ಓದಿ ತಿಳಿಯಿರಿ.
೨. ನಿಮ್ಮ ಜೀವನದಲ್ಲಿ ಪರಿವರ್ತನೆಗೆ ಕಾರಣವಾದ ಘಟನೆಗಳನ್ನು ಬರೆಯಿರಿ.



ಕನ್ನಡಕ್ಕೆ ಹೋರಾಡು ಕನ್ನಡದ ಕಂದ ಕನ್ನಡವ ಕಾಪಾಡು ನನ್ನ ಆನಂದ–ಕುವೆಂಪು

# ೭. ಒಂದು ಮರದ ಬೆಲೆ

X1A6T3


– ಹಾ. ಮಾ. ನಾಯಕ

**ಪಾಠ ಪ್ರವೇಶ :** 'ವೃಕ್ಷೋ ರಕ್ಷತಿ ರಕ್ಷಿತಃ' ಎನ್ನುವ ಮಾತು ಇಂದು ಎಲ್ಲೆಡೆ ಕೇಳಿಬರುತ್ತಿದೆ. ನಾವು ಮರಗಳನ್ನು ರಕ್ಷಿಸಿದರೆ, ಮರಗಳು ನಮ್ಮನ್ನು ರಕ್ಷಿಸುತ್ತವೆ ಎಂಬುದು ಇದರ ಅರ್ಥ. ಪರಿಸರದಲ್ಲಿ ಮರಗಳ ಸಂಖ್ಯೆ ಕಡಿಮೆಯಾಗಿ ಜಾಗತಿಕ ತಾಪಮಾನ ಹೆಚ್ಚುತ್ತಿರುವ ಆತಂಕವನ್ನು ವಿಜ್ಞಾನಿಗಳು ವ್ಯಕ್ತಪಡಿಸಿದ್ದಾರೆ. ಈ ದಿಸೆಯಲ್ಲಿ ಪ್ರಪಂಚದ ಹಲವು ರಾಷ್ಟ್ರಗಳು ಎಚ್ಚೆತ್ತುಕೊಂಡು ಪರಿಸರ ಸಂರಕ್ಷಣೆಗೆ ಮುಂದಾಗಿವೆ. ಆದರೆ ಭಾರತೀಯರಾದ ನಾವು ಇನ್ನೂ ಎಚ್ಚೆತ್ತುಕೊಳ್ಳದಿರುವುದು ವಿಷಾದದ ಸಂಗತಿ. ಮರಗಳನ್ನು ಕಡಿಯುವ ಕೆಲಸ ನಿಲ್ಲಬೇಕು. ಹೆಚ್ಚು ಹೆಚ್ಚು ಮರಗಳನ್ನು ಬೆಳೆಸಿ ಮನುಕುಲವನ್ನು ರಕ್ಷಿಸುವ ಹೊಣೆ ಕ್ಷಿಪ್ರಗತಿಯಲ್ಲಿ ಆಗಬೇಕಿದೆ.

ಈಚೆಗೆ ಅಮೆರಿಕೆಯಿಂದ ಬಂದ ಒಂದು ಸುದ್ದಿ :

©KTBS Not to be republished

'ಐನೂರು ವರ್ಷ ಹಳೆಯದಾದ ಮರವೊಂದನ್ನು ಸಸ್ಯನಾಶಕ ಬಳಸಿ ಕೊಂದ ಅಪರಾಧಕ್ಕಾಗಿ, ಅಮೆರಿಕೆಯ ಪ್ರಜೆಯಾದ ಪಾಲ್ ಕೆಲೆನ್ ಎಂಬುವವನಿಗೆ ಜಿಲ್ಲಾ ನ್ಯಾಯಾಲಯ ಒಂಬತ್ತು ವರ್ಷ ಸಜೆ ಹಾಗೂ ಒಂದು ಸಾವಿರ ಡಾಲರ್ ದಂಡ ವಿಧಿಸಿದೆ! ಸಸ್ಯನಾಶಕವನ್ನು ಮರದ ಮೇಲೆ ಸುರಿದದ್ದು ಗೊತ್ತಾದೊಡನೆಯೇ ಕೆಲೆನ್‌ನನ್ನು ಕಳೆದ ವರ್ಷ ಜೂನ್ ತಿಂಗಳಿನಲ್ಲಿ ಬಂಧಿಸಲಾಗಿತ್ತು. ಇಪ್ಪತ್ತು ಸಾವಿರ ಡಾಲರುಗಳ ಜಾಮೀನು ಒದಗಿಸಲು ಸಾಧ್ಯವಾಗದೆಹೋದುದರಿಂದ ಅವನಿನ್ನೂ ಜೈಲಿನಲ್ಲೇ ಇದ್ದಾನೆ. ಅಮೆರಿಕೆಯ ಟೆಕ್ಸಸ್ ರಾಜ್ಯದ ಹೌಸ್ಟನ್ ಎಂಬಲ್ಲಿ ನಡೆದ ಘಟನೆ ಇದು. ಈ ಕೃತ್ಯದಿಂದ ಆ ಹೆಮ್ಮರ ಅರ್ಧಕ್ಕೂ ಹೆಚ್ಚು ಭಾಗ ಸತ್ತು ಹೋಗಿದೆ. ಈ ಒಂದು ವರ್ಷದಲ್ಲಿ ಮರವನ್ನು ಉಳಿಸಲು ಅಗತ್ಯವಾದ ಕ್ರಮ ಕೈಗೊಳ್ಳುವ ಸಲುವಾಗಿ ಹೌಸ್ಟನ್ ನಗರಪಾಲಿಕೆಗೆ ಒಂದು ಲಕ್ಷಕ್ಕೂ ಹೆಚ್ಚು ಡಾಲರ್‌ಗಳ ದೇಣಿಗೆ ಬಂದಿದೆ. ಆದರೇನು? ಮರ ಹೆಚ್ಚು ಕಾಲ ಬದುಕುವ ಸಾಧ್ಯತೆ ಇಲ್ಲ. ಆ ಮರಕ್ಕೆ ಬೇಗನೆ ಪೂರ್ಣ ಆರೋಗ್ಯ ಲಭಿಸಲೆಂದು ಹಾರೈಸಿ ಸಾವಿರಾರು ಜನ ವೃಕ್ಷಪ್ರೇಮಿಗಳು ಮರದ ಬುಡದಲ್ಲಿ ಶುಭಾಶಯ ಪತ್ರಗಳನ್ನಿಡುತ್ತಿದ್ದಾರೆ ; ಮರಕ್ಕೆ ದೀರ್ಘಾಯಸ್ಸು ಕೋರಿ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ.'




ಈ ಸುದ್ದಿಯೊಡನೆ ಹೋಲಿಸಲು ತಕ್ಕನಾದ ನಮ್ಮ ದೇಶದ ಈಚಿನ ಸುದ್ದಿಯೊಂದು ಹೀಗಿದೆ:

‘ಬೆಂಗಳೂರು ಮಹಾನಗರದಲ್ಲಿ ಒಂದು ಹಳೆಯ ಆಲದ ಮರ. ಅದರ ಪಕ್ಕದಲ್ಲಿಯೇ ಗಣ್ಯ ವ್ಯಕ್ತಿಯೊಬ್ಬರ ಮನೆ. ಈ ಮರದಿಂದ ತಮಗೆ ತೊಂದರೆಯಾಗುತ್ತಿದೆ ಎಂದು ಆ ಪ್ರಭಾವಿ ಗಣ್ಯರ ದೂರು. ಸಂಬಂಧಪಟ್ಟ ಆಡಳಿತ ವರ್ಗದವರು ಈಗ ಆ ಮರವನ್ನು ಕಡಿದುಹಾಕಲು ಯೋಚಿಸುತ್ತಿದ್ದಾರೆ’ ಇಷ್ಟರಲ್ಲಿಯೇ ಆ ಮರವನ್ನು ಕಡಿದು ಉರುಳಿಸಿದ್ದರೆ ಆಶ್ಚರ್ಯವೇನೂ ಇಲ್ಲ!

©KTBS
Not to be republished

ಸಾಯುತ್ತಿರುವ ಮರವನ್ನು ಉಳಿಸುವ ಸಲುವಾಗಿ ಜನರು ಪ್ರಾರ್ಥನೆ ಮಾಡುತ್ತಾರೆ, ಮಾತ್ರವಲ್ಲ ತಮ್ಮ ಕೈಲಾದುದನ್ನೆಲ್ಲ ಮಾಡುತ್ತಾರೆ–ಇನ್ನೂರು ವರ್ಷಗಳ ಸಂಸ್ಕೃತಿಯ ಅಮೆರಿಕಾ ದೇಶದಲ್ಲಿ! ಯಾರಿಗೋ ತೊಂದರೆಯಾಗುತ್ತಿದೆ ಎಂಬುದನ್ನು ಕೇಳಿ, ಆ ತೊಂದರೆ ಯಾವ ಬಗೆಯದು ಎಂಬುದನ್ನು ತಿಳಿಯುವ ಗೊಡವೆಗೇ ಹೋಗದೆ, ಅನೇಕ ಕಾಲ ಬದುಕಬಹುದಾದ ಮರವನ್ನು ಕತ್ತರಿಸಲು ಮುಂದಾಗುತ್ತಾರೆ, ಎರಡು ಸಾವಿರ ವರ್ಷಗಳಿಗೂ ಮಿಕ್ಕ ಸಂಸ್ಕೃತಿಯು ನಮ್ಮ ದೇಶದಲ್ಲಿ!

ಎರಡೂ ತೀರ ಭಿನ್ನವಾದ ದೃಷ್ಟಿಕೋನಗಳು. ಆ ಅಮೆರಿಕೆಯ ಜನರಲ್ಲಿ ತಮ್ಮ ಭವಿಷ್ಯದಲ್ಲಿ ಆಸಕ್ತಿಯಿದೆ. ಈ ನಮಗಾದರೋ ಇಂದಷ್ಟೇ ಮುಖ್ಯವಾದದ್ದು. ನಾಳೆ ಅಲ್ಲ. ನಮ್ಮಲ್ಲಿ ಮರ ಕತ್ತರಿಸುವುದು ತೀರ ಸಾಮಾನ್ಯವಾದ ವಿಚಾರ. ಕಾನೂನಿಗೆ ವಿರುದ್ಧವಾಗಿದ್ದರೂ, ಮರ ಕತ್ತರಿಸಲು ನಮ್ಮ ಜನ ಮುಂದಾಗುತ್ತಾರೆ. ರಾಜ್ಯದ, ರಾಷ್ಟ್ರದ ಹೆದ್ದಾರಿಗಳಲ್ಲಿಯೇ, ಹಾಡುಹಗಲಿನಲ್ಲಿ ಈ ಕೊಲೆಗಳು ನಡೆಯುವುದನ್ನು ನಾವೆಲ್ಲರೂ ನಿತ್ಯ ನೋಡುತ್ತಿದ್ದೇವೆ. ಕೆಲವು ಕೊಲೆಗಳು ನೇರವಾಗಿಯೇ ಬಹಿರಂಗವಾಗಿಯೇ ನಡೆಯುತ್ತವೆ. ಮತ್ತೆ ಕೆಲವು ಕೊಲೆಗಳು ಮೋಸದಿಂದ, ಉಪಾಯದಿಂದ ನಡೆಯುತ್ತವೆ. ಮೊದಲು ಸ್ವಲ್ಪ ಸ್ವಲ್ಪ ತೊಗಟೆ ತೆಗೆದು, ಆ ಮೇಲೆ ಚೆಕ್ಕೆ ಕೆತ್ತಿ, ಸೊಪ್ಪು ಕಿತ್ತು, ಕೊಂಬೆ ಕಡಿದು ನಿಧಾನವಾಗಿ ಮರಗಳನ್ನು ಸಾಯಿಸಲಾಗುತ್ತದೆ. ಇದನ್ನೆಲ್ಲ ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ!

ಒಂದು ಮರದ ಬೆಲೆ ಏನು ಎಂದು ತಿಳಿದುಕೊಳ್ಳುವ ಗೋಜಿಗೂ ನಾವು ಹೋಗಿಲ್ಲ. ಬೆಲೆಕಟ್ಟಲು ಮರದ ದಪ್ಪ, ಎತ್ತರ, ಅದರ ಉಪಯೋಗದ ಅಂದಾಜು–ಇದೆಲ್ಲ ಅಗತ್ಯವೆಂದು ಯಾರಾದರೂ ಹೇಳಬಹುದು. ನಿಜ, ನಾವು ಬಲ್ಲ ಬೆಲೆ ಇದನ್ನೇ ಅವಲಂಬಿಸಿರುತ್ತದೆ. ಆದರೆ ಮರದ ನಿಜವಾದ ಬೆಲೆ ಏನೆಂಬುದನ್ನು ನಾವು ಯೋಚಿಸಿಯೇ ಇಲ್ಲ! ಐವತ್ತು ವರ್ಷ ತುಂಬಿದ ಆರೋಗ್ಯವಂತ ಮರವೊಂದರ ಬೆಲೆ ಏನು ಎಂಬುದನ್ನು ವಿಜ್ಞಾನಿಯೊಬ್ಬರು ಲೆಕ್ಕ ಹಾಕಿ ಹೇಳಿದ್ದಾರೆ.

ಅವರ ಪ್ರಕಾರ ಅಂಥ ಮರವೊಂದರ ಬೆಲೆ ಹದಿನಾರು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಎಂದರೆ ಯಾರು ನಂಬುತ್ತಾರೆ? ಈ ವಿವರ ನೋಡಿ–ಒಂದು ಮರ ಉತ್ಪಾದಿಸುವ ಆಮ್ಲಜನಕದ ಬೆಲೆ ಎರಡೂವರೆ ಲಕ್ಷ; ಅದು ಹೀರಿಕೊಳ್ಳುವ ಇಂಗಾಲ ಜನಕದ ಬೆಲೆ ಐದು ಲಕ್ಷ; ಮಣ್ಣಿನ ಸವೆತ ತಡೆಯುವುದರ ಬೆಲೆ ಎರಡೂವರೆ ಲಕ್ಷ; ನೀರು ಭೂಮಿಯಲ್ಲಿ ಇಂಗಿ ಅಂತರ್ಜಲ ಹೆಚ್ಚಿ ಪ್ರವಾಹವನ್ನು ತಡೆಗಟ್ಟುವುದರ ಬೆಲೆ ಮೂರು ಲಕ್ಷ; ಆಹಾರ ಹಾಗೂ ಗೊಬ್ಬರದ ಬೆಲೆ ಅರ್ಧ ಲಕ್ಷ; ಪಶುಪಕ್ಷಿಗಳಿಗೆ, ಕ್ರಿಮಿಕೀಟಗಳಿಗೆ ಆಶ್ರಯ ಹಾಗೂ ರಕ್ಷಣೆ ನೀಡುವುದರ ಬೆಲೆ ಎರಡೂವರೆ ಲಕ್ಷ.

ಇದರ ಮೇಲೆ ಬೇಕಾದರೆ ನೀವು ದಿಮ್ಮಿಗಳ ಬೆಲೆ ಏನಾಗುತ್ತದೆಂಬುದನ್ನು ಲೆಕ್ಕ ಹಾಕಿಕೊಳ್ಳಬಹುದು. ಇದೆಲ್ಲವನ್ನೂ ಮೀರಿದ ಬೆಲೆಯೊಂದಿದೆ. ಮನುಕುಲವನ್ನು ಕಾಪಾಡಲು ಮರಗಳಿಲ್ಲದೆ ಸಾಧ್ಯವಿಲ್ಲ ಎಂಬ ಸತ್ಯವೇ ಆ ಬೆಲೆ! ಈ ಬೆಲೆಯನ್ನು ತೆತ್ತು ನಾವು ಮರಗಳನ್ನು ಕಡಿಯಬೇಕೆ ಎಂಬುದನ್ನು ಈಗ ತೀವ್ರವಾಗಿ ಯೋಚಿಸಬೇಕಾಗಿದೆ.

* * * *



©KTBS Not to be republished

ಒಂದು ನೂರು ಶಿಕ್ಷಕರಿಗಿಂತ ಒಬ್ಬಳು ಜಾಣ ತಾಯಿ ಮೇಲು.

## ಕೃತಿಕಾರರ ಪರಿಚಯ :



**ಹಾ.ಮಾ. ನಾಯಕ** ಅವರ ಪೂರ್ಣ ಹೆಸರು ಹಾರೋಗದ್ದೆ ಮಾನಪ್ಪ ನಾಯಕ. ಇವರು ಹಾ.ಮಾ.ನಾ. ಎಂದೇ ಪ್ರಸಿದ್ಧರಾಗಿದ್ದಾರೆ. ಇವರು **೧೯೩೧ ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಹಾರೋಗದ್ದೆ** ಎಂಬಲ್ಲಿ ಜನಿಸಿದರು. ಇವರು ಅಧ್ಯಾಪಕರಾಗಿ, ಮೈಸೂರು ಮಾನಸ ಗಂಗೋತ್ರಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಗುಲ್ಬರ್ಗ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಕೆಲಸ ನಿರ್ವಹಿಸಿದರು.

ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವ ಇವರು ಅಂಕಣ ಬರಹಗಳಲ್ಲಿ ಅದ್ವಿತೀಯ ಸಾಧನೆ ಮಾಡಿದ್ದಾರೆ. **'ಸಾಹಿತ್ಯ ಸಲ್ಲಾಪ' 'ಸಂಚಯ' 'ಸಂವಾದ' 'ಸಂಪದ' 'ಸಾಂಪ್ರತ' 'ಸ್ಮರಣ' 'ಸಮೂಹ' 'ಸೃಜನ' 'ಸೂಲಂಗಿ' 'ಬಾಳ್ನೋಟಗಳು'** ಇವು ಅವರ ಪ್ರಮುಖ ಕೃತಿಗಳು. **'ಮಹಮದ್ ಪೈಗಂಬರ್', 'ರವೀಂದ್ರನಾಥ ಠಾಕೂರ್', 'ಅಕ್ಕಮಹಾದೇವಿ'** ಮುಂತಾದ ಜೀವನ ಚರಿತ್ರೆಗಳನ್ನೂ ಬರೆದಿದ್ದಾರೆ. ಇವರಿಗೆ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, **'ಸಂಪ್ರತಿ'** ಅಂಕಣಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ೧೯೮೫ರಲ್ಲಿ ಬೀದರ್‌ನಲ್ಲಿ ನಡೆದ ೫೭ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರು ೨೦೦೦ ರಲ್ಲಿ ನಿಧನರಾದರು.

ಪ್ರಸ್ತುತ **'ಒಂದು ಮರದ ಬೆಲೆ'** ಲೇಖನವನ್ನು ಅವರ **'ಸಂಪದ'** ಕೃತಿಯಿಂದ ಆಯ್ದುಕೊಳ್ಳಲಾಗಿದೆ.

©KTBS Not to be republished

## ಅಭ್ಯಾಸ

### I. ಪದಗಳ ಅರ್ಥ ತಿಳಿಯಿರಿ :

**ಅಂತರ್ಜಲ** – ಭೂಮಿಯ ಆಳದಲ್ಲಿರುವ ನೀರು.
**ಕೃತ್ಯ** – ಕೆಲಸ
**ಗೊಡವೆ** – ಉಸಾಬರಿ; ಗೋಜು.
**ಜಾಮೀನು** – ಹೊಣೆ; ಒತ್ತೆ.
**ಡಾಲರ್** – ಅಮೆರಿಕಾದ ರೂಪಾಯಿ
**ತೊಗಟೆ** – ಸಿಪ್ಪೆ
**ತೆತ್ತು** (ಕ್ರಿ) – ನೀಡಿ; ಕೊಟ್ಟು.
**ದಿಮ್ಮಿ** – ಕತ್ತರಿಸಿದ ಮರ; ಕೊರಡು.
**ದೂರು** – ಅಹವಾಲು; ಮೊರೆ.
**ದೃಷ್ಟಿಕೋನ** – ನೋಡುವ ರೀತಿ
**ದೇಣಿಗೆ** – ಚಂದಾ; ವಂತಿಕೆ; ದಾನ.
**ಪ್ರವಾಹ** – ನೀರು ತುಂಬಿ ಹರಿಯುವುದು.
**ಲಭಿಸು** (ಕ್ರಿ) – ದೊರಕು; ಪ್ರಾಪ್ತವಾಗು.
**ವೃಕ್ಷ** – ಮರ; ತರು.
**ಸಜೆ** – ಶಿಕ್ಷೆ; ಸೆರೆಮನೆವಾಸ; ದಂಡನೆ.
**ಸಸ್ಯನಾಶಕ** – ಗಿಡಗಳನ್ನು ಕೊಲ್ಲುವ ರಾಸಾಯನಿಕ.

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಪಾಲ್‌ಕೆಲನ್ ಮಾಡಿದ ಅಪರಾಧವೇನು?

೨. ಪಾಲ್‌ಕೆಲನ್‌ಗೆ ಅಮೇರಿಕೆಯ ನ್ಯಾಯಾಲಯ ಯಾವ ಶಿಕ್ಷೆ ನೀಡಿತು?

೩. ಮರವನ್ನು ಉಳಿಸಲು ಹೌಸ್ಟನ್ ನಗರಪಾಲಿಕೆಗೆ ಎಷ್ಟು ದೇಣಿಗೆ ಬಂತು?

೪. ಭಾರತ ಹಾಗೂ ಅಮೇರಿಕದ ಸಂಸ್ಕೃತಿಗಳಿಗೆ ಎಷ್ಟು ವರ್ಷಗಳ ಇತಿಹಾಸವಿದೆ?

೫. ಅಮೇರಿಕದ ಜನ ಮರಗಳನ್ನು ಉಳಿಸಲು ಏಕೆ ಮುಂದಾಗುತ್ತಾರೆ?

೬. ಹಾ. ಮಾ. ನಾಯಕರು ಹೇಳುವಂತೆ ಎಲ್ಲವನ್ನೂ ಮೀರಿದ ಮರದ ಬೆಲೆ ಯಾವುದು?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಮರವನ್ನು ಉಳಿಸಲು ಅಮೇರಿಕಾದ ವೃಕ್ಷಪ್ರೇಮಿಗಳು ಯಾವ ರೀತಿ ಸ್ಪಂದಿಸಿದರು?

೨. ಬೆಂಗಳೂರಿನಲ್ಲಿ ಗಣ್ಯವ್ಯಕ್ತಿಯೊಬ್ಬರು ತಮ್ಮ ಮನೆಯ ಬಳಿಯಲ್ಲಿನ ಮರ ತೆಗೆಸಲು ಹೇಗೆ ಪ್ರಯತ್ನಿಸಿದರು?

೩. ಭಾರತದಲ್ಲಿ ಮರಗಳ ನಾಶ ಹೇಗೆ ನಿರಾತಂಕವಾಗಿ ನಡೆಯುತ್ತಿದೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಆರೋಗ್ಯವಂತ ಮರವೊಂದರ ಬೆಲೆ ಏನೆಂಬುದನ್ನು ವಿಜ್ಞಾನಿಯೊಬ್ಬರು ಹೇಗೆ ಲೆಕ್ಕ ಹಾಕಿದ್ದಾರೆ?

೨. ಮರಗಳ ಸಂರಕ್ಷಣೆಯಲ್ಲಿ ಭಾರತ ಹಾಗೂ ಅಮೇರಿಕಾದ ಜನರ ನಡುವೆ ಇರುವ ವ್ಯತ್ಯಾಸಗಳೇನು?

©KTBS Not to be republished

**ಈ) ಸಂದರ್ಭದೊಡನೆ ವಿವರಿಸಿರಿ.**

೧. ಮರದ ಬುಡದಲ್ಲಿ ಶುಭಾಶಯ ಪತ್ರಗಳನ್ನಿಡುತ್ತಿದ್ದಾರೆ.

೨. ನಮ್ಮಲ್ಲಿ ಮರ ಕತ್ತರಿಸುವುದು ತೀರಾ ಸಾಮಾನ್ಯ ವಿಚಾರ.

೩. ಮನುಕುಲವನ್ನು ಕಾಪಾಡಲು ಮರಗಳಿಲ್ಲದೆ ಸಾಧ್ಯವಿಲ್ಲ.

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.**

ಮರ, ಭೂಮಿ, ದೇಣಿಗೆ, ಸಜೆ.



ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ.

ಆ) ಕೆಳಗಿನ ಪದಗಳಿಗೆ ತತ್ಸಮ ತದ್ಭವ ರೂಪ ಬರೆಯಿರಿ.

ವರ್ಷ, ದೃಷ್ಟಿ, ಆಶ್ಚರ್ಯ.

ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.

ದೃಷ್ಟಿಕೋನ, ಸಂಸ್ಕೃತಿ, ಪ್ರಾರ್ಥನೆ, ದೇಣಿಗೆ, ಸುದ್ದಿ.

ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಬಹಿರಂಗ, ನಿಧಾನ, ಆರೋಗ್ಯ, ಉಳಿಸು, ಆಸಕ್ತಿ.

ಉ) ಕೆಳಗಿನ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.

**ಮಾದರಿ :** ದೀರ್ಘಾಯುಸ್ಸು = ದೀರ್ಘ + ಆಯುಸ್ಸು

೧. ಪತ್ರಗಳನ್ನಿಡು = ____________ + ____________

೨. ಸಾವಿರಾರು = ____________ + ____________

೩. ಶುಭಾಶಯ = ____________ + ____________

೪. ಮರವೊಂದು = ____________ + ____________

೫. ವಿಜ್ಞಾನಿಯೊಬ್ಬ = ____________ + ____________

ಊ) 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| ೧) ಅಲ್ಪವಿರಾಮ | ಅ) ? |
| ೨) ಪ್ರಶ್ನಾರ್ಥಕ | ಆ) ; |
| ೩) ಆಶ್ಚರ್ಯ | ಇ) , |
| ೪) ಅರ್ಧವಿರಾಮ | ಈ) "....." |
| ೫) ಉದ್ಧರಣ | ಉ) ! |
| | ಊ) + |

©KTBS Not to be republished



ಜಾಣನಿಗೆ ಮಾತಿನಪೆಟ್ಟು ದಡ್ಡನಿಗೆ ದೊಣ್ಣೆಯ ಪೆಟ್ಟು.

## IV. ಸೈದ್ಧಾಂತಿಕ ವ್ಯಾಕರಣ :

### ೧. ಲಿಂಗಗಳು :

ಮಕ್ಕಳೇ, ಈ ಪ್ರಪಂಚದಲ್ಲಿ ಮನುಷ್ಯ ಜಾತಿ ಹಾಗೂ ಮನುಷ್ಯ ಜಾತಿಯನ್ನು ಹೊರತು ಪಡಿಸಿದ ಜೀವ ಜಗತ್ತು ಇದೆ. ಮನುಷ್ಯ ಜಾತಿಯಲ್ಲಿ ಗಂಡು ಹೆಣ್ಣು ಎನ್ನುವ ಭೇದವಿದೆ. ಆದರೆ ಮಾನವೇತರ ಜೀವ ಜಗತ್ತಿನಲ್ಲಿ ಅದು ಸ್ಪಷ್ಟವಾಗಿಲ್ಲ. ಹೀಗಾಗಿ ನಾವು ಬಳಸುವ ಶಬ್ದಗಳಲ್ಲಿ ಅದು ಮಾನವ ಸಂಬಂಧಿ ಆಗಿದ್ದರೆ, ಗಂಡು ಇಲ್ಲವೇ ಹೆಣ್ಣು ಎಂದು ನಿರ್ಣಯಿಸಲು ಬರುತ್ತದೆ. ಮಾನವ ಸಂಬಂಧಿ ಪದ ಆಗಿರದಿದ್ದರೆ ಅದು ಹೆಣ್ಣೂ ಅಲ್ಲ, ಗಂಡೂ ಅಲ್ಲ ಎನ್ನುವ ನಿರ್ಣಯಕ್ಕೆ ಬರುತ್ತೇವೆ. ಈ ವಿಚಾರಗಳನ್ನು ಆಧರಿಸಿ ಕನ್ನಡ ಭಾಷೆಯಲ್ಲಿ ಮೂರು ಲಿಂಗಗಳನ್ನು ಗುರುತಿಸುತ್ತೇವೆ. ಅವುಗಳೆಂದರೆ

೧. ಪುಲ್ಲಿಂಗ ೨. ಸ್ತ್ರೀಲಿಂಗ ೩. ನಪುಂಸಕಲಿಂಗ

### ೧. ಪುಲ್ಲಿಂಗ :

ಯಾವ ಶಬ್ದ ಪ್ರಯೋಗ ಮಾಡಿದಾಗ 'ಗಂಡಸು' ಎನ್ನುವ ಭಾವ ನಮ್ಮ ಮನಸ್ಸಿಗೆ ಬರುವುದೋ ಅದು 'ಪುಲ್ಲಿಂಗ' ಎಂದು ಕರೆಸಿಕೊಳ್ಳುತ್ತದೆ.

**ಉದಾ :** ಮುದುಕ, ಶಂಕರ, ಅವನು, ಚಿಕ್ಕಪ್ಪ, ತಂದೆ, ಅಣ್ಣ, ಮಾವ, ಸಚಿವ, ಕವಿ, ಒಳ್ಳೆಯವ, ಜಾಣ, ಶಕ್ತಿವಂತ, ಗಟ್ಟಿಗ.

©KTBS Not to be republished

### ೨. ಸ್ತ್ರೀಲಿಂಗ :

ಯಾವ ಶಬ್ದ ಪ್ರಯೋಗ ಮಾಡಿದಾಗ 'ಹೆಂಗಸು' ಎನ್ನುವ ಭಾವ ನಮ್ಮ ಮನಸ್ಸಿಗೆ ಬರುವುದೋ ಅದು 'ಸ್ತ್ರೀಲಿಂಗ' ಎಂದು ಕರೆಸಿಕೊಳ್ಳುತ್ತದೆ.

**ಉದಾ :** ದೊಡ್ಡವಳು, ಅಕ್ಕ, ಅರಸಿ, ರಾಣಿ, ಚೆಲುವೆ, ತಾಯಿ, ಒಳ್ಳೆಯವಳು, ಸ್ನೇಹಿತೆ, ಮಗಳು, ಸಹೋದರಿ, ತಂಗಿ, ಗೆಳತಿ, ಸಚಿವೆ, ಬಾಲಕಿ, ಶಿಕ್ಷಕಿ.

### ೩. ನಪುಂಸಕಲಿಂಗ :

ಯಾವ ಶಬ್ದವನ್ನು ಪ್ರಯೋಗ ಮಾಡಿದಾಗ 'ಗಂಡಸು' ಇಲ್ಲವೇ 'ಹೆಂಗಸು' ಎನ್ನುವ ಭಾವ ನಮ್ಮ ಮನಸ್ಸಿಗೆ ಬರದೇ ಇದ್ದರೆ ಅದು 'ನಪುಂಸಕಲಿಂಗ' ಎಂದು ಕರೆಸಿಕೊಳ್ಳುತ್ತದೆ.

**ಉದಾ :** ಮಗು, ಹೂವು, ಹಣ್ಣು, ಕಾಯಿ, ಮರ, ಹಾವು, ಇಲಿ, ಎತ್ತು, ಹುಲಿ, ಕಲ್ಲು, ಮಣ್ಣು, ನದಿ, ಬೆಟ್ಟ, ಪುಸ್ತಕ, ಆಕಾಶ, ಕತ್ತೆ, ಕುದುರೆ, ಜನ.



ತುಂಬಿದ ಕೊಡ ತುಳುಕುವುದಿಲ್ಲ.

ಮುಖ್ಯವಾಗಿ ಲಿಂಗವನ್ನು ನಿರ್ಧರಿಸುವಾಗ ಬುದ್ಧಿ ವಿಕಾಸವನ್ನು ಪ್ರಧಾನವಾಗಿ ಪರಿಗಣಿಸಲಾಗುತ್ತದೆ.

**ಉದಾ :** ಹೆಣ್ಣುಮಗು, ಎಮ್ಮೆ, ಆಕಳು, ಹಸು, ಹೆಣ್ಣಾನೆ – ಇವು ಸ್ತ್ರೀಲಿಂಗ ಎಂದು ನಿರ್ಣಯಿಸಲು ಬರುವುದಿಲ್ಲ. ಅದೇ ರೀತಿ ಎತ್ತು, ಕೋಣ, ಗಂಡುಮಗು, ಗಂಡುನಾಯಿ ಇವುಗಳನ್ನು ಪುಲ್ಲಿಂಗ ಎಂದು ನಿರ್ಣಯಿಸಲು ಬರುವುದಿಲ್ಲ. ಏಕೆಂದರೆ ಇವುಗಳ ಬುದ್ಧಿವಿಕಾಸ ಅಷ್ಟಾಗಿ ಆಗಿರುವುದಿಲ್ಲ. ಈ ರೀತಿಯ ಪದಗಳನ್ನು ನಪುಂಸಕ ಲಿಂಗವೆಂದೇ ಪರಿಗಣಿಸಬೇಕು.

## V. **ಚಟುವಟಿಕೆ :**

೧. ನಿಮ್ಮ ಶಾಲೆ ಮತ್ತು ಮನೆಯ ಸುತ್ತಲು ಗಿಡಮರಗಳನ್ನು ಬೆಳೆಸಿರಿ.

೨. ಮರಗಳ ನಾಶ ಕಂಡುಬಂದಲ್ಲಿ ಸಂಘಟನೆ ಮೂಲಕ ತಡೆಯಿರಿ.

೩. ವೃಕ್ಷಗಳ ಉಪಯೋಗಗಳನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡಿ.

©KTBS Not to be republished

# ೮. ಎಮ್ಮ ಮನೆಯಂಗಳದಿ...

H5I4X8

– ಶ್ರೀನಿಧಿ ಡಿ. ಎಸ್.

**ಪಾಠ ಪ್ರವೇಶ :** ಮನುಷ್ಯನು ವಯಸ್ಸಾದಂತೆಲ್ಲ ತನ್ನ ಬಾಲ್ಯವನ್ನು ನೆನೆಸಿಕೊಳ್ಳತೊಡಗುತ್ತಾನೆ. ಬಾಲ್ಯಕಾಲದಲ್ಲಿ ಆಡುತ್ತಿದ್ದ ಆಟಗಳು, ಆಗ ಸಿಗುತ್ತಿದ್ದ ಸ್ವಾತಂತ್ರ್ಯ, ಅಜ್ಜಿಮನೆಯಲ್ಲಿ ಸಿಗುತ್ತಿದ್ದ ಸ್ವಚ್ಛಂದತೆ ಇವೆಲ್ಲ ಮತ್ತೆಂದೂ ಆತನ ಜೀವನದಲ್ಲಿ ಮರಳಿ ಬಾರವು. ಪ್ರಸ್ತುತ ಪ್ರಬಂಧವು ಬಾಲ್ಯಕಾಲದ ಆ ಮಧುರ ನೆನಪುಗಳನ್ನು ಮೆಲುಕು ಹಾಕುತ್ತದೆ. ಕನ್ನಡ ಸಾಹಿತ್ಯದಲ್ಲಿ ಲಲಿತ ಪ್ರಬಂಧ ಎಂಬುದು ಒಂದು ಸಾಹಿತ್ಯ ಪ್ರಕಾರ. ಇದರಲ್ಲಿ ಯಾವುದಾದರೂ ಒಂದು ವಿಷಯವನ್ನು ಆರಿಸಿಕೊಂಡು ಲೇಖಕರು ವಿಸ್ತರಿಸುತ್ತ ಹೋಗುತ್ತಾರೆ. ಹಾಗೆ ವಿಸ್ತರಿಸುವಾಗ ವೈಯಕ್ತಿಕ ಅನುಭವಗಳು, ಅಭಿಪ್ರಾಯಗಳು ಕೂಡ ಸೇರಿಕೊಳ್ಳಬಹುದು. ಲಲಿತ ಪ್ರಬಂಧದ ಭಾಷೆ ನವುರಾಗಿರುತ್ತದೆ. ಲಲಿತ ಪ್ರಬಂಧವನ್ನು ಓದಿದಾಗ ಓದುಗನ ಮನಸ್ಸಿನಲ್ಲಿ ಒಂದು ಹಿತಕರವಾದ ಭಾವನೆ ಹುಟ್ಟಬೇಕು. ಆತನ ಮನಸ್ಸೂ ಕಲ್ಪನೆಗಳಲ್ಲಿ ತೇಲಾಡಬೇಕು. ಪ್ರಸ್ತುತ ಪ್ರಬಂಧದಲ್ಲಿ ಅಜ್ಜಿಮನೆಯ ಅಂಗಳದ ಬಗ್ಗೆ ಲೇಖಕರು ನವುರಾದ ಭಾಷೆಯಲ್ಲಿ ತಮ್ಮ ಲಹರಿಯನ್ನು ಹರಿಸಿದ್ದಾರೆ.


ಅಂಗಳ ಅನ್ನುವ ಪುಟ್ಟ ಜಾಗ ವೈವಿಧ್ಯಮಯ ವಿಷಯಗಳ ಆಶ್ರಯದಾಣ. ಮನೆಗೂ ಹೊರ ಪ್ರಪಂಚಕ್ಕೂ ಇರುವ ಸುಂದರ ಕೊಂಡಿ, ಅಂಗಳ. ಮನೆಯೆಂಬ ಆಶ್ರಯದಿಂದ ಜಗತ್ತೆಂಬ ಜಾಲಕ್ಕೆ ಕಾಲಿಡಬೇಕೆಂದರೆ ಮೊದಲು ಮೀರಬೇಕಾದ್ದು ಅಂಗಳವನ್ನೇ. ಒಳಗೆ ಕಾಲಿಡುವವನಿಗೆ ಎಲ್ಲ ಕೊಳೆಯನ್ನು ಕೊಡವಿ ಸಾಗಲು, ಹೊರಗೆ ನಡೆಯುವವನಿಗೆ ಎಲ್ಲ ಸರಿಯಾಗಿದೆಯೇ ಎಂದು ನೋಡಿಕೊಳ್ಳಲು ಅಂಗಳವೇ ಜಾಗ. ಮೊದಲು ಕತ್ತಲಾಗುವುದು ಮನೆಯೊಳಕ್ಕಾದರೆ, ಮೊದಲು ಬೆಳಕಾಗುವುದು ಅಂಗಳಕ್ಕೆ! ಹುಟ್ಟಿನ ಸಂಭ್ರಮಕ್ಕೆ ಒಳಮನೆ ಸಾಕ್ಷಿಯಾದರೆ, ಸಾವಿನ ಸೂತಕಕ್ಕೆ ಅಂಗಳವೇ ಆಶ್ರಯ. ಒಳಗೆ ಯಾರು ಹೇಗೋ, ಆದರೆ ಬಯಲಂಥ ಅಂಗಳಕ್ಕೆ ಎಲ್ಲರೂ ಸಮಾನರೇ! ಆಳೂ ಅರಸನೂ ಜೊತೆಗೆ ನಿಂತು ಮಾತನಾಡಲು ಅಂಗಳದಲ್ಲಿ ಮಾತ್ರ ಸಾಧ್ಯ. ಮನೆಯೇ ಮೊದಲ ಪಾಠಶಾಲೆಯಾದರೆ, ಅಂಗಳವೇ ಮೊದಲ ಮೈದಾನ!

ಬೇಸಗೆಯ ನನ್ನ ಅಜ್ಜನ ಮನೆಯ ಸಕಲ ಆಟಗಳಿಗೂ ಅಂಗಳವೇ ಹೆಡ್ಡಾಫೀಸಾಗಿತ್ತು. ಕಣ್ಣಾಮುಚ್ಚಾಲೆಯಿಂದ ತೊಡಗಿ, ಕಂಬಾಟದವರೆಗೂ ಅಂಗಳವೇ ನಮ್ಮ ಆಡುಂಬೊಲ! ನಮ್ಮ ಕೈಯ ನುಣುಪೆಲ್ಲ ಆ ಐಸ್‌ಪೈಸ್ ಆಡುವ ಕಂಬಗಳಿಗೆ ಮೆತ್ತಿಕೊಂಡು, ಕಂಬಗಳ ಒರಟೆಲ್ಲ ನಮ್ಮ ಕೈಗಂಟಿ-ಕೊಳ್ಳುವಷ್ಟು ಅಲ್ಲೇ ಆಟವಾಡುತ್ತಿದ್ದೆವು. ಒಂದಾಟ ಮುಗಿದ ಮೇಲೆ ಇನ್ನೊಂದು. ಕೂತು ಆಡುವ ಆಟ ಮುಗಿದರೆ, ನಿಂತಾಟ, ಮತ್ತೆ ಕುಣಿದಾಟ! ಚಪ್ಪರದೇಣಿಯೇ ಸಿಂಹಾಸನ, ಸೆಗಣಿ ಸಾರಿಸಿದ ನೆಲವೇ ವೇದಿಕೆ. ಅಡಿಕೆಯ ದಬ್ಬೆಯೇ ಶಿವಧನುಸ್ಸು, ವಜ್ರಾಯುಧ, ಶಿವಾಜಿಯ ಕತ್ತಿ! ನಮ್ಮ ಕುಣಿತಕ್ಕೆ ಕಂಗಾಲಾಗುವ ಅಜ್ಜಿ, ಕಷ್ಟಪಟ್ಟು ಸೆಗಣಿ ಸಾರಿಸಿದ ನೆಲವೆಲ್ಲ ಕಿತ್ತುಹೋಯಿತು ಎಂದು ಬೈದರೆ ನಮಗೆ ಪರಮಾನಂದ.



ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ.

ಏಕೆಂದರೆ ಮಾರನೇ ದಿನದ ಸೆಗಣಿ ಸಾರಿಸುವ ಕೆಲಸ ಎಲ್ಲ ಆಟಗಳಿಗೂ ಮಿಗಿಲು. ಕೊಟ್ಟಿಗೆಯಿಂದ ಸೆಗಣಿ ಬಾಚಿ ತಂದು, ಅದನ್ನು ಬಕೇಟಲ್ಲಿ ಕಲಸಿ, ಅದಕ್ಕೆ ಹಳೆಯ ಬ್ಯಾಟರಿ ಸೆಲ್ಲು ಗುದ್ದಿ ಒಳಗಿನ ಪುಡಿ ತುಂಬಿ, ಅಂಗಳದ ತುಂಬ ಸೆಗಣಿ ನೀರು ಚೆಲ್ಲಿ ಗುಡಿಸುವ ಮಜವೇ ಬೇರೆ.



ಮೇ ತಿಂಗಳು ಬಂತೆಂದರೆ ಅಂಗಳಕ್ಕೆ ಭರ್ಜರಿ ಕೆಲಸ. ಅಂಗಳದ ಕುರುಚಲು ಕಳೆಯನ್ನೆಲ್ಲ ಕೆತ್ತಿ, ನೀಟಾಗಿ ಶೇವ್ ಮಾಡಿದ ಮುಖದಂತೆ ಫಳಫಳಿಸುವಂತೆ ಮಾಡಿದ ಮೇಲೆ ಚಾಪೆಗಳೆಲ್ಲ ಹೊರ ಬರುತ್ತವೆ. ಕರಿದು ತಿನ್ನುವ ಹುರಿದು ಮುಕ್ಕುವ ಸಕಲ ವಸ್ತುಗಳನ್ನೂ ಸಿದ್ಧಪಡಿಸುವ ಕಾಲ ತಾನೇ ಅದು? ಹಪ್ಪಳ ಸಂಡಿಗೆಗಳನ್ನು ಮಾಡುವವರ ಪಾಲಿನ ಅಮೋಘ ಮಿತ್ರ ಅಂಗಳ. ನನ್ನಪ್ಪ ಪ್ರತಿ ವರ್ಷವೂ ಕರ್ತವ್ಯವೆಂಬಂತೆ ಹಲಸಿನ ಕಾಯಿ ಕೊಯ್ಯುವುದು, ಆಮೇಲೆ ನಾವು ಅಣ್ಣ ತಂಗಿ ಅಪ್ಪ ಸೇರಿ ಆ ಹಲಸಿನ ಕಾಯಿಯ ಮೈ ಹಿಸಿದು ಅಂಗಳದಲ್ಲೇ ಕೆತ್ತಿ ಸೊಳೆಗಳನ್ನು ಬಿಡಿಸುವುದು, ಅಮ್ಮ ಉಳಿದ ಸಕಲ ಸಂಸ್ಕಾರಗಳನ್ನು ನೆರವೇರಿಸಿ ಹಪ್ಪಳ ಮಾಡುವುದು ಹಲವು ವರ್ಷ ನಡೆದು ಬಂದ ಸಂಪ್ರದಾಯ. ಬಿಸಿಲಿಗೆ ನಾಯಿ ಕಾಗೆಗಳನ್ನೋಡಿಸುವ ನೆಪದಲ್ಲಿ, ಅಲ್ಲೇ ಕೂತು ಹಸಿ ಹಪ್ಪಳ ತಿನ್ನುವ ರುಚಿಯನ್ನು ಇಲ್ಲಿ ವರ್ಣಿಸಲು ಯಾವ ಪದಗಳೂ ಇಲ್ಲ.

ಮಳೆಗಾಲದ ಮೋಡಗಳು ದಟ್ಟೈಸಿಕೊಳ್ಳುವ ಮೊದಲು ಎಲ್ಲವನ್ನೂ ಕಳಚಿಕೊಂಡು ಆಗಸಕ್ಕೆ ನೇರ ಮುಖ ಮಾಡಿಕೊಳ್ಳಬೇಕಾದ್ದು ಅಂಗಳದ ಕರ್ತವ್ಯ. ಮಲೆನಾಡಿನಲ್ಲಾದರೆ ಅಡಿಕೆಯ ಸೋಗೆಗಳೂ, ಕರಾವಳಿಯಲ್ಲಿ ತೆಂಗಿನ ಮಡಲುಗಳೂ ಮತ್ತೆ ಕೊಟ್ಟಿಗೆಯಟ್ಟ ಸೇರಿದರೆ, ಕಂಬಗಳು ಮಾತ್ರ ಮಳೆ ಹೊಡೆತಕ್ಕೆ ಸಿದ್ಧವಾಗಿ ನಿಲ್ಲುತ್ತವೆ. ಅಡಿಕೆ ಮರವನ್ನು ಸೀಳಿ ಮಾಡಿದ ಟೆಂಪರರಿ ಕಾಲುಹಾದಿ ದಣಪೆಯಿಂದ ಮನೆಯವರೆಗೆ. ಹೊರಲೋಕದಿಂದ ಒಳನಾಕಕ್ಕೆ! ಮಳೆ ನೀರು ಹೆಂಚಿಂದ ಬಿದ್ದು ನೆಲ ಹಾಳಾಗಬಾರದೆಂದು ಕೆಳಗೆ ಮುಚ್ಚಿಕೊಂಡಿರುವ ಸೊಪ್ಪು, ಸೋಗೆಗಳು! ಮಳೆ ಬರುವಾಗ, ಹಿತ್ತಲಿನ ಬಚ್ಚಲ ಮನೆಯ ಸುತ್ತ ಕೂತು ಮಳೆ ಸದ್ದು ಕೇಳುತ್ತ ಹಲಸಿನ ಬೀಜವನ್ನೋ, ಗೇರು ಬೀಜವನ್ನೋ ಸುಟ್ಟುಕೊಂಡು ತಿನ್ನುತ್ತ ಕುಳಿತಿದ್ದರೆ, ಅಂಗಳ ಅನಾಥ.

©KTBS Not to be republished

ಮಳೆಗಾಲದಲ್ಲಿ ಅಂಗಳದಲ್ಲಿ ಅಚ್ಚರಿಗಳೂ ಮೂಡುತ್ತವೆ. ಕಳೆದ ಮಳೆಗಾಲದಲ್ಲಿ ಹೂವಾಗಿ ಮರೆತು ಹೋಗಿದ್ದ ನಾಗದಾಳಿ ಗಿಡ, ಧುತ್ತೆಂದು ಅಲ್ಲೇ ಮೂಲೆಯಲ್ಲಿ ಮತ್ತೆ ಪ್ರತ್ಯಕ್ಷವಾಗಿ ಮಳೆಗೆ ಮುಖವೊಡ್ಡುತ್ತದೆ. ಇನ್ಯಾವುದೋ ಡೇರೇ ಹೂವಿನ ಗಿಡ ಗಡ್ಡೆಯಿಂದ ಮೂತಿ ಹೊರ ತೂರಿಸಿ ತಾನೂ ಇದ್ದೇನೆ ಎನ್ನುತ್ತದೆ. ಬಣ್ಣ ಬಣ್ಣದ ಗೌರೀ ಹೂಗಳ ಗಿಡ, ಯಾವುದೋ ಹಕ್ಕಿಯುಪಕಾರದಿಂದ ಹುಟ್ಟಿದ ಟೊಮೇಟೋ ಗಿಡ, ಭತ್ತದ ಸಸಿ... ಎಲ್ಲ ಸಹಬಾಳ್ವೆ ಆರಂಭಿಸುತ್ತವೆ. ಅಂಗಳದಂಚಿನ ದಾಸವಾಳ ಗಾಳಿಗೆ ಇತ್ತಲೇ ಬಗ್ಗಿ ನಾನೂ ಇದ್ದೇನೆ ಎನ್ನುತ್ತದೆ.

ಕರಾವಳಿಯ ಮಳೆಗಾಲದಲ್ಲಿ ಮನೆಬಾಗಿಲಿಗೆ ಬರುವ ಆಟಿ ಕಳಂಜವೆಂಬ ಜನಪದ ನೃತ್ಯದ ಸೊಗಸೂ, ಮಳೆಯ ಸದ್ದನ್ನೂ ಮೀರಿಸುವ ನೇಜಿ ನೆಡುವ ಹೆಂಗಸರ ಚಹಾದ ಜೊತೆಗಿನ ಕಿಲಕಿಲವು ನಡೆಯುವುದು ಅಂಗಳದಲ್ಲೇ. ಪತ್ರೊಡೆಗಳಾಗಿ ನಮ್ಮ ಜಿಹ್ವಾಚಾಪಲ್ಯವನ್ನು ತೀರಿಸುವ ಕೆಸುವಿನೆಲೆಗಳ ಜನನವೂ ಇಲ್ಲಿಯೇ. ಬಣ್ಣಬಣ್ಣದ ಅಣಬೆಗಳೂ, ದಾರಿತಪ್ಪಿ ಬರುವ ದೊಡ್ಡ ಕಪ್ಪೆಗಳೂ ಅಂಗಳವನ್ನು ಅಲಂಕರಿಸುತ್ತವೆ. ಇನ್ನು, ಮುತ್ತೈದೆಯ ಹಣೆಗೆ ತಿಲಕ ಇಟ್ಟಂತೆ, ಅಂಗಳಕ್ಕೆ ತುಳಸೀಕಟ್ಟೆ. ರಾತ್ರಿ ಆ ಕಟ್ಟೆಯಲ್ಲಿ ಮಿನುಗುವ ಪುಟ್ಟ ದೀಪವು ಅಂಗಳದ ನಕ್ಷತ್ರ! ಮಳೆಗಾಲದಲ್ಲಿ ತುಳಸಿಯ ದೀಪಕ್ಕೆ ಹೊಸ್ತಿಲೇ ಆಸರೆ. ಮಳೆ ಕಳೆದ ಮೇಲೆ ಬರುವ ಹಬ್ಬಗಳ ಜೊತೆಗೆ ಮತ್ತೆ ಹಣತೆಗೆ ತುಳಸಿಕಟ್ಟೆಯ ಸಖ್ಯ ಮರಳಿ ದೊರಕುತ್ತದೆ. ದೀಪಾವಳಿ ತುಳಸೀ ಪೂಜೆ, ಉತ್ಥಾನ ದ್ವಾದಶಿಯ ತುಳಸೀ ಮದುವೆಗೆ ಅಂಗಳದ್ದೇ ಪಾರುಪತ್ಯ.

ಮಲೆನಾಡಿನಲ್ಲಿ ಬಹಳ ಮದುವೆಗಳ ಮಂಟಪಗಳಿಗೆ ಅಂಗಳವೇ ಆಶ್ರಯದಾತ. ಮದುವೆಯ ಸಮಸ್ತ ತಯಾರಿಗಳಿಗೂ ಅಂಗಳವೇ ಗತಿ. ಪಕ್ಕದ ಮನೆ ಅಂಗಳದಲ್ಲಿ ಬಾಳೆ ಎಲೆಗಳನ್ನು ಕ್ಲೀನು ಮಾಡಿ, ತರಕಾರಿ ಕೊಚ್ಚಿದರೆ, ಮತ್ತೊಂದು ಮನೆಯಂಗಳದಲ್ಲಿ ಊಟದ ತಯಾರಿ. ಇನ್ಯಾರದೋ ಹಿತ್ತಲಲ್ಲಿ ಅಡುಗೆ. ಗೃಹಪ್ರವೇಶವೆಂಬ ಗಂಡಿನ ಮನೆಯ ಸಂಭ್ರಮಕ್ಕೆ ಮತ್ತೆ ಅಂಗಳವೇ ಸಾಕ್ಷಿ. ಹೆಣ್ಣಿನ ಹೊಸ ಬದುಕು ಆರಂಭವಾಗುವುದೇ ಅಲ್ಲಿ. ಹೊಸ ಊರು, ಹೊಸ ಜಾಗ, ಹೊಸ ಮಂದಿಯ ಮಧ್ಯೆ ಪ್ರಾಯಶಃ ಆ ಅಂಗಳ ಮಾತ್ರವೇ ಹಳೆಯದು ಎನ್ನಿಸುವುದೋ ಏನೋ! ಮಾರನೆಯ ದಿನದ ಚಳಿಬೆಳಗಲ್ಲಿ ಅಂಗಳದಲ್ಲಿ ರಂಗೋಲಿಯ ಚಿತ್ರಗಳನ್ನ ಬಿಡಿಸುತ್ತ ನವವಧುವು ತಾನೇ ಚಿತ್ರವಾಗುವ ಸೋಜಿಗವೂ ನಡೆಯುತ್ತದೆ.

©KTBS Not to be republished

ಅಡಿಕೆ ಕೊಯ್ಲಿನ ಸಮಯದಲ್ಲಿ, ಮಲೆನಾಡಿನಲ್ಲಿ, ಹಸಿರು ಹಳದಿ ಅಡಿಕೆಗಳ ರಾಶಿ ರಾಶಿ ಗೊಂಚಲುಗಳು ಅಂಗಳವನ್ನು ತುಂಬಿಕೊಳ್ಳುವ ಪರಿಯೇ ಚಂದ. ಊರ ಮಂದಿಯೆಲ್ಲ ಒಂದಾಗಿ, ಹಗಲೆನ್ನದೆ, ರಾತ್ರಿಯೆನ್ನದೇ ಆ ಅಡಿಕೆಗಳನ್ನು ಸುಲಿಯುವ ಸಂಭ್ರಮಕ್ಕೆ ಸಾಟಿಯೇ ಇಲ್ಲ! ಅಂಗಳದ ಆಚೆಗೆ ಅದೇನೇ ಆಗಿದ್ದರೂ ಒಳಗೆ ಬಂದು ಕೂತ ಮೇಲೆ ಎಲ್ಲರೂ ಒಂದೇ ಇಲ್ಲಿ. ವಿದೇಶೀ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ, ವಾರಾಂತ್ಯದಲ್ಲಿ ಊರಿಗೆ ಬಂದ ಮನೆಮಗನೂ, ಆಳುಮಗನೂ ಒಟ್ಟಿಗೇ ಅಡಿಕೆ ಸುಲಿಯುತ್ತಿರುತ್ತಾರೆ. ಜಗದ ಸುದ್ದಿಗಳೆನ್ನಲ್ಲ ಹೇಳುತ್ತ, ಏನೇನೋ ಹರಟೆ ಹೊಡೆಯುತ್ತಿದ್ದರೂ ಕೈಗಳು ಮಾತ್ರ ಯಾಂತ್ರಿಕವಾಗಿ ರಾಶಿಯಿಂದ ಅಡಿಕೆ ಹೆಕ್ಕಿ ಸುಲಿದು, ಡಬ್ಬ ತುಂಬಿಸುವ ಆ ಚಾಕಚಕ್ಯತೆಯನ್ನು ನೋಡಲೆರಡು ಕಣ್ಣುಗಳು ಸಾಲವು.

ಬದಲಾವಣೆ ಎಂಬ ಜಗದ ನಿಯಮ ಅಂಗಳಕ್ಕೂ ಅನ್ವಯಿಸುತ್ತದೆ. ಸೆಗಣಿಯ ಅಂಗಳವನ್ನು ಇಂಟರ್‌ಲಾಕುಗಳು ನಿಧಾನವಾಗಿ ಬಂಧಿಸುತ್ತಿವೆ. ಮಣ್ಣ ಪಾಗಾರವನ್ನು ಇಟ್ಟಿಗೆ ಸಿಮೆಂಟುಗಳು ತಿಂದು ಹಾಕಿವೆ. ಸ್ವಚ್ಛಂದ ಬೇರು ಬಿಟ್ಟಿದ್ದ ಹೂ ಗಿಡಗಳಿಗೆ ಶಿಸ್ತು ಕಲಿಸಲು ಇದೀಗ ಕುಂಡಗಳು ಬಂದಿವೆ. ಅಂಗಳದ ಹುಲಿದನದ ಆಟವು ಮೊಬೈಲ್ ಫೋನಿಗೆ ವರ್ಗಾವಣೆಯಾಗಿದೆ. ದೀಪಾವಳಿಯಂದು ತಿರುಗುವ ನೆಲಚಕ್ರಕ್ಕೆ ಸಿಮೆಂಟಿನಂಗಳದಲ್ಲಿ ಹೊಸ ವೇಗ ದಕ್ಕಿದೆ. ಮಳೆ ಬಂದಾಗ ಅಮ್ಮನೀಗ ತಗಡು ಚಪ್ಪರದ ಕೆಳಗೆ ತೋಯದೇ ನಡೆಯುತ್ತಾಳೆ. ಅಂಗಳದ ಕಳೆ ತೆಗೆದೂ ತೆಗೆದೂ ನಡು ಬಾಗಿದ್ದ ಅಜ್ಜನೀಗ ಕೋಲು ಹಿಡಿದು ನೆಟ್ಟಗಾಗಿದ್ದಾನೆ. ಏದುಸಿರು ಬಿಡುತ್ತ ಅಂಗಳ ಚಂದ ಕಾಣಬೇಕೆಂದು ಗುದ್ದಲಿ ಹಿಡಿದು ನೆಲ ಕೆತ್ತುತ್ತಿದ್ದ ಅಪ್ಪ, ಆರಾಮ ಕುರ್ಚಿಯಲ್ಲಿ ಕೂತಿದ್ದಾನೆ. ಅಂಗಳವನ್ನು ಬಂಧಿಸಿದ ಕಾಂಪೌಂಡು ಗೋಡೆಯ ಮೇಲೆ ಅಳಿಲು ಕೂತು ಬಿಸಿಲು ಕಾಯಿಸಿಕೊಳ್ಳುತ್ತಿದೆ. ಧೂಳು ಕೆಸರುಗಳು ಅದರಾಚೆಗೇ ಉಳಿದಿವೆ. ಹಬ್ಬಕ್ಕೆಂದು ಮನೆಯ ಸುತ್ತ ಹಚ್ಚಿದ ದೀಪಸಾಲುಗಳನ್ನು ಅಂಗಳವೂ ಮಸುಕಾಗಿ ಪ್ರತಿಫಲಿಸುತ್ತ ತಾನೂ ಪ್ರಜ್ವಲಿಸುತ್ತಿದೆ!

* * * *

## ಕೃತಿಕಾರರ ಪರಿಚಯ :



**ಶ್ರೀನಿಧಿ ಡಿ. ಎಸ್., ದಕ್ಷಿಣಕನ್ನಡ ಜಿಲ್ಲೆಯ ಕಿನ್ನಿಗೋಳಿಯಲ್ಲಿ ೧೯೮೩ರಲ್ಲಿ** ಜನಿಸಿದರು. ವೃತ್ತಿಯಿಂದ ಚಲನಚಿತ್ರ–ಧಾರಾವಾಹಿ ಬರಹಗಾರರು. **"ಹೂವು ಹೆಕ್ಕುವ ಸಮಯ"** ಇವರ ಕವನ ಸಂಕಲನ, **"ತೂಗುಮಂಚದಲ್ಲಿ ಕೂತು"** ಲಲಿತ ಪ್ರಬಂಧಗಳ ಸಂಕಲನ. ಅಂಕಣ–ಕಾರರು, ಲೇಖಕರಾಗಿಯೂ ಪ್ರಸಿದ್ಧರಾಗಿರುವ ಇವರು, ನಾಡಿನ ಪ್ರಸಿದ್ಧ ಟಿವಿ ವಾಹಿನಿಗಳಲ್ಲಿ ಕೆಲಸ ಮಾಡಿದ್ದಾರೆ. ಈ ಲಲಿತ ಪ್ರಬಂಧವನ್ನು ಇವರ **"ತೂಗುಮಂಚದಲ್ಲಿ ಕೂತು"** ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

©KTBS Not to be republished

**ಪ್ರಬಂಧದ ಆಶಯ :** ಲೇಖಕರು ಇಲ್ಲಿ ತನ್ನ ಬಾಲ್ಯದ ದಿನಗಳನ್ನು ನೆನೆಸಿಕೊಳ್ಳುವ ಮೂಲಕ ಅಂಗಳ ಎಂಬ ಮನೆಯ ಭಾಗದ ಹಲವು ಆಯಾಮಗಳನ್ನು ತೆರೆದಿಟ್ಟಿದ್ದಾರೆ. ಅಂಗಳವೆಂಬುದು ಮನೆಯ ಮುಂದಣ ಭಾಗ. ಹಳ್ಳಿಗಳಲ್ಲಿ ಪ್ರತಿ ಮನೆಗೂ ಮುಂದೆ ಅಂಗಳವಿರುವುದು ಸಾಮಾನ್ಯ. ದೊಡ್ಡ ಮನೆತನಗಳಾದರೆ ಅಂಗಳವೂ ದೊಡ್ಡದು. ಈ ಅಂಗಳವು ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಉಪಯೋಗಕ್ಕೆ ಬರುತ್ತದೆ. ಮಕ್ಕಳಿಂದ ಹಿಡಿದು ವೃದ್ಧರವರೆಗೆ, ಮನೆಯವರಿಂದ ಹಿಡಿದು ಗದ್ದೆಕೆಲಸ ಮಾಡಲು ಬಂದ ಹೆಂಗಸರವರೆಗೆ, ಮದುವೆಯಿಂದ ಹಿಡಿದು ಮರಣದ ಸೂತಕದವರೆಗೆ ಅಂಗಳ ಹಲವು ಪಾತ್ರಗಳನ್ನು ಅಭಿನಯಿಸುತ್ತದೆ. ಅಂಗಳಕ್ಕೆ ಸಂಬಂಧಿಸಿದ ಹಲವು ಸಂಗತಿಗಳನ್ನು ತಿಳಿಸುತ್ತಲೇ ಬರಹವು ಭೂತಕಾಲದಿಂದ ವರ್ತಮಾನಕ್ಕೆ ಬಂದು ನಿಲ್ಲುತ್ತದೆ. ಹಿಂದಿನ ಕಾಲದ ಅಂಗಳದ ವೈಭವವನ್ನು ನೆನೆಯುವ ಲೇಖಕರು ಈಗಿನ ಅಂಗಳದ ಹೊಸ ರೂಪವನ್ನೂ ಯಾವುದೇ ವಿಷಾದವಿಲ್ಲದೆ ಸ್ವೀಕರಿಸುವ ಮೂಲಕ ತಮ್ಮ ಬರಹವನ್ನು ಮುಗಿಸುತ್ತಾರೆ.

**ಲಲಿತ ಪ್ರಬಂಧ ಪ್ರಕಾರ :** ಸಾಹಿತ್ಯದಲ್ಲಿ ಲಲಿತ ಪ್ರಬಂಧವೆಂಬುದು ಒಂದು ಪ್ರಕಾರ. ಯಾವುದಾದರೂ ಒಂದು ವಿಷಯವನ್ನು ಆರಿಸಿಕೊಂಡು ಪ್ರಬಂಧಕಾರ ಅದನ್ನು ಬೆಳೆಸುತ್ತ ಹೋಗುತ್ತಾನೆ. ಒಂದೇ ವಿಷಯದ

ಹಲವು ಮಗ್ಗುಲುಗಳನ್ನು ನೋಡುತ್ತ, ವಿಮರ್ಶಿಸುತ್ತ, ಓದುಗನಿಗೆ ತೋರಿಸುತ್ತ ಮುಂದುವರಿಯುತ್ತಾನೆ. ಲಲಿತ ಪ್ರಬಂಧವು ಗದ್ಯವಾಗಿದ್ದರೂ ಪದ್ಯದ ಕಾವ್ಯಗಂಧೀ ಗುಣವನ್ನು ಪಡೆದಿರುತ್ತದೆ. ಒಂದು ಒಳ್ಳೆಯ ಲಲಿತ ಪ್ರಬಂಧವನ್ನು ಓದಿದಾಗ ಒಳ್ಳೆಯ ಕಾವ್ಯವನ್ನು ಓದಿದ ಅನುಭವವೇ ಆಗುತ್ತದೆ. ಓದುಗನಿಗೆ ಹಿತವಾದ ಅನುಭವವನ್ನು ಕೊಡುವುದು, ಅವನ ಭಾವಕೋಶವನ್ನು ವಿಸ್ತರಿಸುವುದು, ಮನಸ್ಸಿಗೆ ಉಲ್ಲಾಸ ಸಂತೋಷಗಳನ್ನು ಕೊಡುವುದು ಲಲಿತ ಪ್ರಬಂಧದ ಆಶಯ.

## ಅಭ್ಯಾಸ

### I. ಪದಗಳ ಅರ್ಥ ತಿಳಿಯಿರಿ :

**ಆಡುಂಬೊಲ** – ಆಟದ ಬಯಲು
**ದಬ್ಬೆ** – ಬಿದಿರು ಮುಂತಾದವುಗಳ ಸೀಳು
**ಸೋಗೆ** – ಅಡಕೆಯ ಗರಿ
**ಮಡಲು** – ತೆಂಗಿನ ಗರಿ
**ದಣಪೆ** – ಗೇಟ್‌ನಂತೆ ಬಳಕೆಯಾಗುವ ಮರದ ಚೌಕಟ್ಟು
**ನಾಕ** – ಸ್ವರ್ಗ
**ನೇಜಿ** – ಭತ್ತದ ಎಳೆಪೈರು
**ಜಿಹ್ವಾಚಾಪಲ್ಯ** – ನಾಲಗೆಯ ಚಪಲ, ತಿಂಡಿಪೋತತನ
**ಪಾರುಪತ್ಯ** – ಮುಖ್ಯ ಆಡಳಿತ, ಜವಾಬ್ದಾರಿ
**ನವವಧು** – ಹೊಸದಾಗಿ ಮದುವೆಯಾದ ತರುಣಿ
**ಚಾಕಚಕ್ಯತೆ** – ವೇಗ, ಲಗುಬಗೆ
**ಸೊಳೆ** – ಹಳಸಿನ ಹಣ್ಣಿನ ಒಂದು ಎಸಳು

### II. ಪ್ರಶ್ನೆಗಳು :

**ಅ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಲೇಖಕರು ಬಾಲ್ಯದಲ್ಲಿ ಯಾವ್ಯಾವ ಆಟಗಳನ್ನು ಅಂಗಳದಲ್ಲಿ ಆಡುತ್ತಿದ್ದರು?
೨. ಅಜ್ಜಿ ಬೈದಾಗ ಹುಡುಗರು ಖುಷಿಯಾಗುತ್ತಿದ್ದುದು ಯಾಕೆ?
೩. ಮಳೆ ಬರುವಾಗ ಹಳ್ಳಿಯವರು ಏನು ಮಾಡುತ್ತಾರೆ?
೪. ಮಳೆಗಾಲದಲ್ಲಿ ಅಂಗಳದಲ್ಲಿ ಯಾವ ಯಾವ ಗಿಡಗಳು ಮೊಳೆಯುತ್ತವೆ?
೫. ತುಳಸೀಕಟ್ಟೆಯನ್ನು ಅಲಂಕರಿಸುವುದು ಯಾವ ಸಂದರ್ಭಗಳಲ್ಲಿ?
೬. ಜಗದ ನಿಯಮ ಯಾವುದು?

**ಆ) ಈ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಮನೆ ಮತ್ತು ಅಂಗಳಗಳಿಗೆ ಇರುವ ವ್ಯತ್ಯಾಸಗಳೇನು?
೨. ಅಂಗಳದಲ್ಲಿ ಮಕ್ಕಳು ಹೇಗೆ ನಲಿದಾಡುತ್ತಾರೆ?
೩. ಮಳೆಗಾಲ ಶುರುವಾಗುವ ಹೊತ್ತಿನಲ್ಲಿ ಅಂಗಳ ಹೇಗಿರುತ್ತದೆ?
೪. ಮಲೆನಾಡಿನಲ್ಲಿ ನಡೆಯುವ ಮದುವೆಗಳಿಗೂ ಅಂಗಳಕ್ಕೂ ಏನು ಸಂಬಂಧ?
೫. ಅಡಿಕೆ ಸುಲಿಯುವ ಸಮಯದಲ್ಲಿ ಅಂಗಳ ಹೇಗಿರುತ್ತದೆ?

©KTBS not to be republished

**ಇ) ಕೆಳಗಿನ ಪ್ರಶ್ನೆಗಳಿಗೆ ಏಳೆಂಟು ವಾಕ್ಯಗಳಲ್ಲಿ ಉತ್ತರಿಸಿ:**

೧. ಅಂಗಳವೆಂಬುದು ಲೇಖಕರ ಬಾಲ್ಯದ ನೆನಪುಗಳೊಂದಿಗೆ ಹೇಗೆ ಬೆಸೆದುಕೊಂಡಿದೆ?

೨. ಮಳೆಗಾಲದ ಅಂಗಳದ ಚಿತ್ರಣ ಹೇಗಿರುತ್ತದೆ?

೩. ಅಂಗಳವು ಈಗಿನ ದಿನಗಳಲ್ಲಿ ಹೇಗೆ ಬದಲಾಗಿದೆ?

**ಈ) ಬಿಟ್ಟ ಸ್ಥಳ ತುಂಬಿರಿ:**

೧. ಮನೆ ಮೊದಲ ಪಾಠಶಾಲೆ, ಅಂಗಳವೇ ಮೊದಲ ______ .

೨. ಕರಾವಳಿಯಲ್ಲಿ ಮಳೆಗಾಲದಲ್ಲಿ ಅಂಗಳಕ್ಕೆ ಬರುವ ಜನಪದ ನೃತ್ಯ ______ .

೩. ಕೆಸುವಿನೆಲೆಯಲ್ಲಿ ______ ಎಂಬ ತಿನಿಸನ್ನು ಮಾಡುತ್ತಾರೆ.

೪. ಕಣ್ಣಾಮುಚ್ಚಾಲೆಯಿಂದ ತೊಡಗಿ ಕಂಬಾಟದವರೆಗೆ ಅಂಗಳವೇ ಮಕ್ಕಳ ______ .

**ಉ) ಈ ಕೆಳಕಂಡ ವಾಕ್ಯಗಳ ಸ್ವಾರಸ್ಯಗಳನ್ನು ನಾಲ್ಕೈದು ವಾಕ್ಯಗಳಲ್ಲಿ ವಿಸ್ತರಿಸಿ ಬರೆಯಿರಿ:**

೧. ಬಯಲಂಥ ಅಂಗಳಕ್ಕೆ ಎಲ್ಲರೂ ಸಮಾನರೇ

೨. ಬೈದರೆ ನಮಗೆ ಪರಮಾನಂದ

೩. ಮಳೆಗಾಲದಲ್ಲಿ ಅಂಗಳ ಅನಾಥ

೪. ಕಟ್ಟೆಯ ಮೇಲಿನ ದೀಪವು ಅಂಗಳದ ನಕ್ಷತ್ರ

೫. ಅಂಗಳ ಮಾತ್ರವೇ ಹಳೆಯದು ಎನ್ನಿಸುತ್ತದೇನೋ!

೬. ಧೂಳು ಕೆಸರುಗಳು ಅಂಗಳದಾಚೆಗೇ ಉಳಿದಿವೆ

## III. ಭಾಷಾಭ್ಯಾಸ :

©KTBS
Not to be republished

**ಅ) ಈ ಕೆಳಗಿನ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.**

೧. ಮದುವೆಗಳ ಅಂಗಳವೇ ಮಂಟಪಗಳಿಗೆ ಮಲೆನಾಡಿನಲ್ಲಿ ಆಶ್ರಯದಾತ ಬಹಳ.

೨. ಅಂಗಳಕ್ಕೂ ಜಗದ ಅನ್ವಯಿಸುತ್ತದೆ ಎಂಬ ಬದಲಾವಣೆ ನಿಯಮ.

೩. ಹೊಸ್ತಿಲೇ ಮಳೆಗಾಲದಲ್ಲಿ ಆಸರೆ ದೀಪಕ್ಕೆ ತುಳಸಿಯ.

೪. ದ್ವಾದಶಿಯ ಅಂಗಳದ್ದೇ ಪಾರುಪತ್ಯ ಮದುವೆಗೆ ಉತ್ಥಾನ ತುಳಸೀ.

**ಆ) ಈ ಕೆಳಗಿನ ಪದಗಳಲ್ಲಿ ದೀರ್ಘಸ್ವರಗಳಿರುವ ಅಕ್ಷರಗಳನ್ನು ಗುರುತಿಸಿರಿ.**

೧. ನೋಡಿಕೊಳ್ಳಲು ಅಂಗಳವೇ ಜಾಗ.

೨. ಮನೆಯೇ ಮೊದಲ ಪಾಠಶಾಲೆ.

೩. ಮಳೆಗಾಲದ ಮೋಡಗಳು.

೪. ದಾಸವಾಳ ಗಾಳಿಗೆ ಬಗ್ಗಿತು.

೫. ದೀಪಾವಳಿಯ ತುಳಸೀ ಪೂಜೆ.



ಮನೆಯ ಶ್ರೀಮಂತಿಕೆ ಆ ಮನೆಯಲ್ಲಿನ ಪುಸ್ತಕಗಳು.

**ಇ) ಈ ಕೆಳಗಿನ ವಾಕ್ಯಗಳಲ್ಲಿ ಒತ್ತಕ್ಷರಗಳನ್ನು ಗುರುತಿಸಿ.**

೧. ದೀಪಕ್ಕೆ ಹೊಸ್ತಿಲೇ ಆಸರೆ.

೨. ಮದುವೆಗೆ ಅಂಗಳದ್ದೇ ಪಾರುಪತ್ಯ.

೩. ಪುಟ್ಟ ದೀಪವು ಅಂಗಳದ ನಕ್ಷತ್ರ.

೪. ಧುತ್ತೆಂದು ಅಲ್ಲೇ ಮತ್ತೆ ಪ್ರತ್ಯಕ್ಷವಾಯಿತು.

೫. ಪ್ರತಿಫಲಿಸುತ್ತ ಪ್ರಜ್ವಲಿಸುತ್ತಿದೆ.

**ಈ) ಮಾದರಿಯಂತೆ ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆಯಿರಿ.**

**ಮಾದರಿ:** ಕಾಣಬೇಕೆಂದು = ಕಾಣಬೇಕು + ಎಂದು

ಮನೆಯೊಳಕ್ಕಾದರೆ, ಕೈಗಂಟಿಕೊಳ್ಳುವಷ್ಟು, ಪರಮಾನಂದ, ಮಲೆನಾಡಿನಲ್ಲಾದರೆ

**ಉ) ಈ ಕೆಳಗಿನ ವಾಕ್ಯಗಳನ್ನು ವಿವರಿಸಿ ಬರೆಯಿರಿ.**

೧. ಸಾವಿನ ಸೂತಕಕ್ಕೆ ಅಂಗಳವೇ ಆಶ್ರಯ.

೨. ಅಡಕೆಯ ದಬ್ಬೆಯೇ ಶಿವಧನುಸ್ಸು.

೩. ಅಂಗಳವೇ ಮೊದಲ ಮೈದಾನ.

೪. ಮಲೆನಾಡಿನ ಮದುವೆಗಳಿಗೆ ಅಂಗಳವೇ ಆಶ್ರಯದಾತ.

## IV. ಸೈದ್ಧಾಂತಿಕ ವ್ಯಾಕರಣ :

## ದ್ವಿರುಕ್ತಿ – ಜೋಡುನುಡಿ – ನುಡಿಗಟ್ಟು (ಪಡೆನುಡಿ)

ವಾಕ್ಯದಲ್ಲಿ ಪದವನ್ನು ಜೋಡಿಸುವ ಜಾಣ್ಮೆಯೇ ಶೈಲಿ. ಪದಗಳ ಆಯ್ಕೆ ಮತ್ತು ಜೋಡಣೆಯಲ್ಲಿ ಕೌಶಲ ಇದ್ದಾಗ ಶೈಲಿ ಸುಂದರವಾಗುತ್ತದೆ. ಭಾಷೆಯಲ್ಲಿ ಸಹಜ–ಸ್ವಾಭಾವಿಕ ಪದಗಳೊಂದಿಗೆ ವಿಶಿಷ್ಟ ಅರ್ಥಬರುವಂತೆ ಕೆಲವು ಪದಗಳನ್ನು ಜೋಡಿಸಿ ಬಳಸುವುದುಂಟು. ಅಂತಹ ಪದಗಳ ಜೋಡಣೆಯಲ್ಲಿ ದ್ವಿರುಕ್ತಿ, ಜೋಡುನುಡಿ, ನುಡಿಗಟ್ಟು ಅಥವಾ ಪಡೆನುಡಿ ಎಂಬುದಾಗಿ ಹಲವು ವಿಧಗಳಿವೆ.

## ದ್ವಿರುಕ್ತಿ :

ಹೌದುಹೌದು, ಮನೆಮನೆ, ನಿಲ್ಲುನಿಲ್ಲು, ಬನ್ನಿಬನ್ನಿ, ಬೇಡಬೇಡ, ಓಡುಓಡು, –ಹೀಗೆ ಒಂದೇ ಪದ ಮಾತು ಇಲ್ಲವೇ ಬರೆವಣಿಗೆಯಲ್ಲಿ ಎರಡು ಸಾರಿ ಬಳಕೆಯಾದರೆ ಅದನ್ನು 'ದ್ವಿರುಕ್ತಿ' ಎನ್ನುತ್ತಾರೆ.

'ದ್ವಿ' ಎಂದರೆ 'ಎರಡು', 'ಉಕ್ತಿ' ಎಂದರೆ 'ಹೇಳು', 'ದ್ವಿರುಕ್ತಿ' ಎಂದರೆ 'ಎರಡುಬಾರಿ ಹೇಳು' ಎಂದು ಅರ್ಥ. ಸಾಮಾನ್ಯವಾಗಿ ಉತ್ಸಾಹ, ಅವಸರ, ದುಃಖ, ಇತ್ಯಾದಿ ಸಂದರ್ಭಗಳಲ್ಲಿ ಭಾವನೆಗಳ

©KTBS Not to be republished

ತೀವ್ರತೆಯನ್ನು ವ್ಯಕ್ತಪಡಿಸುವಾಗ ದ್ವಿರುಕ್ತಿಗಳು ಬಳಕೆಯಾಗುತ್ತವೆ. ಕೆಲವೊಮ್ಮೆ ದ್ವಿರುಕ್ತಿಯಲ್ಲಿನ ಎರಡು ಪದಗಳು ಕೂಡಿದಾಗ ಮೊದಲ ಪದ ರೂಪಾಂತರಗೊಳ್ಳುವುದುಂಟು.

| | | | |
|---|---|---|---|
| **ಉದಾ :** ಕಡೆ | + | ಕಡೆ | = ಕಟ್ಟಕಡೆ. |
| ಮೊದಲು | + | ಮೊದಲು | = ಮೊತ್ತಮೊದಲು. |
| ಕೆಳಗೆ | + | ಕೆಳಗೆ | = ಕೆಳಕೆಳಗೆ. |
| ಹೊಸದು | + | ಹೊಸದು | = ಹೊಚ್ಚಹೊಸದು. |
| ತುದಿ | + | ತುದಿ | = ತುತ್ತತುದಿ. |
| ಒಂದು | + | ಒಂದು | = ಒಂದೊಂದು. |

## ಜೋಡುನುಡಿ :

ಅರ್ಥವಿರುವ ಪದದೊಂದಿಗೆ ಸಮಾನಾರ್ಥ, ವಿರುದ್ಧಾರ್ಥ ಇಲ್ಲವೇ ಅರ್ಥರಹಿತ ಪದಗಳನ್ನು ಜೋಡಿಸಿ ಬಳಸುವುದುಂಟು. ಇವುಗಳನ್ನೇ 'ಜೋಡುನುಡಿ' ಎಂದು ಕರೆಯಲಾಗುತ್ತದೆ.

**ಉದಾಹರಣೆಗಳು :**

೧. **ಸಮಾನಾರ್ಥಕ ಜೋಡುನುಡಿ :** ಉಡುಗೆತೊಡುಗೆ, ಅವಳಿಜವಳಿ, ಟಾಪ್‌ಮೇಲೆ.

೨. **ವಿರುದ್ಧಾರ್ಥಕ ಜೋಡುನುಡಿ :** ಸಿಹಿಕಹಿ, ನೋವುನಲಿವು, ಆದಿಅಂತ್ಯ.

೩. **ಎರಡನೇ ಪದ ಅರ್ಥ ರಹಿತವಾಗಿರುವ ಜೋಡುನುಡಿ :** ಕೂಲಿನಾಲಿ, ಗಿಡಗಂಟೆ, ಕಾಳುಕಡ್ಡಿ, ಹುಳುಹುಪ್ಪಟೆ.

©KTBS Not to be republished

## ಪಡೆನುಡಿ–ನುಡಿಗಟ್ಟು :

ವಿಶೇಷಾರ್ಥ ನೀಡುವ ಪದ ಪುಂಜವನ್ನು 'ಪಡೆನುಡಿ' ಅಥವಾ 'ನುಡಿಗಟ್ಟು' ಎಂದು ಕರೆಯಲಾಗುತ್ತದೆ. ಇಲ್ಲಿ ಪದಗಳ ಬಾಹ್ಯ ಅರ್ಥಕ್ಕಿಂತ ಸೂಚ್ಯಾರ್ಥ ಇಲ್ಲವೇ ಒಳ ಅರ್ಥ ಪ್ರಧಾನವಾಗಿರುತ್ತದೆ.

**ಉದಾ:** **ಕತ್ತಿಮಸೆ** – ದ್ವೇಷ ಸಾಧಿಸು.
**ಬೆನ್ನುತಟ್ಟು** – ಪ್ರೋತ್ಸಾಹಿಸು.
**ನಾಯಿಜನ್ಮ** – ಹೀನಬಾಳು
**ಕೈಕೊಡು** – ಮೋಸ ಮಾಡು,
**ಹೊಂಚುಹಾಕು** – ಸಮಯ ಸಾಧಿಸು.
**ತಲೆದೂಗು** – ಮೆಚ್ಚುಗೆ ಸೂಚಿಸು

## V. ಚಟುವಟಿಕೆ

೧. ಹಿಂದೆ ಕನ್ನಡ ಬರಹಗಳಲ್ಲಿ ಆಂಗ್ಲ (ಇಂಗ್ಲಿಷ್) ಶಬ್ದಗಳು ಬರಬಾರದು; ಬರಹವನ್ನು ಶುದ್ಧ ಕನ್ನಡದಲ್ಲಿ ಬರೆಯಬೇಕು ಎಂಬ ಭಾವನೆ ಪ್ರಬಲವಾಗಿತ್ತು. ಆದರೆ ಇಂದಿನ ಬಹಳಷ್ಟು ಆಧುನಿಕ ಬರಹಗಳಲ್ಲಿ ಇಂಗ್ಲಿಷ್ ಪದಗಳು ಸಹಜವೆಂಬಂತೆ ಬರುತ್ತವೆ. ಕಾಲಕ್ಕೆ ತಕ್ಕಂತೆ ಭಾಷೆ ಬದಲಾವಣೆಯಾಗುತ್ತದೆ ಎಂಬುದಕ್ಕೆ ಇದೊಂದು ನಿದರ್ಶನ. ಈ ಪಾಠದಲ್ಲಿ ಬಳಸಿರುವ ಆಂಗ್ಲ ಶಬ್ದಗಳನ್ನು ಪಟ್ಟಿ ಮಾಡಿ.

೨. ಪ್ರತಿ ಪ್ರದೇಶಕ್ಕೂ ತನ್ನದೇ ಆದ ವಿಶಿಷ್ಟ ಪದಗಳಿರುತ್ತವೆ. ಆ ಪದಗಳಿಗೆ ಆ ಪ್ರದೇಶದ ಹೊರತಾಗಿ ಹೊರ ಊರುಗಳಲ್ಲಿ ಅಸ್ತಿತ್ವ ಇರುವುದಿಲ್ಲ. ಉದಾಹರಣೆಗೆ ಕರಾವಳಿ ಭಾಗದಲ್ಲಿ ಬಳಸುವ "ಮಾರಿಬಲೆ" ಎಂಬ ಪದ ಬಯಲುಸೀಮೆಯ ಬರಹಗಳಲ್ಲಿ ಕಾಣಿಸುವುದಿಲ್ಲ. ಹಾಗೆಯೇ ನಗರಪ್ರದೇಶದ ಬರಹಗಳಲ್ಲಿ ಸಹಜವಾಗಿ ಬರುವ "ಟ್ರಾಫಿಕ್" ಶಬ್ದ ಗ್ರಾಮ್ಯಜೀವನಕ್ಕೆ ಸಂಬಂಧಿಸಿದ ಬರಹಗಳಲ್ಲಿ ಬರುವುದಿಲ್ಲ. ಮೇಲಿನ ಪ್ರಬಂಧದಲ್ಲಿ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಿಗೇ ಸೀಮಿತವಾದ ಶಬ್ದಗಳು ಯಾವುವು, ಪಟ್ಟಿ ಮಾಡಿ ಬರೆಯಿರಿ.

೩. ನಿಮ್ಮ ಮನೆಯ ಅಥವಾ ಅಜ್ಜಿಮನೆಯ ಅಂಗಳದ ಬಗ್ಗೆ ನಿಮ್ಮದೇ ಆದ ವೈಯಕ್ತಿಕ ಅನುಭವಗಳನ್ನು ಪ್ರಬಂಧವಾಗಿ ಬರೆಯಿರಿ.

೪. ಎ. ಎನ್. ಮೂರ್ತಿರಾವ್, ವಿಜಯಾ ಶ್ರೀಧರ್, ವಸುಧೇಂದ್ರ ಮುಂತಾದವರ ಲಲಿತ ಪ್ರಬಂಧಗಳನ್ನು ಓದಿರಿ.

©KTBS Not to be republished

# ೯. ಅನ್ವೇಷಣೆ

Y5M2Y4

**ಪಾಠ ಪ್ರವೇಶ :** ನಮ್ಮ ಬದುಕು ಸುಂದರವಾದುದು. ಸಂತೋಷವಾದುದು. ನಾವ್ಯಾರೂ ಇದನ್ನು ಗಮನಿಸುವುದೇ ಇಲ್ಲ. ಸುಖ ಸಂತೋಷಕ್ಕಾಗಿ, ಕಷ್ಟ ಪರಿಹಾರಕ್ಕಾಗಿ ಯಾರನ್ನೋ ಕೇಳುತ್ತೇವೆ. ದೇವರನ್ನು ಬೇಡುತ್ತೇವೆ. ಏನನ್ನೋ ಕೊಟ್ಟು ಅಥವಾ ಬಲಿ ನೀಡಿ ಸುಖಕ್ಕಾಗಿ ಹುಡುಕಾಡುತ್ತೇವೆ. ಸುಖದ ಮೂಲ ಎಲ್ಲಿದೆ ಎಂಬುದನ್ನು ಚರ್ಚಿಸಿರಿ. ಬೆಲ್ಲದ ರುಚಿ ಹೇಗಿದೆ ? ಎಂದರೆ ಸಿಹಿ ಇದೆ. ಎನ್ನುತ್ತೀರಿ. ಅದು ಹೇಗೆ ಗೊತ್ತಾಯಿತು? ಎಂಬ ಪ್ರಶ್ನೆಗೆ ನಾನೇ ತಿಂದು, ರುಚಿ ಅನುಭವಿಸಿದೆ ಎಂದು ಹೇಳುವಿರಿ. ನಾನೇ ಬೆಲ್ಲ ತಿಂದಂತೆ. ರುಚಿ ಅನುಭವಿಸಿದಂತೆ. ನಮ್ಮ ಕಷ್ಟ ಸುಖಗಳಿಗೆ ನಾವೇ ಜವಾಬ್ದಾರರು. ಅದರ ಮೂಲ ನಮ್ಮಲ್ಲಿದೆ. ಇದನ್ನು ನಾವೇ ಸರಿಮಾಡಿಕೊಳ್ಳಬೇಕು.

ನಮಗೆಲ್ಲ ಅತಿ ಅಭಿಮಾನವಿದೆ, ಗರ್ವ ಇದೆ. ನಾನು ಹೇಳಿದ್ದು ಸರಿಯಿದೆ. ನಾನು ಮಾಡಿದ್ದು ಅತ್ಯುತ್ತಮ ಎಂಬ ಕಲ್ಪನೆ ಇದೆ. ಹೀಗಾಗಿ ಇನ್ನೊಬ್ಬರೊಡನೆ ಹಂಚಿಕೊಂಡು, ಹೊಂದಿಕೊಂಡು, ಬದುಕದೇ ಕಷ್ಟಪಡುತ್ತೇವೆ. ದುಃಖ ಅನುಭವಿಸುತ್ತೇವೆ. ಆದುದರಿಂದ ಹೊಂದಿಕೊಂಡು ಹೋಗಬೇಕೆನ್ನುವುದೇ ಕವಿಯ ಆಶಯವಾಗಿದೆ.

©KTBS Not to be republished



ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ
ಗುರುತಿಸದಾದೆವು ನಮ್ಮೊಳಗೆ ॥



ಎಲ್ಲಿದೆ ನಂದನ? ಎಲ್ಲಿದೆ ಬಂಧನ?
ಎಲ್ಲಾ ಇವೆ ಈ ನಮ್ಮೊಳಗೆ
ಒಳಗಿನ ತಿಳಿಯನು ಕಲಕದೆ ಇದ್ದರೆ
ಅಮೃತದ ಸವಿಯಿದೆ ನಾಲಗೆಗೆ ॥




ಹತ್ತಿರವಿದ್ದೂ, ದೂರ ನಿಲ್ಲುವೆವು
ನಮ್ಮ ಅಹಮ್ಮಿನ ಕೋಟೆಯಲಿ
ಎಷ್ಟು ಕಷ್ಟವೋ ಹೊಂದಿಕೆ ಎಂಬುದು
ನಾಲ್ಕು ದಿನದ ಈ ಬದುಕಿನಲಿ ॥

– ಜಿ.ಎಸ್. ಶಿವರುದ್ರಪ್ಪ



ಆಳಾಗಬಲ್ಲವನು ಆಳುವನು ಅರಸಾಗಿ.

## ಕೃತಿಕಾರರ ಪರಿಚಯ :



**ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ** ಅವರು **೧೯೨೬** ರಲ್ಲಿ **ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ** ಈಸೂರು ಎಂಬ ಗ್ರಾಮದಲ್ಲಿ ಜನಿಸಿದರು. ಮೈಸೂರು, ಉಸ್ಮಾನಿಯಾ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

ಇವರು ಕವಿಯಾಗಿ, ವಿಮರ್ಶಕರಾಗಿ ಪ್ರಸಿದ್ಧರಾಗಿದ್ದಾರೆ. **'ಸೌಂದರ್ಯ ಸಮೀಕ್ಷೆ', 'ದೀಪದ ಹೆಜ್ಜೆ', 'ಸಾಮಗಾನ', 'ಕಾರ್ತೀಕ', 'ಅನಾವರಣ', 'ಚೆಲುವು–ಒಲವು', 'ಗೋಡೆ', 'ತೆರೆದದಾರಿ', 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನಗಳು', 'ಕಾವ್ಯಾರ್ಥ ಚಿಂತನ'** ಇನ್ನು ಮುಂತಾದವು ಇವರ ಪ್ರಮುಖ ಕೃತಿಗಳು.

**'ಕಾವ್ಯಾರ್ಥ ಚಿಂತನ'** ಕೃತಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ** ಪ್ರಶಸ್ತಿ ಲಭಿಸಿದೆ. ಜೊತೆಗೆ ಪಂಪ ಪ್ರಶಸ್ತಿ, ನೃಪತುಂಗ ಪ್ರಶಸ್ತಿ ಹಾಗೂ ರಾಷ್ಟ್ರಕವಿ ಬಿರುದನ್ನೂ ಪಡೆದಿದ್ದಾರೆ. ಇವರು ೧೯೯೨ ರಲ್ಲಿ ದಾವಣಗೆರೆಯಲ್ಲಿ ನಡೆದ ೬೧ ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಇವರು ೨೦೧೩ ರಲ್ಲಿ ನಿಧನರಾದರು. ಪ್ರಸ್ತುತ 'ಅನ್ವೇಷಣೆ' ಕವಿತೆಯನ್ನು ಅವರ **'ಗೋಡೆ'** ಕವನ ಸಂಕಲನದಿಂದ ಆಯ್ಕೆಮಾಡಲಾಗಿದೆ.

## ಅಭ್ಯಾಸ

### I. ಪದಗಳ ಅರ್ಥ ತಿಳಿಯಿರಿ :

**ಅನ್ವೇಷಣೆ** – ಹುಡುಕು; ಶೋಧಿಸು.
**ಕಲಕು** – ಕದಡು
**ಗುರುತಿಸು** – ಗೊತ್ತು ಹಚ್ಚು
**ಬಂಧನ** – ಸೆರೆ; ಕಟ್ಟು.
**ಅಹಂ** – ಗರ್ವ; ಪ್ರತಿಷ್ಠೆ.
**ಕೋಟೆ** – ಕಲ್ಲಿನ ರಕ್ಷಣಾ ಗೋಡೆ.
**ನಂದನ** – ಉದ್ಯಾನವನ
**ಹೆಮ್ಮೆ** – ಅಭಿಮಾನ; ಹಿರಿಮೆ; ಸಂತೋಷ.

©KTBS Not to be republished

### II. ಪ್ರಶ್ನೆಗಳು :

**ಅ) ಕೆಳಗೆ ನೀಡಿರುವ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ.**

೧. ಎಲ್ಲೋ ಹುಡುಕಿದೆ ಇಲ್ಲದ ದೇವರ ____________ ಗುಡಿಯೊಳಗೆ
೨. ಒಳಗಿನ ತಿಳಿಯನು ಕಲಕದೆ ಇದ್ದರೆ ____________ ನಾಲಗೆಗೆ
೩. ಹತ್ತಿರವಿದ್ದೂ ____________ ನಿಲ್ಲುವೆವು
೪. ಎಷ್ಟು ಕಷ್ಟವೋ ____________ ಎಂಬುದು ನಾಲ್ಕು ದಿನದ ಈ ಬದುಕಿನಲಿ.

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಕವಿ ಜಿ.ಎಸ್. ಶಿವರುದ್ರಪ್ಪನವರು ಮೊದಲು ದೇವರನ್ನು ಎಲ್ಲಿ ಹುಡುಕಿ ವಿಫಲರಾದರು?

೨. ಕವಿ ಜಿ.ಎಸ್.ಎಸ್. ಅವರು ನಿಜವಾದ ದೇವರನ್ನು ಕಂಡದ್ದು ಎಲ್ಲಿ? ಯಾವ ರೂಪದಲ್ಲಿ?

೩. ನಂದನ ಮತ್ತು ಬಂಧನ ಎಂದರೇನು? ಅವು ಎಲ್ಲಿವೆ?

೪. ಅಮೃತದ ಸವಿ ನಾಲಗೆಗೆ ಯಾವಾಗ ಸಿಗುತ್ತದೆ?

೫. ಮಾನವನಲ್ಲಿ ಅಹಂ ತುಂಬಿದಾಗ ಹೇಗೆ ವರ್ತಿಸುತ್ತಾನೆ?

೬. ನಾಲ್ಕು ದಿನದ ಬದುಕಿನಲ್ಲಿ ಯಾವುದು ಕಷ್ಟವಾಗಿದೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕವಿ ಜಿ.ಎಸ್.ಎಸ್. ಅವರು ದೇವರನ್ನು ಅನ್ವೇಷಿಸಿದ ಬಗೆ ಹೇಗೆ?

೨. ಕವಿ ಹೇಳುವಂತೆ ಬದುಕಿನಲ್ಲಿ ಯಾವುದು ಕಷ್ಟ? ಅದನ್ನು ಪಡೆಯುವುದು ಹೇಗೆ?

**ಈ) ಸಂದರ್ಭದೊಡನೆ ವಿವರಿಸಿರಿ.**

೧. ಪ್ರೀತಿ ಸ್ನೇಹಗಳ ಗುರುತಿಸದಾದೆವು ನಮ್ಮೊಳಗೆ

೨. ಅಮೃತದ ಸವಿಯಿದೆ ನಾಲಗೆಗೆ

೩. ಹತ್ತಿರವಿದ್ದೂ ದೂರ ನಿಲ್ಲುವೆವು

©KTBS Not to be republished

**ಉ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಯ ಉತ್ತರಗಳಿಂದ ಸರಿಯಾದುದನ್ನು ಆಯ್ದು ಬರೆಯಿರಿ.**

೧. ಕವಿ ಜಿ.ಎಸ್.ಎಸ್. ಅವರು ದೇವರನ್ನು ________________ ರೂಪದಲ್ಲಿ ಕಂಡರು.

ಅ) ಗುಡಿ ಆ) ಕಲ್ಲು ಮಣ್ಣು ಇ) ಪ್ರೀತಿ ಸ್ನೇಹ ಈ) ಕೋಟೆ

೨. ಬದುಕಿನಲ್ಲಿ ______________ ಎಂಬುದು ಕಷ್ಟ ಎಂದು ಕವಿ ಹೇಳುತ್ತಾರೆ.

ಅ) ಹೊಂದಾಣಿಕೆ ಆ) ಅಹಂ ಇ) ಹಿರಿಮೆ ಈ) ಮೋಹ

೩. ನಮ್ಮೊಳಗಿನ ತಿಳಿಯನು ಕಲಕದೆ ಇದ್ದರೆ ನಾಲಗೆಗೆ ___________ ಇದೆ.

ಅ) ಹುಳಿ ಆ) ವಿಷ ಇ) ಒಗರು ಈ) ಅಮೃತ

೪. ಅಹಂ ಇರುವ ವ್ಯಕ್ತಿ ಜನರಿಗೆ _____________ ಆಗುತ್ತಾನೆ.

ಅ) ಉಪಕಾರಿ ಆ) ಹತ್ತಿರ ಇ) ದೂರ ಈ) ಒಳ್ಳೆಯವನು

# III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.**

ಗುಡಿ, ಹತ್ತಿರ, ಬಂಧನ, ಸ್ನೇಹ.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.**

ಪ್ರೀತಿ, ದೂರ, ಅಮೃತ, ಸಿಹಿ, ಕಷ್ಟ, ಬಂಧನ.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ದೇವರು, ಪ್ರೀತಿಸ್ನೇಹ, ಬಂಧನ, ಅಮೃತ, ಹೊಂದಿಕೆ, ಅಹಂ.

**ಈ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಹತ್ತಿರವಿದ್ದು, ಗುಡಿಯೊಳಗೆ, ಸವಿಯಿದೆ, ನಮ್ಮೊಳಗೆ

**ಉ) ಸುಳಿವು ಪದಗಳನ್ನು ಬಳಸಿ ಜೋಡಿ ಪದಗಳನ್ನು ಬರೆಯಿರಿ.**

**ಉದಾ :** ಕಲ್ಲು – ಮಣ್ಣು, ಪ್ರೀತಿ – ಸ್ನೇಹ

| | |
|---|---|
| ಹೊಲ – | ಹೂವು – |
| ಗಿಡ – | ಕಳ್ಳ – |
| ಗುಡ್ಡ – | ಮಳೆ – |
| ಎಡ – | ರೀತಿ – |

©KTBS Not to be republished

(**ಸುಳಿವು :** ಮರ, ಹಣ್ಣು, ನೀತಿ, ಬೆಟ್ಟ, ಗದ್ದೆ, ಬೆಳೆ, ಸುಳ್ಳ, ಬಲ)

# IV. ಚಟುವಟಿಕೆಗಳು :

೧. 'ಅನ್ವೇಷಣೆ' ಪದ್ಯವನ್ನು ಕಂಠಪಾಠ ಮಾಡಿರಿ.

೨. ಮಾನವ ಸಂಬಂಧಗಳಲ್ಲಿ ಹಾಗೂ ಪ್ರಕೃತಿಯಲ್ಲಿ ದೇವರನ್ನು ಅನ್ವೇಷಿಸಿದ ಇತರ ಕವಿಗಳ ಕವಿತೆಗಳನ್ನು ಸಂಗ್ರಹಿಸಿ ಓದಿರಿ.



ಮರ ತಾನು ಬಿಸಿಲಲ್ಲಿ ನಿಂತರೂ ಅನ್ಯರಿಗೆ ನೆರಳನ್ನೇ ನೀಡುತ್ತದೆ.

M3T2A8

# ೧೦. ಹಾರಿದ ಹಕ್ಕಿಗಳು

**ಪಾಠ ಪ್ರವೇಶ :** ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಬಂಡಾಯ ಸಾಹಿತ್ಯವೂ ಒಂದು. ಇದು ವ್ಯವಸ್ಥೆಯ ಕಟು ಸತ್ಯಗಳನ್ನು ಪರೋಕ್ಷವಾಗಿ ಟೀಕಿಸುವ ಮೂಲಕ ಜನಜಾಗೃತಿ ಮೂಡಿಸಿದ ಸಾಹಿತ್ಯ ಪ್ರಕಾರವಾಗಿದೆ. ಸಮೃದ್ಧ ನಾಡಿನಲ್ಲಿ ಸುಖ ಸಂತೋಷದಿಂದ ಸ್ವಚ್ಛಂದವಾಗಿ ದುಡಿಯುವವರಿಗೆ ತೊಂದರೆಗಳಾದರೆ ಅವರು ಸುಖದ ನೆಲೆಯನ್ನು ಹುಡುಕಿ ಬೇರೆಡೆ ಹೋಗುತ್ತಾರೆ. ಇದರಿಂದ ನಾಡು ಬಡವಾಗುತ್ತದೆ. ಮತ್ತೆ ಅಂತಹ ಸಮೃದ್ಧ ನಾಡನ್ನು ಕಟ್ಟಲು ಸಾಧ್ಯವಿಲ್ಲ. ಆಗ ಜನರು ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುತ್ತಾರೆ. ಆದ್ದರಿಂದ ವ್ಯವಸ್ಥೆಗಳು, ಸಂಪನ್ಮೂಲಗಳು ಸರ್ವರ ಹಿತವನ್ನು ಕಾಪಾಡುವಂತಿರಬೇಕು ಎಂಬುದನ್ನು ಕವಿ ಉದ್ಯಾನ, ಹಕ್ಕಿಗಳು, ಚಿಟಬಿಲ್ಲು ರೂಪಕಗಳನ್ನು ಬಳಸಿಕೊಂಡು ಸೊಗಸಾಗಿ, ಸರಳವಾಗಿ ನಿರೂಪಿಸಿದ್ದಾರೆ.

©KTBS
Not to be republished

ಇಲ್ಲಿ ಉದ್ಯಾನದ ತುಂಬ
ಗಿಡಗಳಿದ್ದವು
ಗಿಡಗಳ ತುಂಬ ಹೂವು ಅಲೆದು
ಕುಲುಕುತ್ತಿದ್ದವು
ಬಣ್ಣ ಬಣ್ಣದ ಹೂಗಳ ಮೇಲೆ
ಬಣ್ಣ ಬಣ್ಣದ ಹಕ್ಕಿ
ಉಲಿಯುತ್ತಿದ್ದವು.

ನೀವೇನು ಮಾಡಿದಿರ?
ಚಿಟಬಿಲ್ಲು ತೆಗೆದು
ಗುರಿಯಿಟ್ಟು ಹೊಡೆದು ಮಾಂಸ ತಪಸ್ಸಿಗೆ ಕುಳಿತಿರಿ
ಅವು ಹಾರಿ ಹೋದವು ಬೇರೆ ಕಡೆ
ಹೂವು-ಹಣ್ಣು ಹುಡುಕಿ





ಎಷ್ಟೇ ಕಲ್ಲುಗಳನ್ನು ಬೀರಿದರೂ ಮರ ಫಲ ಕೊಡುತ್ತಲೇ ಇರುತ್ತದೆ.

ಈಗ ನೀವೆನ್ನುವಿರಿ
ತಿರುಗಿ ಬನ್ನಿರಿ ಮಾತೃಸ್ಥಾನಕ್ಕೆ
ಈಗ ಏಕೆ ಬರುತ್ತವೆ ಅವು?
ಸಮಯ ಬಂದರೆ ತಿರುಗಿ
ಬೀಳುತ್ತವೆ ಅಷ್ಟೆ.

**– ಆರ್.ವಿ. ಭಂಡಾರಿ**

* * * *

## ಕೃತಿಕಾರರ ಪರಿಚಯ :



**ರೋಹಿದಾಸ ವಿಠ್ಠಲ ಭಂಡಾರಿ** ಅವರ ಊರು **ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕೆರೆಕೋಣ.** ಜನಿಸಿದ್ದು ೧೯೩೭ ರಲ್ಲಿ. ಸಾಹಿತ್ಯದ ವಿವಿಧ ಚಟುವಟಿಕೆಗಳಲ್ಲಿ ತಮ್ಮನ್ನು ಹೆಚ್ಚು ತೊಡಗಿಸಿಕೊಂಡಿದ್ದವರು. ಇವರ ಪ್ರಮುಖ ಕೃತಿಗಳೆಂದರೆ **'ಕಣ್ಣೇಕಟ್ಟೆ ಕಾಡೇಗೂಡೆ', 'ಕೊಲೆಗಾರ' 'ಪತ್ತೆಯಾಗಲಿಲ್ಲ', 'ಹದ್ದುಗಳು'** – ಇವು ಕವನಸಂಕಲನಗಳು. **'ಬೆಂಕಿಯ ಮಧ್ಯೆ', 'ಬಿರುಗಾಳಿ', 'ನೆರೆಹಾವಳಿ ಮತ್ತು ಗೋಡೆಗಳು', 'ತಲೆಮಾರು' – ಇವು ಕಾದಂಬರಿಗಳು. 'ಮೀನ್ ಪಳ್ದಿ'** – ಇದು ಕಥಾ ಸಂಕಲನ. ಮಕ್ಕಳ ಸಾಹಿತ್ಯದಲ್ಲೂ ಕೃಷಿ ಮಾಡಿದ್ದಾರೆ.

ಇವರಿಗೆ **'ವಾಜಂತ್ರಿ ಶಿಕ್ಷಕ ಪ್ರಶಸ್ತಿ', 'ಜಿಲ್ಲೆ ಹಾಗೂ ರಾಜ್ಯ ಶಿಕ್ಷಕ ಪ್ರಶಸ್ತಿಗಳು'** ಕನ್ನಡ ಸಾಹಿತ್ಯ ಪರಿಷತ್ತಿನ **'ಸಿಸು ಸಂಗಮೇಶ ದತ್ತಿ ಪ್ರಶಸ್ತಿ', 'ಯಶವಂತನ ಯಶೋಗೀತ'** ಮಕ್ಕಳ ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದವು ದೊರೆತಿವೆ. ಪ್ರಸ್ತುತ 'ಹಾರಿದ ಹಕ್ಕಿಗಳು' ಕವನವನ್ನು ಅವರ **'ಹದ್ದುಗಳು'** ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

©KTBS
Not to be republished

# ಅಭ್ಯಾಸ

## I. ಪದಗಳ ಅರ್ಥ ತಿಳಿಯಿರಿ :

**ಅಲೆದು** – ತೂಗಿ; ಬಳುಕಿ.
**ಉಲಿ** – ಮಾತು; ಧ್ವನಿ.
**ಕುಲುಕು** – ಅಲುಗಾಡು; ಒಯ್ಯಾರ.
**ಚಿಟಬಿಲ್ಲು** – ಹಕ್ಕಿಗೆ ಗುರಿಯಿಟ್ಟು ಕಲ್ಲು ಬೀರುವ ಸಾಧನ.
**ಮಾತೃಸ್ಥಾನ** – ಮೂಲ ನೆಲೆ



ಕಬ್ಬಿಣವು ತುಕ್ಕಿನಿಂದ ನಾಶವಾಗುವಂತೆ ಮಾನವನು ಅಸೂಯೆಯಿಂದ ಹಾಳಾಗುತ್ತಾನೆ – ಟಿ.ಎಸ್.ಫಯಾಸ್.

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಉದ್ಯಾನದ ಗಿಡಗಳು ಹೇಗೆ ಬೆಳೆದುನಿಂತಿದ್ದವು?

೨. ಬಣ್ಣ ಬಣ್ಣದ ಹಕ್ಕಿಗಳು ಏಕೆ ಉಲಿಯುತ್ತಿದ್ದವು?

೩. ಬಣ್ಣ ಬಣ್ಣದ ಹಕ್ಕಿಗಳಿಗೆ ಚಿಟಬಿಲ್ಲು ಹೊಡೆದದ್ದು ಏಕೆ?

೪. ಬಣ್ಣ ಬಣ್ಣದ ಹಕ್ಕಿಗಳು ಉದ್ಯಾನದಿಂದ ಹಾರಿ ಹೋದದ್ದು ಎಲ್ಲಿಗೆ? ಏಕೆ?

೫. ಹಾರಿ ಹೋದ ಹಕ್ಕಿಗಳು ಸಮಯ ಬಂದರೆ ಏನು ಮಾಡಬಹುದು?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕವಿ ಆರ್.ವಿ. ಭಂಡಾರಿಯವರು 'ಹಾರಿದ ಹಕ್ಕಿಗಳು' ಕವಿತೆಯ ಮೂಲಕ ಯಾವ ಸಂದೇಶ ನೀಡಿದ್ದಾರೆ?

೨. ಉದ್ಯಾನದ ಹಕ್ಕಿಗಳು ತೊಂದರೆಗೆ ಒಳಗಾದದ್ದು ಏಕೆ? ಅದರ ಪರಿಣಾಮವೇನಾಯಿತು?

**ಇ) ಸಂದರ್ಭದೊಡನೆ ವಿವರಿಸಿರಿ.**

೧. ಬಣ್ಣ ಬಣ್ಣದ ಹಕ್ಕಿಗಳು ಉಲಿಯುತ್ತಿದ್ದವು.

೨. ಗುರಿಯಿಟ್ಟು ಹೊಡೆದು ಮಾಂಸ ತಪಸ್ಸಿಗೆ ಕುಳಿತಿರಿ.

೩. ಸಮಯ ಬಂದರೆ ತಿರುಗಿಬೀಳುತ್ತವೆ.

©KTBS Not to be republished

## III. ಭಾಷಾಭ್ಯಾಸ :

**ಅ) ಈ ಕೆಳಗಿನ ಪದಗಳಿಗೆ ತತ್ಸಮ-ತದ್ಭವ ರೂಪಗಳನ್ನು ಬರೆಯಿರಿ.**

ಸ್ಥಾನ, ಬಣ್ಣ, ಹಕ್ಕಿ, ತಪಸ್ಸು.

**ಆ) ಕೆಳಗಿನ ಪದಗಳ ಅರ್ಥ ವ್ಯತ್ಯಾಸ ತಿಳಿಯಿರಿ.**

| | | |
|---|---|---|
| ೧. ಗಿಡ – ಗಿಡಗ | ೨. ಅಲೆ – ಆಲೆ | ೩. ಹಕ್ಕಿ – ಅಕ್ಕಿ |
| ೪. ಉಲಿ – ಹುಲಿ | ೫. ಹುಡುಕಿ – ಹುಡುಗಿ | ೬. ಹೂವು – ಹಾವು |

**ಇ) ಕೆಳಗಿನ ಪದಗಳ ಕಾಗುಣಿತ ದೋಷಗಳನ್ನು ಸರಿಪಡಿಸಿ ಬರೆಯಿರಿ.**

ಉದ್ದಾನ, ಗುರಿಹಿಟ್ಟು, ಅಕ್ಕಿ ಹುಲಿಯುತ್ತಿದ್ದವು, ಹಾವು-ಅಣ್ಣು.



ನೀನು ಬದಲಾದರೆ ನಿನ್ನ ಅದೃಷ್ಟವೂ ಬದಲಾಗುತ್ತದೆ.

# ೧೧. ಜ್ಯೋತಿಯೇ ಆಗು ಜಗಕೆಲ್ಲ

Q2Y9G7

**ಪಾಠ ಪ್ರವೇಶ :** ಜನಪದ ಸಾಹಿತ್ಯದಲ್ಲಿ ಗೀತೆಯೊಂದು ಪ್ರಮುಖ ಪ್ರಕಾರವಾಗಿದ್ದು, ನೂರಾರು ವರ್ಷಗಳಿಂದ ಮೌಖಿಕವಾಗಿ ಉಳಿದುಕೊಂಡು ಬಂದಿರುವ ಸಾಹಿತ್ಯವಾಗಿದೆ. ಅದು ಹಳ್ಳಿಯ ಬದುಕಿನೊಂದಿಗೆ ಮಿಳಿತವಾಗಿದೆ. ಬಹುತೇಕ ಜನಪದ ಗೀತೆಗಳು ಕ್ರಿಯೆಯ ಪ್ರೇರಣೆಯಿಂದ ಜನ್ಮ ತಾಳಿವೆ. ಜನಪದರ ನಿತ್ಯದ ಕೆಲಸಗಳಾದ ಕುಟ್ಟುವುದು, ಬೀಸುವುದು, ಕೇರುವುದು, ಕಡೆಯುವುದು, ತೂಗುವುದು, ಬಿತ್ತುವುದು, ತೂರುವುದು, ಕಳೆ ಕೀಳುವುದು, ಗಾಡಿ ಹೊಡೆಯುವುದು ಮುಂತಾದ ಸಂದರ್ಭಗಳಲ್ಲಿ ಹಾಡುಗಳು ಸಹಜವಾಗಿ ಹೊರಹೊಮ್ಮುತ್ತವೆ. ಜೊತೆಗೆ ಹಬ್ಬ, ಹರಿದಿನ, ಮದುವೆ, ಗೃಹಪ್ರವೇಶ ಮುಂತಾದ ಶುಭಕಾರ್ಯಗಳು ಹಾಡಿನಿಂದಲೇ ಆರಂಭಗೊಂಡು, ಹಾಡಿನಿಂದಲೇ ಮುಕ್ತಾಯಗೊಳ್ಳುತ್ತವೆ. ಈ ಜನಪದ ಗೀತೆಗಳು ಜೀವನ ಮೌಲ್ಯಗಳನ್ನು ಒಳಗೊಂಡಿದ್ದು ಬದುಕನ್ನು ಸುಂದರವಾಗಿ ರೂಪಿಸಿಕೊಳ್ಳಲು ಮಾರ್ಗದರ್ಶಿಯಾಗಿವೆ.



©KTBS Not to be republished

ಆಚಾರಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು । ನನಕಂದ
ಜ್ಯೋತಿಯೇ ಆಗು ಜಗಕೆಲ್ಲ ॥ ೧ ॥



ಒಳ್ಳೆಯ ನಾಯಕರು ಒಳ್ಳೆಯ ಹಿಂಬಾಲಕರನ್ನು ಸೃಷ್ಟಿಸುತ್ತಾರೆ.

ಸಂಸಾರವೆಂಬುದು ಸಾಗರ ಹೊಳೆಯಪ್ಪ
ಈಸಬಲ್ಲವನಿಗೆ ಎದೆಯುದ್ದ । ನನಕಂದ
ಓದುಬಲ್ಲವನಿಗೆ ಕೈಲಾಸ ॥ ೨ ॥

ಬಂಗಾರದ ಬಳೆತೊಟ್ಟು ಬೈಬ್ಯಾಡ ಬಡವರ
ಬಂಗಾರ ನಿನಗೆ ಸ್ಥಿರವಲ್ಲ । ಮದ್ದಿನದ
ಹೊತ್ತು ಹೊರಳೋದು ತಡವಲ್ಲ ॥ ೩ ॥

ಕೊಟ್ಟು ಕುದಿಯಲುಬೇಡ ಇಟ್ಟು ಹಂಗಿಸಬೇಡ
ಎಷ್ಟುಂಡರೆಂದು ಅನಬೇಡ । ಇವು ಮೂರು
ಮುಟ್ಟುವುದು ಶಿವನ ಬಳಿಯಲ್ಲಿ ॥ ೪ ॥

ಅಕ್ಕ ಇದ್ದರೆ ಭಾವ ರೊಕ್ಕ ಇದ್ದರೆ ಸಂತೆ
ಮಕ್ಕಳಿದ್ದರೆ ಮನಿಮಾರು । ಹಡೆದವ್ವ
ನೀ ಇದ್ದರೆ ನಮಗ ಸಾಂರಾಜ್ಯ ॥ ೫ ॥

ಉಂಡಾಗ ಉಡುವಾಗ ಜನವೆಲ್ಲ ನೆಂಟರು
ಅಡವಿಯ ಸೊಪ್ಪು ತಲೆಯಲ್ಲಿ । ತಪ್ಪಾಗ
ಒಡಹುಟ್ಟಿದಣ್ಣ ಮುಖನೋಡ ॥ ೬ ॥

– **ಜನಪದಗೀತೆ**

* * * *

©KTBS Not to be republished

## ಕೃತಿಕಾರರ ಪರಿಚಯ :

ನಿರಕ್ಷರಸ್ಥರಾದ ಗ್ರಾಮೀಣ ಜನರು ತಮ್ಮ ಜೀವನಾನುಭವಗಳನ್ನು ಸಹಜವಾಗಿಯೇ ಅಭಿವ್ಯಕ್ತಿಸುವ ಜನಪದ ಸಾಹಿತ್ಯ ಕಂಠಸ್ಥ ಸಂಪ್ರದಾಯದಲ್ಲಿ ಬೆಳೆದುಬಂದಿದೆ. ಶುದ್ಧ ದೇಸೀಯ ಸೊಗಡನ್ನು ಹೊಂದಿರುವ ಜನಪದ ಗೀತೆಗಳು ಸತ್ವಯುತವಾಗಿದ್ದು ವಿವೇಕವನ್ನು ಹೇಳುವ ನೀತಿ ವಾಕ್ಯಗಳಾಗಿವೆ.

ಪ್ರಸ್ತುತ ಜನಪದ ಗೀತೆಯಲ್ಲಿ ತಾಯಿ ತನ್ನ ಮಗುವಿಗೆ ಹೇಳುವ ವಿವೇಕ, ವಿದ್ಯಾಭ್ಯಾಸದ ಮಹತ್ವ, ಶ್ರೀಮಂತಿಕೆಯ ಅಸ್ಥಿರತೆ, ನಮ್ಮ ನಡವಳಿಕೆಗಳ ಮೇಲಿನ ನಂಬಿಕೆ, ತಾಯಿಯ ಮೇಲಿನ ಪ್ರೀತಿ, ಸಂಬಂಧಗಳ ನಿಜಸ್ವರೂಪ ಸರಳ ಸುಂದರವಾಗಿ ಅಭಿವ್ಯಕ್ತಗೊಂಡಿವೆ.

ಪ್ರಕೃತ ತ್ರಿಪದಿಗಳನ್ನು ದೇ. ಜವರೇಗೌಡ ಸಂಪಾದಿಸಿರುವ **'ಜನಪದ ಗೀತಾಂಜಲಿ'** ಹಾಗೂ ಹಲಸಂಗಿ ಗೆಳೆಯರು ಸಂಪಾದಿಸಿರುವ **'ಗರತಿಯ ಹಾಡು'** ಸಂಕಲನಗಳಿಂದ ಆಯ್ಕೆಮಾಡಿಕೊಳ್ಳಲಾಗಿದೆ.



ಎಲ್ಲರಿಗೂ ಸೇರಿದ ವಸ್ತುವನ್ನು ಯಾವಾಗಲೂ ಚೆನ್ನಾಗಿ ಇಡಬೇಕು.

# ಅಭ್ಯಾಸ

## I. ಪದಗಳ ಅರ್ಥ ತಿಳಿಯಿರಿ :

**ಅಡವಿ** – ಕಾಡು; ಅರಣ್ಯ.
**ಆಚಾರ** – ಒಳ್ಳೆಯ ನಡತೆ; ಸಂಪ್ರದಾಯ.
**ಕುದಿ** (ಕ್ರಿ) – ಸಂಕಟಪಡು; ಕೋಪದಿಂದ ಕೆರಳು.
**ಚೂಡಾಮಣಿ** – ರತ್ನದ ಆಭರಣ; ಶ್ರೇಷ್ಠವಾದುದು.
**ಪ್ರಭು** – ರಾಜ; ಯಜಮಾನ; ಒಡೆಯ.
**ಭಾವ** – ಸಹೋದರಿಯ ಗಂಡ
**ರೊಕ್ಕ** – ಹಣ; ರೂಪಾಯಿ.
**ಸಂಸಾರ** – ಕುಟುಂಬ; ಲೌಕಿಕ ಜೀವನ.
**ಸಾಗರ** – ಸಮುದ್ರ; ಕಡಲು.
**ಹಡೆದವ್ವ** – ಜನ್ಮ ನೀಡಿದ ತಾಯಿ.
**ಹೊರಳು** (ಕ್ರಿ) – ಉರುಳು; ಬದಲಾಗು; ಬಾಗು.
**ಅರಸ** – ರಾಜ; ಶ್ರೇಷ್ಠ.
**ಇಟ್ಟು** (ಕ್ರಿ) – ಇಡುವುದು; ಊಟಕ್ಕೆ ನೀಡಿ.
**ಕೈಲಾಸ** – ಶಿವನ ನೆಲೆ
**ಜ್ಯೋತಿ** – ಬೆಳಕು; ದೀಪ.
**ಬಂಗಾರ** – ಚಿನ್ನ; ಹೇಮ; ಕನಕ.
**ಮದ್ದಿನ** – ಮಧ್ಯಾಹ್ನ; ನಡು ಹಗಲು.
**ಸಂತೆ** – ನಿಯಮಿತ ಸ್ಥಳ ಹಾಗೂ ದಿನದಲ್ಲಿ ಕೊಂಡುಕೊಳ್ಳುವುದಕ್ಕೆ ಜನ ಸೇರುವುದು.
**ಸಾಂರಾಜ್ಯ** – ಸಾಮ್ರಾಜ್ಯ; ರಾಜನ ಆಡಳಿತಕ್ಕೆ ಒಳಪಟ್ಟ ವಿಸ್ತಾರವಾದ ರಾಜ್ಯ.
**ಹಂಗಿಸು** (ಕ್ರಿ) – ಹೀಯಾಳಿಸು; ವ್ಯಂಗ್ಯಮಾಡು.
**ಹೊತ್ತು** – ಸಮಯ; ಕಾಲ.

©KTBS Not to be republished

## II. ಪ್ರಶ್ನೆಗಳು :

**ಅ) ಕೆಳಗೆ ನೀಡಿರುವ 'ಅ' ಪಟ್ಟಿಯೊಂದಿಗೆ 'ಬ' ಪಟ್ಟಿಯನ್ನು ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| ೧) ಅಕ್ಕ | ಅ) ಸಾಗರ |
| ೨) ಮಕ್ಕಳು | ಆ) ಸಂತೆ |
| ೩) ರೊಕ್ಕ | ಇ) ಕಂತೆ |
| ೪) ಸಂಸಾರ | ಈ) ಭಾವ |
| | ಉ) ಮನೆಮಾರು |

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ತಾಯಿ ತನ್ನ ಮಗನು ಯಾವ ಗುಣಗಳಿಗೆ ಒಡೆಯನಾಗಬೇಕೆಂದು ಬಯಸುತ್ತಾಳೆ?

೨. ಜನಪದರು ಸಂಸಾರವನ್ನು ಯಾವುದಕ್ಕೆ ಹೋಲಿಸಿದ್ದಾರೆ?

೩. ಈಸಬಲ್ಲವನಿಗೆ ಸಂಸಾರವೆಂಬ ಸಾಗರ ಹೇಗೆ ಕಾಣಿಸುತ್ತದೆ?

೪. ಸಂಸಾರವೆಂಬ ಸಾಗರದಲ್ಲಿ ಈಸುವುದು ಎಂದರೇನು?

೫. ಜನಪದರ ಪ್ರಕಾರ ಜನರೆಲ್ಲ ನೆಂಟರಾಗುವುದು ಯಾವಾಗ?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ತಾಯಿ ತನ್ನ ಮಗು ಯಾವ ಗುಣಗಳಿಂದ ಜಗಕ್ಕೆ ಜ್ಯೋತಿಯಾಗಬೇಕೆಂದು ಬಯಸುತ್ತಾಳೆ?

೨. ತಾಯಿ ತನ್ನ ಮಗುವಿನಲ್ಲಿ ಒಳ್ಳೆಯ ಗುಣಗಳು ಇರಬೇಕೆಂದು ಏಕೆ ಬಯಸುತ್ತಾಳೆ?

೩. ಜನಪದರು ಸಂಸಾರವನ್ನು ಸಾಗರಕ್ಕೆ ಏಕೆ ಹೋಲಿಸಿದ್ದಾರೆ?

೪. ಓದಿನ ಮಹತ್ವವನ್ನು ಜನಪದರು ಯಾವ ರೀತಿ ತಿಳಿಸಿದ್ದಾರೆ?

೫. 'ಬಂಗಾರದ ಬಳೆತೊಟ್ಟು ಬೈಬೇಡ ಬಡವರ'– ಎನ್ನುವ ಮಾತಿನಲ್ಲಿ ಜನಪದರ ಯಾವ ಭಾವನೆಗಳಿವೆ?

೬. ಶ್ರೀಮಂತಿಕೆಯ ದರ್ಪವನ್ನು ಬಡವರ ಮೇಲೆ ಏಕೆ ತೋರಬಾರದು?

೭. ನಮ್ಮ ಯಾವ ವರ್ತನೆಗಳು ಶಿವನಿಗೆ ಒಪ್ಪಿಗೆಯಾಗುವುದಿಲ್ಲ ಎಂಬುದು ಜನಪದರ ಅಭಿಪ್ರಾಯವಾಗಿದೆ?

೮. ಭಾವ, ಸಂತೆ ಹಾಗೂ ಮನೆ ಇವುಗಳ ಇರುವಿಕೆ ಸಾಧ್ಯವಾಗುವುದು ಯಾವಾಗ?

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಜನಪದರ ಪ್ರಕಾರ ನಮ್ಮ ನಡೆನುಡಿಗಳು ಶಿವನಿಗೆ ಯಾವಾಗ ಪ್ರಿಯವಾಗುತ್ತವೆ?

೨. 'ಸುಖಕ್ಕೆ ಬರುವ ಜನ ಕಷ್ಟಕ್ಕೆ ಬಾರರು' ಎನ್ನುವ ಮಾತು ಜನಪದರ ಹಾಡಿನಲ್ಲಿ ಹೇಗೆ ವ್ಯಕ್ತವಾಗಿದೆ?

೩. 'ಜ್ಯೋತಿಯೇ ಆಗು ಜಗಕೆಲ್ಲ' ತ್ರಿಪದಿಗಳಲ್ಲಿ ವ್ಯಕ್ತವಾಗಿರುವ ಜನಪದರ ಭಾವನೆಗಳೇನು?

೪. ಕಂದ, ಹಡೆದವ್ವ ಮತ್ತು ಶ್ರೀಮಂತಿಕೆಯ ಬಗ್ಗೆ ಜನಪದ ತ್ರಿಪದಿಗಳಲ್ಲಿ ವ್ಯಕ್ತವಾಗಿರುವ ಆಶಯವೇನು?

©KTBS Not to be republished



ಕಷ್ಟದಿಂದ ಮೇಲಕ್ಕೆ ಬಾ ಕೆಳಗೆ ಬೀಳುತ್ತೇನೆಂಬ ಭಯವಿರುವುದಿಲ್ಲ.

ಉ) **ಸಂದರ್ಭದೊಡನೆ ವಿವರಿಸಿರಿ.**

೧. ಜ್ಯೋತಿಯೇ ಆಗು ಜಗಕೆಲ್ಲ.

೨. ಬಂಗಾರ ನಿನಗೆ ಸ್ಥಿರವಲ್ಲ.

೩. ಇಟ್ಟು ಹಂಗಿಸಬೇಡ.

೪. ಒಡಹುಟ್ಟಿದಣ್ಣ ಮುಖನೋಡ.

## III. ಭಾಷಾಭ್ಯಾಸ :

ಅ) **ಕೆಳಗಿನ ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.**

ಅರಸ, ಕಂದ, ಹಂಗಿಸು, ಬಂಗಾರ, ಅಡವಿ, ಸಾಗರ.

ಆ) **ಕೆಳಗಿನ ಪದಗಳಿಗೆ ಗ್ರಾಂಥಿಕ ರೂಪ ಬರೆಯಿರಿ.**

ಬೈಬೇಡ, ಹೊರಳೋದು, ಸಾಂರಾಜ್ಯ, ನಮಗ.

ಇ) **ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ಚೂಡಾಮಣಿ, ಹಂಗಿಸು, ನೆಂಟರು, ಸ್ಥಿರ.

ಈ) **ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ.**

ಪ್ರಭು, ಸ್ಥಿರ, ನೀತಿ, ಆಚಾರ, ಬಡವ.

ಉ) **ಕೆಳಗಿನ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.**

**ಮಾದರಿ :** ಹಡೆದ + ಅವ್ವ = ಹಡೆದವ್ವ

ಜಗಕೆಲ್ಲ, ಸಂಸಾರವೆಂಬುದು, ಎದೆಯುದ್ದ, ಎಷ್ಟುಂಡರೆಂದು, ಮಕ್ಕಳಿದ್ದರೆ, ಒಡಹುಟ್ಟಿದಣ್ಣ.

ಊ) **ಈ ಕೆಳಗಿನ ಪದ್ಯದ ಭಾವಾರ್ಥ ಬರೆಯಿರಿ.**

ಉಂಡಾಗ ಉಡುವಾಗ ಜನವೆಲ್ಲ ನೆಂಟರು
ಅಡವಿಯ ಸೊಪ್ಪು ತಲೆಯಲ್ಲಿ । ತಪ್ಪಾಗ
ಒಡಹುಟ್ಟಿದಣ್ಣ ಮುಖನೋಡ ॥



© KTBS Not to be republished

ಸ್ನೇಹಿತನನ್ನು ನಿಧಾನವಾಗಿಯೇ ಆರಿಸು, ಅವನನ್ನು ಬದಲಿಸುವಾಗ ಇನ್ನೂ ನಿಧಾನಿಸು.

ಋ) ಕೆಳಗೆ ನೀಡಿರುವ ಸಜಾತೀಯ ಮತ್ತು ವಿಜಾತೀಯ ಒತ್ತಕ್ಷರದ ಪದಗಳನ್ನು ವಿಂಗಡಿಸಿ ಬರೆಯಿರಿ.

ಪ್ರಭು, ಜ್ಯೋತಿ, ಜಗಕೆಲ್ಲ, ಹೊತ್ತು, ಕೊಟ್ಟು, ರೊಕ್ಕ, ರಾಜ್ಯ, ಹುಟ್ಟಿದಣ್ಣ, ಸೊಪ್ಪು ಸ್ಥಿರ, ಬ್ಯಾಡ.

| ಸಜಾತೀಯ ಒತ್ತಕ್ಷರಗಳು | ವಿಜಾತೀಯ ಒತ್ತಕ್ಷರಗಳು |
|---|---|
| | |

## IV. ಚಟುವಟಿಕೆಗಳು :

೧. 'ಜ್ಯೋತಿಯೇ ಆಗು ಜಗಕೆಲ್ಲ' ಪದ್ಯದಲ್ಲಿನ ೧ ನೇ ಮತ್ತು ೪ ನೇ ತ್ರಿಪದಿಗಳನ್ನು ಕಂಠಪಾಠ ಮಾಡಿರಿ.

೨. ಮಾತಿನ ಮಹತ್ವವನ್ನು ತಿಳಿಸುವ ಗಾದೆ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.

೩. ತಾಯಿ ತನ್ನ ಮಕ್ಕಳನ್ನು ಹಾರೈಸುವ ಇನ್ನಿತರ ಜನಪದ ಗೀತೆಗಳನ್ನು ಸಂಗ್ರಹಿಸಿ ಹಾಡಿರಿ.

©KTBS Not to be republished

R4J2R1

# ೧೨. ನನ್ನ ಹಾಗೆಯೆ

**ಪಾಠ ಪ್ರವೇಶ :** ವೃಷಭನಾಥನ ಮಕ್ಕಳಾದ ಭರತ ಮತ್ತು ಬಾಹುಬಲಿ ಇಬ್ಬರ ನಡುವೆ ರಾಜ್ಯಕ್ಕಾಗಿ ಯುದ್ಧ ನಡೆಯುತ್ತದೆ. ಯುದ್ಧದಲ್ಲಿ ಬಾಹುಬಲಿಯು ತನ್ನ ಅಣ್ಣನಾದ ಭರತನನ್ನು ಮುಷ್ಟಿಯುದ್ಧ, ದೃಷ್ಟಿಯುದ್ಧ, ಹಾಗೂ ಜಲಯುದ್ಧಗಳಲ್ಲಿ ಸೋಲಿಸುತ್ತಾನೆ. ಇದರಿಂದ ಅವಮಾನಿತನಾದ ಭರತನು ಬಾಹುಬಲಿಯನ್ನು ಕೊಲ್ಲಲು ಮುಂದಾಗುತ್ತಾನೆ. ಇದರಿಂದ ಬೇಸರಗೊಂಡ ಬಾಹುಬಲಿ ಗೆದ್ದ ರಾಜ್ಯವನ್ನು ಭರತನಿಗೆ ಒಪ್ಪಿಸಿ ತಪಸ್ಸನ್ನಾಚರಿಸಲು ತೆರಳುತ್ತಾನೆ. ಈ ರೀತಿಯಲ್ಲಿ ಭೋಗವನ್ನು ತ್ಯಜಿಸಿ ತ್ಯಾಗಿಯಾಗುವ ಭವ್ಯ ತತ್ತ್ವವನ್ನು ಬಾಹುಬಲಿಯು ಜಗತ್ತಿಗೆ ಸಾರುತ್ತಾನೆ. ಸ್ವಾಭಿಮಾನ, ತ್ಯಾಗ ಹಾಗೂ ಅಹಿಂಸೆಯ ಪ್ರತೀಕವಾದ ಗೊಮ್ಮಟಮೂರ್ತಿಗೆ ಹನ್ನೆರಡು ವರ್ಷದಲ್ಲೊಮ್ಮೆ ಮಹಾಮಸ್ತಕಾಭಿಷೇಕ ನಡೆಯುತ್ತದೆ. ಶ್ರವಣಬೆಳಗೊಳದ ಗೊಮ್ಮಟಮೂರ್ತಿಯ ಮಹಾಮಜ್ಜನವನ್ನು ಕಂಡ ಮಗು ತನ್ನ ತಾತನ ಜೊತೆ ನಡೆಸುವ ಸಂಭಾಷಣೆ ಹಾಗೂ ಮಗುವಿನ ಮುಗ್ಧತೆ ಈ ಕವನದಲ್ಲಿದೆ.

©KTBS
Not to be republished

ಮೊನ್ನೆ ಮೊನ್ನೆ ನಡೆಯಿತಲ್ಲ ಬಾಹುಬಲಿಯ ಮಜ್ಜನ
ಬೆಟ್ಟದಲ್ಲಿ ಕೇಳಿತೊಂದು ಪುಟ್ಟ ಮಗುವು ಅಜ್ಜನ
"ಈತನಾರು ತಾತ ಇಲ್ಲಿ ನಿಂತು ನೋಡುತಿರುವನು
ಇಂದ್ರಗಿರಿಯ ನೆತ್ತಿಯಲ್ಲಿ ಏನು ಮಾಡುತಿರುವನು?"


"ಇವನೆ ಬಾಹುಬಲಿಯು ಮಗು! ಧೀರತನದ ಮೂರ್ತಿಯು!
ನುಡಿಯ ಹೊಳೆಗಳಲ್ಲಿ ತುಂಬಿ ಹರಿವುದಿವನ ಕೀರ್ತಿಯು
ಹತ್ತುವವರ ಇಳಿಯುವವರ ನಿಂತು ನೋಡುತಿರುವನು
ನಿಲ್ಲುವವರ ನಡೆಯುವವರ ಲೆಕ್ಕ ಮಾಡುತಿರುವನು
ಬಳಲಿದವರಿಗೆಲ್ಲ ಇಲ್ಲಿ ಕೈಯ ನೀಡುತಿರುವನು"

"ಇಲ್ಲಿ ಏಕೆ ಬಂದು ನಿಂತ? ಇಷ್ಟು ದೂರ! ಎತ್ತರ!
ಭಯವಾಗದೆ ಇವನಿಗಿಲ್ಲಿ ಯಾರು ಇಲ್ಲ ಹತ್ತಿರ"

“ಇವನಿಗೆಲ್ಲಿ ಭಯವು ಮಗು ಅಭಯಮೂರ್ತಿ ಈತನು
ಭರತ ಚಕ್ರವರ್ತಿ ಇವನ ಅಣ್ಣ ಒಮ್ಮೆ ಆತನು
ಹಮ್ಮಿನಲ್ಲಿ ಬಂದು ಸೆಣಸಿ ತಮ್ಮನಲ್ಲಿ ಸೋತನು
ಗೆದ್ದರಾಜ್ಯ ಮರಳಿಸುತ್ತ ನುಡಿದನೊಂದು ಮಾತನು
ನೀನು ಸೋತುಗೆದ್ದೆ ಅಣ್ಣ, ನಾನು ಗೆದ್ದು ಸೋತೆನು
ಬೆಟ್ಟ ಕರೆಯುತಿಹುದು ನನ್ನ ಮುಗಿಲು ತನ್ನ ಹತ್ತಿರ
ಯಾವುದುಂಟು ಅಣ್ಣ ಇಲ್ಲಿ ಜೀವವೇರದೆತ್ತರ?
ತಪಸ್ಸೊಂದೆ ತಿಳಿವುದೊಂದೆ ಹುಟ್ಟು ಸಾವಿನುತ್ತರ.

ನಿಂತು ಹಾಗೆ ನಿಂತುಕೊಂಡು ಘೋರ ತಪವ ಮಾಡಲು
ಹುಟ್ಟು ಸಾವಿನಾಚೆಗಿರುವ ಹೊಳೆವ ಹಾದಿ ನೋಡಲು
ಬಿಸಿಲು ಬಂತು ನೆರಳು ಬಂತು ಗಾಳಿ ಬಿಚ್ಚಿ ಬೀಸಿತು
ಒಮ್ಮೆ ಹಸಿರು ಒಮ್ಮೆ ಹೊನ್ನು ಹಚ್ಚಡವನು ಹಾಸಿತು
ಸೂರ್ಯನೊಮ್ಮೆ ಚಂದ್ರನೊಮ್ಮೆ ಸುತ್ತು ಹಾಕಿ ನಡೆದರು
ದೀಪದಂತೆ ನಿಂತ ಇವಗೆ “ನಮೋ” ಎಂದು ನುಡಿದರು

© KTBS Not to be republished





ತರಗತಿಯಲ್ಲಿ ಕಲಿತದ್ದನ್ನು ಸಮಾಜದ ಒಳಿತಿಗೆ ಬಳಸದವ ವಿದ್ಯಾವಂತನೇ ಅಲ್ಲ.

"ಇಷ್ಟು ಜನರು ಇಲ್ಲಿಗಿಂದು ಏಕೆ ಬಂದು ನೆರೆದರು?
'ಬಾಹುಬಲಿ', 'ಬಾಹುಬಲಿ' ಎಂದು ಕರೆಯುತಿರುವರು"

"ಮಗೂ, ಇಂದು ಇವನಿಗಿಲ್ಲಿ ಹಾಲಿನಲ್ಲಿ ಸ್ನಾನವು
ದಾರಿಯಲ್ಲಿ ದಣಿದ ಇವರಿಗೆ, ಇವನದೊಂದೆ ಧ್ಯಾನವು
ಮುದ್ದುಮುಖದಿ ಮುಗುಳ್ನಕ್ಕು ಸಿದ್ಧನಾಗಿ ನಿಂತಿಹ
ದುಗ್ಧ ಹಾಸದಲ್ಲಿ ನಲಿವ ಮುಗ್ಧ ಮಗುವಿನಂತಿಹ"

"ತಾತ,
ಎರೆವ ಮುಂಚೆ ಎಣ್ಣೆ ಹಚ್ಚಿ ಅಮ್ಮ ನನಗೆ ಹೀಗೆಯೇ
ನಿಲ್ಲಿಸುವಳು. ಬಾಹುಬಲಿಯು ಕೂಡ ತನ್ನ ಹಾಗೆಯೆ
ನಿಂತು ಕಾಯುತಿರುವ ಕಣ್ಣು ತೆರೆದು ಮೊದಲ ಚೆಂಬಿಗೆ"
ಗೊಮ್ಮಟೇಶ ನಕ್ಕುಬಿಟ್ಟ ಕಂಡು ಮುಗ್ಧ ನಂಬಿಗೆ.

– **ಸು. ರಂ. ಎಕ್ಕುಂಡಿ**

* * * *

## ಕೃತಿಕಾರರ ಪರಿಚಯ :



**ಸು. ರಂ. ಎಕ್ಕುಂಡಿ** ಅವರ ಪೂರ್ಣ ಹೆಸರು **ಸುಬ್ಬಣ್ಣ ರಂಗನಾಥ ಎಕ್ಕುಂಡಿ** ಇವರು **ಹಾವೇರಿ ಜಿಲ್ಲೆಯ ರಾಣಿಬೆನ್ನೂರಿನಲ್ಲಿ ೧೯೨೩** ರಲ್ಲಿ ಜನಿಸಿದರು. ಬಡತನದಲ್ಲಿ ಬೆಳೆದ ಇವರು ಶ್ರೀಸತ್ಯಬೋಧ ಸೇವಾಸಂಘ ನಡೆಸುತ್ತಿದ್ದ ವಾಚನಾಲಯದಲ್ಲಿ ಕೆಲಸಕ್ಕೆ ಸೇರಿದರು. ಅದರ ಫಲವಾಗಿ ವಾಚನಾಲಯದ ಪುಸ್ತಕಗಳನ್ನು ಪುಕ್ಕಟೆ ಓದುವ ಅವಕಾಶ ಸಿಕ್ಕು, ಎಕ್ಕುಂಡಿಯವರು ಸಾಹಿತ್ಯ ಲೋಕಕ್ಕೆ ಆಕರ್ಷಿತರಾದರು.

ಪ್ರೌಢಶಾಲೆಯಲ್ಲಿ ಓದುತ್ತಿರುವಾಗ 'ಉನ್ನತಿ' ಕೈಬರೆಹದ ಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸಿದರು. ಇವರ ಪ್ರಮುಖ ಕೃತಿಗಳೆಂದರೆ, **'ಆನಂದತೀರ್ಥ', 'ಸಂತಾನ', 'ಹಾವಾಡಿಗರ ಹುಡುಗ', 'ಮತ್ಸ್ಯಗಂಧಿ', 'ಬೆಳ್ಳಕ್ಕಿಗಳು', 'ಕಥನ ಕವನಗಳು', 'ಬಕುಳದ ಹೂವುಗಳು'** ಇನ್ನು ಮುಂತಾದವು.

ಇವರಿಗೆ ಸೋವಿಯತ್‌ಲ್ಯಾಂಡ್ ನೆಹರೂ ಪ್ರಶಸ್ತಿ, ರಾಜ್ಯ ಶಿಕ್ಷಕ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ 'ಬಕುಳದ ಹೂವುಗಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿವೆ. ಶ್ರೀಯುತರು ೧೯೯೫ ರಲ್ಲಿ ಮರಣ ಹೊಂದಿದರು. ಪ್ರಸ್ತುತ ಪದ್ಯವನ್ನು ಅವರ **'ಕಥನ ಕವನಗಳು'** ಎಂಬ ಕವನ ಸಂಗ್ರಹದಿಂದ ಆಯ್ದುಕೊಳ್ಳಲಾಗಿದೆ.

©KTBS Not to be republished

**ಟಿಪ್ಪಣಿ :**

ಭರತ, ಬಾಹುಬಲಿ ಇವರು ಅಯೋಧ್ಯೆಯ ಅರಸನಾಗಿದ್ದ ವೃಷಭನಾಥನ ಅನೇಕ ಮಕ್ಕಳಲ್ಲಿ ಇಬ್ಬರು. ವೃಷಭನಾಥನು ವೈರಾಗ್ಯಪರನಾದಾಗ ತನ್ನ ಮಕ್ಕಳಿಗೆ ರಾಜ್ಯವನ್ನು ಹಂಚಿ ತಪಸ್ಸಿಗೆ ತೆರಳುತ್ತಾನೆ. ಅದರಂತೆ ಅಯೋಧ್ಯೆಯನ್ನಾಳುತ್ತಿದ್ದ ಭರತನ ಶಸ್ತ್ರಾಗಾರದಲ್ಲಿ ಚಕ್ರರತ್ನವು ಹುಟ್ಟಲು ಅದನ್ನು ಮುಂದಿಟ್ಟು ದಿಗ್ವಿಜಯ ಮುಗಿಸಿ ಹಿಂದಿರುಗುತ್ತಿದ್ದಾಗ ಅದು ಅಯೋಧ್ಯೆಯನ್ನು ಪ್ರವೇಶಿಸದೆ ನಿಂತುಬಿಡುತ್ತದೆ. ಪೌದನಪುರದಲ್ಲಿ ಆಳುತ್ತಿದ್ದ ಬಾಹುಬಲಿಯನ್ನು ಗೆಲ್ಲದೆ ತನ್ನ ಚಕ್ರವರ್ತಿ ಪಟ್ಟ ಪೂರ್ಣಗೊಳ್ಳದು ಎಂದು ಭರತನು, ಅಣ್ಣನಾದ ತನಗೆ ಶರಣಾಗಬೇಕೆಂದು ತಮ್ಮನಿಗೆ ಸಂದೇಶ ಕಳುಹಿಸುತ್ತಾನೆ. ಅಣ್ಣನಾದರೇನಂತೆ ತಲೆಬಾಗುವುದು ಅರಸನಾಗಿರುವ ತನ್ನ ಅಭಿಮಾನಕ್ಕೆ ಕುಂದು ಎಂದು ಬಾಹುಬಲಿಯು ಯುದ್ಧಕ್ಕೆ ಸನ್ನದ್ಧನಾಗುತ್ತಾನೆ. ಮಂತ್ರಿಗಳ ಮಾತಿನಂತೆ, ಸೈನಿಕರ ನಾಶದ ಬದಲಿಗೆ ದ್ವಂದ್ವ ಯುದ್ಧಕ್ಕೆ ಇಬ್ಬರೂ ಮನಸ್ಸುಮಾಡಿದರು. ದೃಷ್ಟಿ ಜಲ, ಮಲ್ಲ ಯುದ್ಧದಲ್ಲಿ ಬಾಹುಬಲಿ ಗೆಲ್ಲುತ್ತಾನೆ. ಆದರೆ ಈ ಗೆಲುವಿನಿಂದ ಪ್ರಯೋಜನವಿಲ್ಲವೆಂದು ಗೆದ್ದರಾಜ್ಯವನ್ನು ಅಣ್ಣನಿಗೆ ಒಪ್ಪಿಸಿ ತಾನು ವೈರಾಗ್ಯಪರನಾಗಿ ತಪಸ್ಸಿಗೆ ತೆರಳುತ್ತಾನೆ, ಗೊಮ್ಮಟೇಶನೆನಿಸುತ್ತಾನೆ.

## ಅಭ್ಯಾಸ

### I. ಪದಗಳ ಅರ್ಥ ತಿಳಿಯಿರಿ :

**ಅಭಯ** – ರಕ್ಷಣೆ

**ದುಗ್ಧಹಾಸ** – ಹಾಲುನಗೆ; ಮುಗುಳ್ನಗೆ.

**ನೆರೆ** – ಗುಂಪುಸೇರು

**ಮುಗಿಲು** – ಮೋಡ; ಎತ್ತರದ ಸ್ಥಾನ.

**ಸೆಣಸು** – ಹೋರಾಡು

**ಹಮ್ಮು** – ಅಹಂಕಾರ

**ಚೆಂಬು** – ತಂಬಿಗೆ

**ನುಡಿಯ ಹೊಳೆ** – ನಿರಂತರವಾಗಿ ಕೇಳಿ ಬರುವ ಮಾತು.

**ಮಜ್ಜನ (ದ್ಭ)** – ಮಾರ್ಜನ(ತ್ಸ); ಸ್ನಾನ.

**ಮುಗ್ಧ** – ಸರಳ ಸ್ವಭಾವದ

**ಹಚ್ಚಡ** – ಹೊದಿಕೆ

### II. ಪ್ರಶ್ನೆಗಳು :

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

೧. ಬಾಹುಬಲಿ ಮೂರ್ತಿ ಇರುವ ಬೆಟ್ಟದ ಹೆಸರು ____________

೨. ಬಾಹುಬಲಿಯ ಅಣ್ಣನ ಹೆಸರು ______________

೩. ಬಾಹುಬಲಿಯು ಹುಟ್ಟು ಸಾವು ತಿಳಿಯಲು ಕಂಡುಕೊಂಡ ದಾರಿ ______________

೪. ಸು.ರಂ.ಎಕ್ಕುಂಡಿಯವರ ____________ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ದೊರೆತಿದೆ.



ಈ ಪ್ರಪಂಚ ಒಂದು ದೊಡ್ಡ ಗರಡಿ ಮನೆ. ನಾವಿಲ್ಲಿ ಬಲಿಷ್ಠರಾಗುವುದಕ್ಕೆ ಬಂದಿದ್ದೇವೆ.

©KTBS Not to be republished

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಬಾಹುಬಲಿಯನ್ನು ಕಂಡು ಮಗುವು ಅಜ್ಜನನ್ನು ಏನೆಂದು ಕೇಳಿತು?

೨. ಬಾಹುಬಲಿಯ ಏಕಾಂಗಿತನವನ್ನು ಕಂಡು ಮಗುವು ಕುತೂಹಲದಿಂದ ಕೇಳಿದ ಪ್ರಶ್ನೆಗಳಾವುವು?

೩. ಬಾಹುಬಲಿ ಯಾವ ಮೌಲ್ಯಗಳ ಸಂಕೇತ?

೪. ಬಾಹುಬಲಿಯ ತಪಸ್ಸು ಯಾವ ರೀತಿ ಇತ್ತು?

೫. ಬಾಹುಬಲಿ ಮೂರ್ತಿಯು ಮಜ್ಜನದ ಸಂದರ್ಭದಲ್ಲಿ ಹೇಗೆ ಗೋಚರಿಸುತ್ತದೆಂದು ಕವಿ ವರ್ಣಿಸಿದ್ದಾರೆ?

೬. ಸೂರ್ಯಚಂದ್ರರು ಬಾಹುಬಲಿಗೆ ಏಕೆ ನಮಿಸಿದರು?

೭. ಮಗುವಿನ ಮುಗ್ಧ ನಂಬಿಕೆಗೆ ಗೊಮ್ಮಟನ ಪ್ರತಿಕ್ರಿಯೆ ಏನು?

೮. ಭರತ ಬಾಹುಬಲಿಯರ ಸೆಣಸಾಟದ ಫಲಿತಾಂಶವೇನು?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಅಜ್ಜನು ಬಾಹುಬಲಿಯ ಮೂರ್ತಿ ಮತ್ತು ಕೀರ್ತಿಯ ಬಗ್ಗೆ ಮಗುವಿಗೆ ಏನು ಹೇಳಿದನು?

೨. ಬಾಹುಬಲಿ ತಪಸ್ಸಿಗೆ ಹೋಗಲು ಕಾರಣವೇನು?

೩. ಬಾಹುಬಲಿಯು ತನ್ನ ಹಾಗೆಯೆ ಎಂದು ಮಗು ಭಾವಿಸಿದುದು ಏಕೆ?

**ಈ) ಸುಮಾರು ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. 'ನೀನು ಸೋತುಗೆದ್ದೆ. ಅಣ್ಣ, ನಾನು ಗೆದ್ದು ಸೋತೆನು' ಎಂದು ಬಾಹುಬಲಿಯು ಹೇಳಿದ ಪ್ರಸಂಗದ ಸ್ವಾರಸ್ಯವನ್ನು ವಿವರಿಸಿರಿ.

೨. 'ನನ್ನ ಹಾಗೆಯೇ' ಕವನದ ಭಾವಾರ್ಥವನ್ನು ಬರೆಯಿರಿ

**ಉ) ಸಂದರ್ಭದೊಂದಿಗೆ ವಿವರಿಸಿರಿ.**

೧. ಇವನೆ ಬಾಹುಬಲಿಯು ಮಗು ಧೀರತನದ ಮೂರ್ತಿಯು!

೨. ನೀನು ಸೋತು ಗೆದ್ದೆ ಅಣ್ಣ, ನಾನು ಗೆದ್ದು ಸೋತೆನು.

೩. ಗೊಮ್ಮಟೇಶ ನಕ್ಕುಬಿಟ್ಟ ಕಂಡು ಮುಗ್ಧ ನಂಬಿಗೆ.

©KTBS Not to be republished

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ.**

ಭಯ, ಕೀರ್ತಿ, ಹತ್ತು, ದೂರ, ಸೋಲು, ಹುಟ್ಟು.

**ಆ) ಕೆಳಗಿನ ಪದಗಳಿಗೆ ತತ್ಸಮ– ತದ್ಭವಗಳನ್ನು ಬರೆಯಿರಿ.**

ಮುಖ, ಮಜ್ಜನ, ಮೂರ್ತಿ, ಮುಗುದ.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿರಿ.**

ಧೀರತನ, ಹೊಳೆವಹಾದಿ, ಹಚ್ಚಡ, ಮುಗುಳ್ನಗು, ಮುದ್ದುಮುಖ, ಮುಗ್ಧಮಗುವಿನಂತೆ.

**ಈ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರು ತಿಳಿಸಿರಿ.**

ಕೇಳಿತೊಂದು, ಸೂರ್ಯನೊಮ್ಮೆ, ಸಾವಿನಾಚೆ, ಯಾವುದುಂಟು, ಭಯವಾಗದೆ, ಗೊಮ್ಮಟೇಶ.

**ಉ) ಈ ಪದ್ಯದಲ್ಲಿ ಬಳಕೆ ಆಗಿರುವ ಅಂತ್ಯ ಪ್ರಾಸ ಪದಗಳನ್ನು ಆರಿಸಿ ಬರೆಯಿರಿ.**

**ಮಾದರಿ :** ಮಜ್ಜನ – ಅಜ್ಜನ

## IV. ಚಟುವಟಿಕೆಗಳು :

೧. ಶ್ರವಣಬೆಳಗೊಳ, ವೇಣೂರು, ಕಾರ್ಕಳ, ಗೊಮ್ಮಟಗಿರಿ ಹಾಗೂ ಶ್ರೀಕ್ಷೇತ್ರ ಧರ್ಮಸ್ಥಳ ಇಲ್ಲಿ ಗೊಮ್ಮಟೇಶ್ವರನ ಮೂರ್ತಿಗಳಿವೆ. ಅವುಗಳನ್ನು ನೋಡಿ ಅದರ ಔನ್ನತ್ಯವನ್ನು ತಿಳಿಯಿರಿ.

೨. ಭರತ ಬಾಹುಬಲಿಯರ ಕಥೆಯನ್ನು ಓದಿ ತಿಳಿಯಿರಿ.

©KTBS Not to be republished

# ೧೩. ತೂಗಿ ತೂಗಿ ಮರಗಳೇ

P8Y3K5

**ಪಾಠ ಪ್ರವೇಶ :** ಮರವನ್ನು ಕಲ್ಪವೃಕ್ಷ ಎಂದು ಕರೆಯುತ್ತೇವೆ. ಮಾನವನ ಪಾಲಿಗೆ ಮರಗಳು ವರಗಳಾಗಿವೆ. ನಮಗೆ ಶುದ್ಧಗಾಳಿ, ನೆರಳು, ಹಣ್ಣು, ತಂಪು ನೀಡುತ್ತವೆ ನಿಜ, ಅದರ ಜೊತೆಗೆ ಮರವೊಂದು ನಮ್ಮ ಬದುಕಿಗೆ ನೀತಿ ಪಾಠವಾಗಿರುವುದನ್ನು ಕವಿ ಗುರುತಿಸಿದ್ದಾರೆ. ಮರಗಳಿಗೆ ಋಷಿ ಸಮಾನವಾದ ಮನಸ್ಸಿದೆ. ಅವು ಸತ್ಯ, ತ್ಯಾಗ, ಅಹಿಂಸೆಯ ನಿಲುವು ಎಂಬುದನ್ನು ಕವಿ ಬಣ್ಣಿಸಿದ್ದಾರೆ. ಮರದ ಬದುಕಿನಂತೆ ನಮ್ಮ ಬದುಕು ರೂಪಿತಗೊಳ್ಳಬೇಕು ಎಂಬುದು ಕವಿತೆಯ ಆಶಯವಾಗಿದೆ.



Not to be Republished

ತೂಗಿ ತೂಗಿ ಮರಗಳೇ
ಇಳೆಗೆ ಇಳಿದ ಮರಗಳೇ,
ನೆಲದ ಮಧುರ ಗಾನದಲ್ಲಿ
ಮೂಡಿ ಬಂದ ಸ್ವರಗಳೇ.

ಮಾತಾಡದೇ ದುಡಿಯುವಾ ಪ್ರೀತಿ ಪಡೆದ ಕರಗಳೇ
ಸೋತು ಬಂದ ಹಕ್ಕಿ ಹಿಂಡು ತೂಗಿಕೊಳುವ ನೆಲೆಗಳೇ
ಸಾಲು ಹಸಿರ ಮಾಲೆಯೇ ಜೀವರಸದ ನಾಲೆಯೇ
ಪ್ರೀತಿಯೆಂಬ ನೀತಿ ಹಾಡಿ ಪ್ರಕೃತಿ ಬರೆದ ಓಲೆಯೇ!

ಮಣ್ಣಿನ ತಮದಾಳವ ಸೀಳಿ ಮೇಲೆ ಬರುವಿರಿ
ಮೈ ತುಂಬ ಚಿಗುರಿನ ರೋಮಾಂಚನ ತಳೆವಿರಿ;
ಕೊಂಬೆ ಕೊಂಬೆ ಕೈಯ ಚಾಚಿ ಬನ್ನಿ ಎಂದು ಕರೆವಿರಿ
ಔದಾರ್ಯದ ಒಡಲಾಗಿ ಹೂವು ಹಣ್ಣು ಸುರಿವಿರಿ.

ಆಕಾಶಕೆ ತುಡಿಯುವಾ ನೆಲದಾಳದ ಕನಸೇ
ನೀಡಲೆಂದೆ ಫಲಿಸುವಾ ಋಷಿಸಮಾನ ಮನಸೇ;
ಕಡಿದರೂ ಕರುಣೆ ತೋರಿ ಚಿಗುರುವಾ ಗೆಲುವೇ
ಸತ್ಯ ತ್ಯಾಗ ಅಹಿಂಸೆಯೇ ನಿತ್ಯವಾದ ನಿಲುವೇ!

**– ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ**

©KTBS Not to be republished

* * * *

## ಕೃತಿಕಾರರ ಪರಿಚಯ :



**ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ** ಅವರು ೧೯೩೬ ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು. ಇವರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. **'ನೈಶಿಲ ಭಟ್ಟ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಇವರು **'ನಿನ್ನೆಗೆ ನನ್ನ ಹಾಡು', 'ವೃತ್ತ ಸುಳಿ', 'ಹೊಳೆ ಸಾಲಿನ ಮರ', 'ಬಾರೋ ವಸಂತ', 'ಭಾವಸಂಗಮ', 'ದೀಪಿಕಾ'**, ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಇವರ **'ಹೊರಳು ದಾರಿಯಲ್ಲಿ ಕಾವ್ಯ' 'ನಂದನ', 'ಚಿನ್ನದ ಹಕ್ಕಿ'** ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ದೊರೆತಿದೆ. ಜೊತೆಗೆ ಕಾರಂತ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಆರ್ಯಭಟ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಪ್ರಸ್ತುತ ಕವನವನ್ನು ಅವರ **'ಸಮಗ್ರ ಕಾವ್ಯ ಸಂಪುಟ–೨'** ಕೃತಿಯಿಂದ ಆಯ್ದುಕೊಳ್ಳಲಾಗಿದೆ.



ಚಂದನವ ಕಡಿದು ಕೊರೆದು ತೇದಡೆ ನೊಂದೆನೆಂದು ಕಂಪ ಬಿಟ್ಟಿತ್ತೆ.

# ಅಭ್ಯಾಸ

## I. ಪದಗಳ ಅರ್ಥ ತಿಳಿಯಿರಿ :

**ಇಳೆ** – ಭೂಮಿ; ಧರೆ; ಪೃಥ್ವಿ.
**ಋಷಿ** – ತಪಸ್ವಿ; ಮುನಿ.
**ಓಲೆ** – ಪತ್ರ
**ಕರ** – ಕೈ; ಹಸ್ತ.
**ಗಾನ** – ಹಾಡು; ಸಂಗೀತ.
**ತಳೆ (ಕ್ರಿ)** – ಧರಿಸು
**ನಾಲೆ** – ಕಾಲುವೆ; ತೋಡು.
**ಮಧುರ** – ಇಂಪಾದ
**ಇಳಿ (ಕ್ರಿ)** – ಕೆಳಕ್ಕೆ ಬರು; ಬೀಳು.
**ಒಡಲು** – ಶರೀರ; ಹೊಟ್ಟೆ.
**ಔದಾರ್ಯ** – ಉದಾರತೆ; ಧಾರಾಳ ಗುಣ.
**ಕರುಣೆ** – ದಯೆ
**ತಮ** – ಕತ್ತಲು
**ತುಡಿ (ಕ್ರಿ).** – ಮಿಡಿ; ಸ್ಪಂದಿಸು.
**ನೆಲೆ** – ಆಶ್ರಯ
**ವರ** – ಅನುಗ್ರಹ

## II. ಪ್ರಶ್ನೆಗಳು :

**ಅ) ಕೆಳಗೆ ನೀಡಿರುವ 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| ೧) ಮರ | ಅ) ಗೂಡು |
| ೨) ಹಕ್ಕಿ | ಆ) ಹಸಿರು |
| ೩) ಗಾನ | ಇ) ಪ್ರೀತಿ |
| | ಈ) ಸ್ವರ |

©KTBS Not to be republished

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಕವಿ ಯಾವುದನ್ನು ಇಳೆಗೆ ಇಳಿದ ವರಗಳೆಂದು ಕರೆದಿದ್ದಾರೆ?
೨. ಮರಗಳು ಯಾರಿಗೆ ನೆಲೆ ನೀಡಿವೆ?
೩. ಕವಿ ಮರಗಳಿಗೆ ಎಂತಹ ಮನಸ್ಸಿದೆ ಎಂದಿದ್ದಾರೆ?
೪. ಮರಗಳು ಔದಾರ್ಯದ ರೂಪದಲ್ಲಿ ನಮಗೇನು ನೀಡುತ್ತವೆ?
೫. ಮರ ಯಾವ ಮೌಲ್ಯಗಳನ್ನು ಸಂಕೇತಿಸುತ್ತದೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಮರಗಳು ಪ್ರಕೃತಿ ಬರೆದ ಓಲೆ ಎಂಬುದನ್ನು ಕವಿ ಹೇಗೆ ವರ್ಣಿಸಿದ್ದಾರೆ?

೨. ಸಸಿಯೊಂದು ಮರವಾಗಿ ಬೆಳೆಯುವ ರೀತಿಯನ್ನು ಕವಿ ಹೇಗೆ ವರ್ಣಿಸಿದ್ದಾರೆ?

೩. ಮರಗಳು ಸತ್ಯ, ತ್ಯಾಗ, ಅಂಹಿಸೆಯ ಪ್ರತೀಕವಾಗಿವೆ ಹೇಗೆ?

**ಈ) ಕೆಳಗಿನ ಪ್ರಶ್ನೆಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಪ್ರಕೃತಿಯಲ್ಲಿ ಮರಗಳು ನೀಡುವ ಸಂದೇಶವನ್ನು ಕವಿ ಯಾವ ರೀತಿ ವರ್ಣಿಸಿದ್ದಾರೆ?

**ಉ) ಸಂದರ್ಭದೊಡನೆ ವಿವರಿಸಿರಿ.**

೧. ಪ್ರಕೃತಿ ಬರೆದ ಓಲೆಯೇ

೨. ಹೂವು ಹಣ್ಣು ಸುರಿವಿರಿ

೩. ಸತ್ಯ ತ್ಯಾಗ ಅಹಿಂಸೆಯೇ ನಿತ್ಯವಾದ ನಿಲುವೇ!

## III. ಭಾಷಾಭ್ಯಾಸ :

**ಅ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

೧. ಇಳೆ : ಭೂಮಿ :: ಓಲೆ : ____________

೨. ಸತ್ಯ : ಅಸತ್ಯ :: ಅಹಿಂಸೆ : ____________

೩. ಸ್ವರ : ಸರ :: ಹಕ್ಕಿ : ____________

೪. ಮರ : ಮರಗಳು :: ಸ್ವರಗಳು : ____________

**ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

ವರ, ಮಧುರ, ನೆಲೆ, ರೋಮಾಂಚನ, ಔದಾರ್ಯ, ಅಹಿಂಸೆ.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ.**

ವರ, ಸ್ವರ, ಅಹಿಂಸೆ, ಪ್ರೀತಿ.

©KTBS Not to be republished

ಈ) ಕೆಳಗಿನ ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ.

ಋಷಿ, ಆಕಾಶ, ನಿತ್ಯ, ಪಕ್ಷಿ, ಸ್ವರ.

ಉ) ಕೆಳಗೆ ನೀಡಿರುವ ಪದಗಳ ಉಚ್ಚಾರಣೆ ಹಾಗೂ ಅರ್ಥ ವ್ಯತ್ಯಾಸಗಳನ್ನು ಕೇಳಿ ತಿಳಿಯಿರಿ.

೧. ಮರ – ವರ

೨. ನಾಲೆ – ನೆಲೆ

೩. ಕರ – ಕರೆ

೪. ಇಳೆ – ಇಳಿ

## IV. ಚಟುವಟಿಕೆಗಳು :

೧. ನಿಮ್ಮ ಸುತ್ತ ಕಂಡು ಬರುವ ವಿವಿಧ ಜಾತಿಯ ಮರಗಳ ಹೆಸರುಗಳನ್ನು ಪಟ್ಟಿ ಮಾಡಿರಿ.

೨. ನಿಮ್ಮ ಮನೆ ಮತ್ತು ಶಾಲೆಯ ಸುತ್ತ ಮರಗಿಡಗಳನ್ನು ಬೆಳೆಸಿರಿ.

©KTBS Not to be republished

# ೧೪. ಮಳೆ ಬರಲಿ

N4L7F4


**ಪ್ರವೇಶ :** ಮಳೆ ಸಕಲ ಜೀವರಾಶಿಗಳಿಗೆ ಮೂಲಾಧಾರ. ಇಂದು ಪ್ರಕೃತಿಯಲ್ಲಿ ನಾನಾ ವೈಪರೀತ್ಯಗಳು ಉಂಟಾಗುತ್ತಿವೆ. ಅವುಗಳಲ್ಲಿ ಅತಿವೃಷ್ಟಿ ಹಾಗೂ ಅನಾವೃಷ್ಟಿಗಳು ಮುಖ್ಯವಾಗಿವೆ. ಇವುಗಳಿಂದ ಜನಜೀವನ ಅಸ್ತವ್ಯಸ್ತಗೊಂಡು ರೈತರ ಬದುಕು ಸಂಕಷ್ಟಕ್ಕೆ ಒಳಗಾಗುತ್ತಿದೆ. ಮಳೆಯು ಸಕಾಲಕ್ಕೆ ಹಿತವಾಗಿ ಬಂದು ಕೆರೆ ಕಟ್ಟೆ ಬಾವಿಗಳು ತುಂಬಿದರೆ ರೈತರ ಬದುಕು ಹಸನಾಗುತ್ತದೆ. ಆ ಮುಖೇನ ನಾಡು ಸಮೃದ್ಧಿಯಿಂದ ನೆಮ್ಮದಿಯಿಂದ ಕೂಡಿರುತ್ತದೆ. ಹೀಗಾಗಿ ಮಳೆ ಬರಲಿ.... ನಮ್ಮ ಕಷ್ಟಗಳನ್ನು ದೂರಮಾಡಿ, ಸುಖ ಸಂತೋಷವನ್ನು ಹೆಚ್ಚಿಸಲಿ ಎಂದು ಕವಯಿತ್ರಿ ನಮ್ರತೆಯಿಂದ ಪ್ರಾರ್ಥಿಸಿದ್ದಾರೆ.

©KTBS
Not to be republished

ಮಳೆ ಬರಲಿ.............
ಆದರೆ
ಹಸಿರು ಹೊಲ ಗದ್ದೆಗಳನ್ನೂ
ರೈತರ ಸುಖ ನಿದ್ದೆಗಳನ್ನೂ
ಕಸಿದುಕೊಳ್ಳದಿರಲಿ.

ಮಳೆ ಬರಲಿ................
ಆದರೆ
ಹುಲ್ಲಿನ ಛಾವಣಿಗಳನ್ನೂ
ಮಣ್ಣಿನ ಗೋಡೆಗಳನ್ನೂ
ಕೆಡವಿ ಹಾಕದಿರಲಿ.

ಮಳೆ ಬರಲಿ.................
ಇರಲೊಂದು ಪುಟ್ಟ ಮನೆ
ಹೊದೆಯಲು ಬೆಚ್ಚನೆಯ
ಕಂಬಳಿ ಎಲ್ಲರಿಗೂ ಸಿಗಲಿ.



ನೊಂದ ಬಯಲುಗಳಿಗೆ
ಬೆಂದ ಬೆಟ್ಟಗಳಿಗೆ
ಬಾಯಾರಿದ ಕೆರೆ ಬಾವಿ
ಹಳ್ಳ ಕೊಳ್ಳಗಳಿಗೆ–
ಬರಲಿ ಮಳೆ ಬರಲಿ.

‘ಧೋ’ ಎಂದು ಸುರಿದು
ಹೊರಟು ನಿಂತಾಗ
ನೆಲ–ಮುಗಿಲು ನಗಲಿ
ಏಳು ಬಣ್ಣಗಳಲ್ಲಿ.

**– ಸವಿತಾ ನಾಗಭೂಷಣ**

©KTBS Not to be republished

* * * *

## ಕೃತಿಕಾರರ ಪರಿಚಯ :



**ಶ್ರೀಮತಿ ಸವಿತಾ ನಾಗಭೂಷಣ** ಅವರು **೧೯೫೧** ರಲ್ಲಿ **ಚಿಕ್ಕಮಗಳೂರಿನಲ್ಲಿ** ಜನಿಸಿದರು. ಇವರು ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಅಂಚೆ ಇಲಾಖೆಯಲ್ಲಿ ೨೦ ವರ್ಷ ಸೇವೆಸಲ್ಲಿಸಿ, ಸ್ವಯಂ ನಿವೃತ್ತಿ ಹೊಂದಿದ್ದಾರೆ.

ಇವರು **‘ಚಂದ್ರನನ್ನು ಕರೆಯಿರಿ ಭೂಮಿಗೆ’, ‘ಹೊಳೆ ಮಗಳು’, ‘ಆಕಾಶ ಮಲ್ಲಿಗೆ’, ‘ಜಾತ್ರೆಯಲ್ಲಿ ಶಿವ’, ‘ದರುಶನ’, ‘ಕಾಡು ಲಿಲ್ಲಿ ಹೂಗಳು’, ‘ಹಳ್ಳಿಯ ದಾರಿ’** – ಮೊದಲಾದ ಕವನ ಸಂಕಲನಗಳನ್ನು, **‘ಸ್ತ್ರೀಲೋಕ’** ಎಂಬ ಕಾದಂಬರಿಯನ್ನು ಬರೆದಿದ್ದಾರೆ. **‘ನಾ ಬರುತೇನ ಕೇಳ’** ಎಂಬ ಕವನ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ ಹಾಗೂ **ಡಿ. ಎಸ್. ಕರ್ಕಿ** ಕಾವ್ಯ ಪ್ರಶಸ್ತಿಯೂ ಲಭಿಸಿದೆ.

ಪ್ರಸ್ತುತ ‘ಮಳೆ ಬರಲಿ...’ ಕವನವನ್ನು **‘ಚಂದ್ರನನ್ನು ಕರೆಯಿರಿ ಭೂಮಿಗೆ’** ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

# ಅಭ್ಯಾಸ

## I. ಪದಗಳ ಅರ್ಥ ತಿಳಿಯಿರಿ :

**ಕಂಬಳಿ** – ಕುರಿಯ ತುಪ್ಪಟದಿಂದ ಮಾಡಿದ ಹೊದಿಕೆ.
**ಕೊಳ್ಳ** – ತಗ್ಗು; ಗುಣಿ.
**ಬಯಲು** – ವಿಸ್ತಾರವಾದ ಭೂಪ್ರದೇಶ.
**ಹಳ್ಳ** – ತಗ್ಗು; ಗುಣಿ.
**ಕಸಿದು** (ಕ್ರಿ) – ಕಿತ್ತುಕೊಳ್ಳು; ಅಪಹರಿಸು.
**ಛಾವಣಿ** – ಚಾವಣಿ(ಕ). ಮಾಳಿಗೆ.
**ಬೆಂದ** (ಕ್ರಿ) – ಸುಡು; ಕುದಿ; ಬಿಸಿ.

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ರೈತರಿಗೆ ಸುಖ ನಿದ್ದೆಗಳು ಯಾವಾಗ ಸಿಗುತ್ತವೆ?
೨. ಕೆರೆ ಹಳ್ಳ ಬಾವಿಗಳಿಗೆ ಬಾಯಾರಿಕೆ ಆಗುವುದು ಯಾವಾಗ?
೩. ನೊಂದ ಬಯಲುಗಳು, ಬೆಂದ ಬೆಟ್ಟಗಳು ತಂಪಾಗುವುದು ಯಾವಾಗ?
೪. ಮಳೆ ಬಂದು ನಿಂತಾಗ ನೆಲ ಮುಗಿಲು ಹೇಗೆ ಕಾಣಬೇಕು?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಮಳೆ ಯಾವ ಯಾವ ನಷ್ಟಗಳನ್ನು ಉಂಟುಮಾಡದಿರಲಿ ಎಂದು ಕವಯಿತ್ರಿ ಆಶಿಸಿದ್ದಾರೆ?
೨. ವಿಪರೀತ ಮಳೆಯಿಂದ ಯಾರ ಮನೆಗಳಿಗೆ ಹೆಚ್ಚು ಹಾನಿ ಉಂಟಾಗುತ್ತದೆ? ಏಕೆ?
೩. ಮಳೆಯಿಂದ ಯಾವ ಯಾವ ಸುಖಗಳು ಸಿಗಲಿ ಎಂದು ಕವಯಿತ್ರಿ ಆಶಿಸುತ್ತಾರೆ?
೪. ನೊಂದು ಬೆಂದು ಬಾಯಾರಿದ ಪ್ರಕೃತಿಯ ಅಂಶಗಳಾವುವು?

©KTBS Not to be republished

**ಇ) ಕೆಳಗಿನ ಪ್ರಶ್ನೆಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಮಳೆಯಿಂದ ಆಗುವ ಅನುಕೂಲ ಹಾಗೂ ಅನಾನುಕೂಲಗಳಾವುವು?

**ಈ) ಸಂದರ್ಭದೊಡನೆ ವಿವರಿಸಿರಿ.**

೧. ರೈತರ ಸುಖ ನಿದ್ದೆಗಳನ್ನು ಕಸಿದುಕೊಳ್ಳದಿರಲಿ.
೨. ಹೊದೆಯಲು ಬೆಚ್ಚನೆಯ ಕಂಬಳಿ ಎಲ್ಲರಿಗೂ ಸಿಗಲಿ.
೩. ಕೆರೆ ಬಾವಿ ಹಳ್ಳಕೊಳ್ಳಗಳಿಗೆ ಬರಲಿ ಮಳೆ.

## III. ಭಾಷಾಭ್ಯಾಸ :

**ಅ) ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

೧. ಹಳ್ಳಕೊಳ್ಳ: ಜೋಡುನುಡಿ :: ಧೋ : ____________

೨. ಹಳ್ಳ : ತಗ್ಗು :: ಕಸಿದು : ______________

೩. ಸಿಗು : ಸಿಗಲಿ :: ನಗು : ___________

**ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ಸುಖನಿದ್ದೆ, ಬಾಯಾರು, ಬೆಚ್ಚನೆ.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ.**

ಮೇಲೆ, ಬೀಳು, ಸುಖ, ಕೆಡವು.

**ಈ) ಕೆಳಗಿನ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.**

**ಮಾದರಿ :** ಹಾಕದೆ + ಇರಲಿ = ಹಾಕದಿರಲಿ

೧. ಇರಲೊಂದು

೨. ಬಾಯಾರಿದ

೩. ಕೊಳ್ಳದಿರಲಿ

©KTBS Not to be republished

## IV. ಚಟುವಟಿಕೆಗಳು :

೧. ಈ ಪದ್ಯದ ಕೊನೆಯ ಎರಡು ಪದ್ಯಗಳನ್ನು ಕಂಠಪಾಠ ಮಾಡಿರಿ. (ನೊಂದ ಬಯಲುಗಳಿಗೆ......... ಏಳು ಬಣ್ಣಗಳಲ್ಲಿ)

೨. ಸಕಲ ಚರಾಚರಗಳಿಗೆ ಮಳೆಯ ಅಗತ್ಯತೆ ಇರುವುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೩. ಅತಿವೃಷ್ಟಿ ಮತ್ತು ಅನಾವೃಷ್ಟಿಗೆ ಸಂಬಂಧಿಸಿದ ಸಚಿತ್ರ ಮಾಹಿತಿಗಳನ್ನು ಸಂಗ್ರಹಿಸಿರಿ.

೪. ಸಕಾಲಕ್ಕೆ ಹಿತಮಿತವಾಗಿ ಮಳೆ ಬರಲು ಏನು ಮಾಡಬೇಕು ಚರ್ಚಿಸಿ, ಅಗತ್ಯ ಕ್ರಮಗಳನ್ನು ಕೈಗೊಳ್ಳಿರಿ.



ಜಗತ್ತಿಗೆ ಅವಶ್ಯವಿರುವ ವಸ್ತುವನ್ನು ತಾನೊಬ್ಬನೇ ಸಂಗ್ರಹಿಸಿಕೊಳ್ಳುವುದು ಹಿಂಸೆಯೇ.

W4X2H7


# ೧೫. ಹಕ್ಕಿಗಳು

**ಪಾಠ ಪ್ರವೇಶ :** ಶತಶತಮಾನಗಳಿಂದ ಶೋಷಣೆ, ಅನ್ಯಾಯ, ಅವಮಾನ, ನಿರ್ಲಕ್ಷ್ಯ ಹಾಗೂ ತುಳಿತಕ್ಕೆ ಒಳಗಾದ ಸಾಮಾಜಿಕ ವರ್ಗವೊಂದು ತನ್ನ ನೋವು, ಸಿಟ್ಟು ಹಾಗೂ ಅನುಭವಗಳಿಗೆ ಅಕ್ಷರ ರೂಪ ಕೊಟ್ಟು, ತನ್ನದೇ ಭಾಷೆಯಲ್ಲಿ ವ್ಯಕ್ತಪಡಿಸಿದ ರೀತಿ ಕನ್ನಡ ಸಾಹಿತ್ಯದಲ್ಲಿ ಮಹತ್ವದ ಸ್ಥಾನಪಡೆದು 'ಬಂಡಾಯ – ದಲಿತ' ಎಂದು ಪ್ರಸಿದ್ಧಿ ಪಡೆಯಿತು. ದಲಿತರು, ಶೋಷಿತರು ತಮ್ಮ ಬದುಕನ್ನು ಕುರಿತು ತಾವೇ ಬರೆದುಕೊಳ್ಳಲಾರಂಭಿಸಿದರು. ಈ ಮುಖೇನ ಸಾಮಾಜಿಕ ಜಾಗೃತಿ ಹಾಗೂ ಬದಲಾವಣೆ ತರುವಲ್ಲಿ ಕಾರಣರಾದರು. ಸರ್ವ ಸಮಾನತೆಯ ಸಮಾಜವನ್ನು ಕಟ್ಟಬಯಸಿದರು.

ಬೆಟ್ಟವ ಹತ್ತಿ ಬೆಟ್ಟವ ಇಳಿಯುವ
ಬಾಲಕರಣ್ಣ ನಾವುಗಳು
ಆಳ ಪಾತಾಳದ ಕರಾಳ ನೋವನು
ಕಂಡವರಣ್ಣಾ ನಾವುಗಳು

ಕುರಿಗಳ ಕಾಯ್ದು ದನಗಳ ಮೇಯಿಸಿ
ಹಾಲನು ಕುಡಿಯದೆ ಹೋದವರು
ಓದುವ ಬರೆಯುವ ಭಾಗ್ಯವು ಸಿಗದೆ
ಗಿಡಗಳ ಜೊತೆಯಲಿ ಬೆಳೆದವರು

©KTBS
Not to be republished





ಶುದ್ಧ ಹಾಗೂ ಸತ್ಯದ ದೃಷ್ಟಿಯಿಂದ ನಮ್ಮ ಶರೀರವೂ ಒಂದು ಆಸ್ತಿಯೆನಿಸುತ್ತದೆ.

ಎಂಜಲು ತೊಳೆದು ಗಂಜಲ ಬಳಿದು
ಗಂಜಿಯ ಕಾಣದೆ ದುಡಿದವರು
ಗುಡಿಗೋಪುರದ ಬಣ್ಣಗಳಾಗಿ
ಚಳಿಯನು ತಡೆಯದೆ ಕುಸಿದವರು

ಉರಿಬಿಸಿಲಲ್ಲಿ ಉರಿಯುವ ಎಲೆಗಳು
ಬೂದಿಯ ಕಣಗಳು ನಾವುಗಳು
ಬಿರಿಯುವ ಮೊದಲೇ ಬಾಡುವ ಹೂವುಗಳು
ಕಮರುವ ಬಣ್ಣದ ಕನಸುಗಳು

ಹೊತ್ತನು ಅರಿಯದ ದಿಕ್ಕನು ಕಾಣದ
ಸೀಳುದಾರಿಯ ಪಯಣಿಗರು
ನೋವಿನ ಹಾಡಿನ ಕತ್ತಲ ನಾಡಿನ
ಬೆಳಕನು ಅರಸುವ ಹಕ್ಕಿಗಳು

**– ಸಿದ್ಧಲಿಂಗಯ್ಯ**

* * * *

©KTBS Not to be republished

## ಕೃತಿಕಾರರ ಪರಿಚಯ:



**ಡಾ. ಸಿದ್ಧಲಿಂಗಯ್ಯ** ಅವರು ದಲಿತ ಕವಿಯೆಂದೇ ಪ್ರಸಿದ್ಧರಾಗಿದ್ದಾರೆ. ಇವರು **೧೯೫೪** ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಂಚನಬೆಲೆಯಲ್ಲಿ ಜನಿಸಿದರು. (ಈಗಿನ ರಾಮನಗರ ಜಿಲ್ಲೆ). ದಲಿತರ ದುಃಖ ದುಮ್ಮಾನಗಳಿಗೆ ಧ್ವನಿಯಾಗಿರುವ ಇವರು **'ಹೊಲೆಮಾದಿಗರ ಹಾಡು', 'ಸಾವಿರಾರು ನದಿಗಳು', 'ಕಪ್ಪುಕಾಡಿನ ನಾಡು', 'ಮೆರವಣಿಗೆ' ಮುಂತಾದ ಕವನ ಸಂಕಲನಗಳನ್ನೂ 'ಅವತಾರಗಳು', 'ಗ್ರಾಮದೇವತೆಗಳು', 'ಹಕ್ಕಿನೋಟ' ಮುಂತಾದ ಗದ್ಯ ಕೃತಿಗಳನ್ನೂ, 'ಪಂಚಮ', 'ನೆಲಸಮ', 'ಏಕಲವ್ಯ'** ನಾಟಕಗಳನ್ನೂ ಬರೆದಿದ್ದಾರೆ. 'ಊರು ಕೇರಿ' ಇವರ ವಿಶಿಷ್ಟ ರೀತಿಯ ಆತ್ಮಕಥನವಾಗಿದೆ.

ಇವರು ಎರಡು ಬಾರಿ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ಡಾ. ಅಂಬೇಡ್ಕರ್ ಶತಮಾನೋತ್ಸವ ವಿಶೇಷ ಬಹುಮಾನ, ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಮುಂತಾದ ಪ್ರಶಸ್ತಿಗಳು ಸಂದಿವೆ. ಪ್ರಸ್ತುತ **'ಹಕ್ಕಿಗಳು'** ಕವನವನ್ನು ಅವರ **'ಮೆರವಣಿಗೆ'** ಕೃತಿಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.



ಶ್ರಮ ಮಾಡದ ಮನುಷ್ಯನಿಗೆ, ಊಟ ಮಾಡುವ ಹಕ್ಕು ಇರುವುದಿಲ್ಲ.

# ಅಭ್ಯಾಸ

## I. ಪದಗಳ ಅರ್ಥ :

**ಅರಸು** – ಹುಡುಕು; ಶೋಧಿಸು.

**ಕಮರು (ಕ್ರಿ)** – ಕುಂದು; ಬಾಡು; ನಾಶವಾಗು.

**ಕರಾಳ (ಗು)** – ಭಯಂಕರವಾದ; ವಿಕೃತವಾದ.

**ಗಂಜಲ** – ಗೋಮೂತ್ರ

**ಬಾಡು (ಕ್ರಿ)** – ಕುಗ್ಗು ; ಒಣಗು; ಕಳೆಗುಂದು.

**ಸೀಳುದಾರಿ** – ಕವಲುದಾರಿ

**ಅರಿ** – ತಿಳಿ

**ಎಂಜಲು** – ತಿಂದು ಮಿಕ್ಕಿದ್ದು

**ಕುಸಿ (ಕ್ರಿ)** – ಕುಗ್ಗು; ಆಯಾಸಗೊಂಡು ಬೀಳು

**ಪಾತಾಳ** – ಭೂಮಿ ಕೆಳಗಿನ ಏಳು ಲೋಕಗಳಲ್ಲಿ ಒಂದು; ಬಹಳ ಆಳವಾದ ಸ್ಥಳ.

**ಬಿರಿ (ಕ್ರಿ)** – ಅರಳು; ಬಿರುಕು.

**ಹೊತ್ತು** – ಸಮಯ

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಹಕ್ಕಿಗಳು ಕವಿತೆ ಯಾರನ್ನು ಕುರಿತು ಬರೆದುದಾಗಿದೆ?

೨. ಕುರಿದನಗಳನ್ನು ಕಾಯ್ದ ಬಾಲಕರಿಗೆ ಯಾವುದು ಸಿಗಲಿಲ್ಲ?

೩. ಎಂಜಲು ತೊಳೆದವರಿಗೆ ಏನು ಸಿಗಬೇಕಾಗಿತ್ತು?

೪. ಗಿಡಗಳ ಜೊತೆ ಬೆಳೆದವರಿಗೆ ಯಾವ ಭಾಗ್ಯ ಸಿಗಲಿಲ್ಲ?

೫. ಬಾಲಕರು ಚಳಿಯನು ತಡೆಯದೆ ಕುಸಿದುದು ಏಕೆ?

೬. ಬಾಲಕರ ಕನಸುಗಳು ಹೇಗೆ ಕಮರಿಹೋಗಿವೆ?

©KTBS Not to be republished

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಹಕ್ಕಿಗಳು ಕವಿತೆಯಲ್ಲಿ ಬಾಲಕರು ಯಾವ ಯಾವ ಅವಕಾಶಗಳಿಂದ ವಂಚಿತರಾಗಿದ್ದಾರೆ?

೨. ನೋವುಂಡ ಬಾಲಕರಿಗೆ ಯಾವ ಯಾವ ಅನುಭವಗಳಾಗಿವೆ?

೩. ಬಾಲಕರ ಹಾಡು ಮತ್ತು ನಾಡು ಯಾವ ಸ್ವರೂಪದ್ದಾಗಿದೆ? ಏಕೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಬಾಲಕರದು ನೋವಿನ ಹಾಡು, ಕತ್ತಲ ನಾಡು ಎಂದು ಕವಿ ಏಕೆ ಕರೆದಿದ್ದಾರೆ?

೨. 'ಹಕ್ಕಿಗಳು' ಕವಿತೆಯಲ್ಲಿ ವ್ಯಕ್ತಗೊಂಡಿರುವ ಕವಿಯ ಭಾವನೆಗಳೇನು?

**ಈ) ಸಂದರ್ಭದೊಡನೆ ವಿವರಿಸಿರಿ.**

೧. ಹಾಲನು ಕುಡಿಯದೆ ಹೋದವರು.

೨. ಗಂಜಿಯ ಕಾಣದೆ ದುಡಿದವರು.

೩. ಕಮರುವ ಬಣ್ಣದ ಕನಸುಗಳು.

೪. ಬೆಳಕನು ಅರಸುವ ಹಕ್ಕಿಗಳು.

## III. ಭಾಷಾಭ್ಯಾಸ :

**ಅ) ಕೆಳಗಿನ 'ಅ' ಪಟ್ಟಿಯೊಂದಿಗೆ 'ಬ' ಪಟ್ಟಿಯನ್ನು ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| ೧. ವರ್ಣ | ಅ. ದಿಸೆ |
| ೨. ಪ್ರಯಾಣ | ಆ. ಪಕ್ಷಿ |
| ೩. ಹಾಲು | ಇ. ಪಯಣ |
| ೪. ಹಕ್ಕಿ | ಈ. ಬಣ್ಣ |
| | ಉ. ಪಾಲು |

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ಇಳಿ, ಕತ್ತಲು, ಕನಸು, ಕಮರು.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

ಭಾಗ್ಯ, ಬಣ್ಣದ ಕನಸು, ಉರಿಬಿಸಿಲು, ಕರಾಳ ನೋವು, ಬಾಡುವ ಹೂವು.

**ಈ) ಹಕ್ಕಿಗಳು ಕವಿತೆಯಲ್ಲಿ ಬಳಕೆಯಾಗಿರುವ ಕ್ರಿಯಾಪದಗಳನ್ನು ಪಟ್ಟಿಮಾಡಿರಿ.**

**ಉದಾ :** ಹತ್ತಿ, ಇಳಿ.....

©KTBS Not to be republished

ಉ) ಯಾವುದೇ ಒಂದು ಪದಕ್ಕೆ 'ಗಳು' ಮತ್ತು 'ಅರು' ಪ್ರತ್ಯಯ ಸೇರಿದಾಗ ಬಹುವಚನ ರೂಪ ಪಡೆಯುತ್ತದೆ. ಅಂತಹ ಪದಗಳನ್ನು 'ಹಕ್ಕಿಗಳು' ಕವಿತೆಯಿಂದ ಆರಿಸಿ ಬರೆಯಿರಿ.

| 'ಗಳು' ಪ್ರತ್ಯಯದ ಪದಗಳು | 'ಅರು' ಪ್ರತ್ಯಯದ ಪದಗಳು |
|---|---|
| ೧. ನಾವುಗಳು | ೧. ಹೋದವರು |

ಊ) ಈ ಕೆಳಗಿನ ಪದ್ಯದ ಭಾವಾರ್ಥ ಬರೆಯಿರಿ.

ಕುರಿಗಳ ಕಾಯ್ದು ದನಗಳ ಮೇಯಿಸಿ
ಹಾಲನು ಕುಡಿಯದೆ ಹೋದವರು
ಓದುವ ಬರೆಯುವ ಭಾಗ್ಯವು ಸಿಗದೆ
ಗಿಡಗಳ ಜೊತೆಯಲಿ ಬೆಳೆದವರು

ಎಂಜಲು ತೊಳೆದು ಗಂಜಲ ಬಳಿದು
ಗಂಜಿಯ ಕಾಣದೆ ದುಡಿದವರು
ಗುಡಿಗೋಪುರದ ಬಣ್ಣಗಳಾಗಿ
ಚಳಿಯನು ತಡೆಯದೆ ಕುಸಿದವರು

## IV. ಚಟುವಟಿಕೆಗಳು :

೧. ಡಾ. ಸಿದ್ಧಲಿಂಗಯ್ಯ ಅವರ 'ಮೆರವಣಿಗೆ' ಸಮಗ್ರ ಕವನ ಸಂಕಲನವನ್ನು ಸಂಗ್ರಹಿಸಿ ಓದಿರಿ.
೨. ದಲಿತರ, ಬಡವರ ಮಕ್ಕಳ ಕಷ್ಟ ಸುಖಗಳನ್ನು ಆಲಿಸಿರಿ, ಅವರೊಂದಿಗೆ ಪ್ರೀತಿಯಿಂದ ನಡೆದುಕೊಳ್ಳಿರಿ.
೩. ಬಾಲ್ಯದ ನಿಮ್ಮ ಅನುಭವಗಳನ್ನೇ ಕವಿತೆಯ ರೂಪದಲ್ಲಿ ಬರೆಯಿರಿ.





©KTBS Not to be republished

# ೧೬. ಗೌರವಿಸು ಜೀವನವ

T7C5L4

**ಪಾಠ ಪ್ರವೇಶ :** ನಮ್ಮ ಈ ಜೀವನವನ್ನು ಗೌರವಿಸಬೇಕು. ಈ ಜೀವಕ್ಕೆ ಮೂಲವಾದ ಚೇತನವನ್ನು ಗೌರವಿಸಬೇಕು. ಇದು ಯಾರದೋ ಜಗತ್ತು, ನಾನೇನು ಇಲ್ಲಿ ಶಾಶ್ವತವಾಗಿರುವುದಿಲ್ಲ ಎನ್ನುವ ಭಾವವನ್ನು ತೊರೆದು ಬದುಕಿನಲ್ಲಿ ಸಮೃದ್ಧಿಯನ್ನು ಕಾಣಲು ಪ್ರಯತ್ನಿಸಬೇಕು. ನಮ್ಮ ದೇಹ, ಮನಸ್ಸು ಮತ್ತು ಚೇತನ ಶುದ್ಧವಾಗಿರಬೇಕು. ಆಗ ನಾವು ಮಾಡುವ ಪ್ರತಿ ಕೆಲಸಗಳೂ ಶುದ್ಧವಾಗಿರುತ್ತವೆ. ಅದು ಆತ್ಮೋನ್ನತಿಗೆ ದಾರಿಯಾಗುತ್ತದೆ.

ನಾವು ನೋಡುವ ಪ್ರತಿ ವಸ್ತುವಿನಲ್ಲೂ ಹಲವು ಸೋಜಿಗಗಳಿವೆ. ಆ ಸೋಜಿಗಗಳಿಗೆ ಕಾರಣಗಳನ್ನು ಹುಡುಕಲು ನಮ್ಮಿಂದ ಸಾಧ್ಯವಿಲ್ಲ. ಆ ಪರಮಾತ್ಮ ತನ್ನಿಚ್ಛೆಯಂತೆ ತನ್ನ ಸಂತೋಷಕ್ಕೆ ಎಲ್ಲವನ್ನೂ ಸೃಷ್ಟಿಸಿ ಆನಂದಪಡುತ್ತಾನೆ. ಹೀಗಾಗಿ ನಮ್ಮಲ್ಲಿರುವ ಅಹಂಕಾರವನ್ನು ಬಿಟ್ಟು ಆನಂದಪಡುವುದನ್ನು ಕಲಿಯಬೇಕು.

ಬದುಕಿನ ಪ್ರತಿ ಸಂದರ್ಭದಲ್ಲೂ ತನ್ಮಯತೆಯನ್ನು ಹೃದಯ ವೈಶಾಲ್ಯತೆಯನ್ನು ರೂಢಿಸಿಕೊಂಡು ಬ್ರಹ್ಮಾನಂದವನ್ನು ಅನುಭವಿಸಬೇಕು ಎನ್ನುವ ವಿಚಾರಗಳನ್ನು ಡಿವಿಜಿ ಅವರು ಇಲ್ಲಿ ವ್ಯಕ್ತಪಡಿಸಿದ್ದಾರೆ.

©KTBS
Not to be republished

ಗೌರವಿಸು ಜೀವನವ, ಗೌರವಿಸು ಚೇತನವ
ಆರದೋ ಜಗವೆಂದು ಭೇದವೆಣಿಸದಿರು
ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ
ದಾರಿಯಾತ್ಮೋನ್ನತಿಗೆ – ಮಂಕುತಿಮ್ಮ ॥ ೧ ॥

ತೃಣಕೆ ಹಸಿರೆಲ್ಲಿಯದು? ಬೇರಿನದೇ? ಮಣ್ಣಿನದೇ? ।
ದಿನಪನದೆ? ಚಂದ್ರನದೆ? ನೀರಿನದೆ? ನಿನದೆ? ॥
ತಣಿತಣಿವ ನಿನ್ನ ಕಣ್ಣಿನ ಪುಣ್ಯವೋ? ನೋಡು ।
ಗುಣಕೆ ಕಾರಣವೊಂದೆ? ಮಂಕುತಿಮ್ಮ ॥ ೨ ॥

ಒಮ್ಮೆ ಹೂದೋಟದಲಿ ಒಮ್ಮೆ ಕೆಳೆಕೂಟದಲಿ
ಒಮ್ಮೆ ಸಂಗೀತದಲಿ ಒಮ್ಮೆ ಶಾಸ್ತ್ರದಲ್ಲಿ
ಒಮ್ಮೆ ಸಂಸಾರದಲಿ ಮತ್ತೊಮ್ಮೆ ಮೌನದಲಿ
ಬ್ರಹ್ಮಾನುಭವಿಯಾಗೊ – ಮಂಕುತಿಮ್ಮ ॥ ೩ ॥


ವಿಸ್ತಾರದಲಿ ಬಾಳು ವೈಶಾಲ್ಯದಿಂ ಬಾಳು
ಕತ್ತಲೆಯ ಮೊಡಕು ಮೂಲೆಗಳ ಸೇರದಿರು
ಭಾಸ್ಕರನನುಗ್ರಹವೆ ನೂತ್ನ ಜೀವನ ಸತ್ತ್ವ
ಮೃತ್ಯು ನಿನಗಲ್ಪತೆಯೊ – ಮಂಕುತಿಮ್ಮ ॥ ೪ ॥

– ಡಿ.ವಿ.ಜಿ

* * * *

## ಕೃತಿಕಾರರ ಪರಿಚಯ :

**ಡಿವಿಜಿ** ಎಂದು ಪ್ರಸಿದ್ಧರಾಗಿರುವ ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ ಅವರು ೧೮೮೭ ರಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲಲ್ಲಿ ಜನಿಸಿದರು. ಪತ್ರಿಕೋದ್ಯಮಿಯಾಗಿ, ಗೋಖಲೆ ಸಾರ್ವಜನಿಕ ಸಂಸ್ಥೆಯ ಸ್ಥಾಪಕರಾಗಿ, ಸಮಾಜ ಸೇವಕರಾಗಿ, ಸಾಹಿತಿಯಾಗಿ ಪ್ರಸಿದ್ಧರಾದವರು.



ಇವರು **'ಮಂಕುತಿಮ್ಮನ ಕಗ್ಗ', 'ಮರುಳುಮುನಿಯನ ಕಗ್ಗ', 'ಉಮರನ ಒಸಗೆ', 'ಜ್ಞಾಪಕ ಚಿತ್ರಶಾಲೆ', 'ಅಂತಃಪುರದ ಗೀತೆಗಳು'** ಮೊದಲಾದ ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ಡಿವಿಜಿ ಅವರ **'ಶ್ರೀ ಮದ್ಭಗವದ್ಗೀತಾ ತಾತ್ಪರ್ಯ'** ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಮಡಿಕೇರಿಯಲ್ಲಿ ಸಮಾವೇಶಗೊಂಡ ೧೮ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರಿಗೆ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ. ಇವರು ೧೯೭೫ ರಲ್ಲಿ ನಿಧನರಾದರು. 'ಗೌರವಿಸು ಜೀವನವ' ಪದ್ಯ ಭಾಗವನ್ನು ಡಿವಿಜಿ ಅವರ **'ಮಂಕುತಿಮ್ಮನ ಕಗ್ಗ'** ಕೃತಿಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

©KTBS Not to be republished

# ಅಭ್ಯಾಸ

## I. ಪದಗಳ ಅರ್ಥ ತಿಳಿಯಿರಿ :

**ಅನುಗ್ರಹ** – ಕೃಪೆ; ಆಶೀರ್ವಾದ; ದಯೆ.
**ಅಲ್ಪ** – ಕಡಿಮೆ
**ಆತ್ಮೋನ್ನತಿ** – ಅಧ್ಯಾತ್ಮ ಸಾಧನೆಯಿಂದ ಉನ್ನತಿಗೇರುವುದು.
**ಕೆಳೆ** – ಸ್ನೇಹ; ಗೆಳೆತನ.



ಎಲ್ಲಾ ಧರ್ಮಗಳೂ ಸತ್ಯದ ಸಾಕ್ಷಾತ್ಕಾರವನ್ನು ಒಳಗೊಂಡಿವೆ.

**ಕೂಟ** – ಸಂಗ; ಗುಂಪು.
**ಜೀವನ** – ಬದುಕು
**ತೃಣ** – ಹುಲ್ಲು; ಗರಿಕೆ.
**ನೂತ್ನ** – ನೂತನ; ಹೊಸ.
**ಬ್ರಹ್ಮಾನುಭವಿ** – ಅನುಭಾವದಿಂದ ಸಿದ್ಧಿ ಪಡೆದವರು.
**ಮೊಡಕು** – ಮೂಲೆ
**ವಿಸ್ತಾರ** – ಹರವು; ವಿಶಾಲತೆ.
**ಸತ್ತ್ವ** – ಸಾರ; ಬಲ; ಇರುವಿಕೆ.
**ಚೇತನ** – ಮನಸ್ಸು; ಶಕ್ತಿ; ಆತ್ಮ.
**ತಣಿ** – ತಂಪಾಗು; ತೃಪ್ತಿಹೊಂದು.
**ದಿನಪ** – ಸೂರ್ಯ; ರವಿ; ಆದಿತ್ಯ.
**ಪುಣ್ಯ** – ಭಾಗ್ಯ; ಅದೃಷ್ಟ.
**ಭೇದ** – ಒಡಕು; ಬಿರುಕು; ಭಿನ್ನತೆ.
**ಮೃತ್ಯು** – ಸಾವು; ಮರಣ.
**ಸಮೃದ್ಧಿ** – ಐಶ್ವರ್ಯ; ಪ್ರಗತಿ.

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಕಣ್ಣಿನ ಪುಣ್ಯ ಯಾವುದು?
೨. ಡಿವಿಜಿ ಅವರು ಮಾನವ ಹೇಗೆ ಬಾಳಬೇಕು ಎಂದಿದ್ದಾರೆ?
೩. ಡಿವಿಜಿ ಅವರು ಯಾವುದನ್ನು ಗೌರವಿಸಬೇಕು ಎಂದಿದ್ದಾರೆ?
೪. ಆತ್ಮೋನ್ನತಿಗೆ ದಾರಿ ಯಾವುದೆಂದು ಡಿವಿಜಿ ಹೇಳಿದ್ದಾರೆ?
೫. ಡಿವಿಜಿ ಅವರ ಪೂರ್ಣ ಹೆಸರೇನು?
೬. 'ಗೌರವಿಸು ಜೀವನವ' ಕಾವ್ಯ ಭಾಗದ ಮೂಲ ಕೃತಿ ಯಾವುದು?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ತೃಣದ ಹಸಿರಿಗೆ ಕಾರಣವಾದ ಅಂಶಗಳಾವುವು?
೨. ಡಿವಿಜಿ ಅವರು ಜೀವನ ಯಾವಾಗ ಸಮೃದ್ಧವಾಗುತ್ತದೆ ಎಂದಿದ್ದಾರೆ?
೩. ಬ್ರಹ್ಮಾನುಭವ ಪಡೆಯುವುದು ಹೇಗೆ?
೪. ಜೀವನ ಮತ್ತು ಚೇತನವನ್ನು ಏಕೆ ಗೌರವಿಸಬೇಕು?
೫. ಮೃತ್ಯು ಯಾವಾಗ ಅಲ್ಪವಾಗಿ ತೋರುತ್ತದೆ?

**ಇ) ಕೆಳಗಿನ ಪ್ರಶ್ನೆಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಗೌರವಿಸು ಜೀವನವ ಪದ್ಯಗಳಲ್ಲಿ ಅಂತರ್ಗತವಾಗಿರುವ ಕವಿಯ ಭಾವನೆಗಳನ್ನು ವಿವರಿಸಿ.

**ಈ) ಸಂದರ್ಭದೊಡನೆ ವಿವರಿಸಿರಿ.**

೧. ಗುಣಕೆ ಕಾರಣವೊಂದೆ
೨. ಆರದೋ ಜಗವೆಂದು ಭೇದವೆಣಿಸದಿರು
೩. ಬ್ರಹ್ಮಾನುಭವಿಯಾಗು
೪. ವಿಸ್ತಾರದಲಿ ಬಾಳು ವೈಶಾಲ್ಯದಿಂ ಬಾಳು



ಜನ್ಮತಃ ಯಾರೂ ಅಸ್ಪೃಶ್ಯರಾಗಿ ಹುಟ್ಟುವುದು ಶಕ್ಯವಿಲ್ಲ.

©KTBS Not to be republished

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳಲ್ಲಿ ಗುಂಪಿಗೆ ಸೇರದಿರುವ ಪದವನ್ನು ಆಯ್ದು ಬರೆಯಿರಿ.**

೧. ಸೂರ್ಯ, ಚಂದ್ರ, ಭಾಸ್ಕರ, ದಿನಪ.

೨. ಕಣ್ಣು, ನೇತ್ರ, ನಯನ, ತೃಣ.

೩. ಸಾವು, ಮೃತ್ಯು, ಹುಟ್ಟು, ನಿಧನ.

೪. ಗೆಳೆತನ, ಶತ್ರು, ಸ್ನೇಹ, ಕೆಳೆ.

**ಆ) ಕೆಳಗೆ ನೀಡಿರುವ 'ಅ' ಪಟ್ಟಿಯೊಂದಿಗೆ 'ಬ' ಪಟ್ಟಿಯನ್ನು ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| ೧) ಗೌರವಿಸು | ಅ) ಸಮೃದ್ಧಿ |
| ೨) ವಿಸ್ತಾರದಲಿ | ಬ) ಅನುಗ್ರಹ |
| ೩) ಮೂಲೆಗಳ | ಕ) ಬಾಳು |
| ೪) ಭಾಸ್ಕರನ | ಡ) ಜೀವನವ |
| | ಇ) ಸೇರದಿರು |

**ಇ) ಕೆಳಗೆ ನೀಡಿರುವ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ಚೇತನ, ಅನುಗ್ರಹ, ಗೌರವಿಸು, ಮೌನ, ಸಮೃದ್ಧಿ, ಗುಣ.

**ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.**

ಪುಣ್ಯ, ಗೌರವ, ವಿವೇಕ, ಸಮ, ಮೃತ್ಯು, ಭೇದ, ಚೇತನ.

**ಉ) ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ.**

ಹಸಿರೆಲ್ಲಿ, ಕಾರಣವೊಂದೇ, ಭೇದವೆಣಿಸು, ಆತ್ಮೋನ್ನತಿ, ಹೂದೋಟ, ಬ್ರಹ್ಮಾನುಭವಿ, ಭಾಸ್ಕರನನುಗ್ರಹ.

## IV. ಚಟುವಟಿಕೆಗಳು :

೧. ಗೌರವಿಸು ಜೀವನವ ಪದ್ಯದಲ್ಲಿನ ೧ ನೇ ಮತ್ತು ೩ ನೇ ಪದ್ಯಗಳನ್ನು ಕಂಠಪಾಠ ಮಾಡಿರಿ.

೨. ಡಿವಿಜಿ ಅವರ 'ಮಂಕುತಿಮ್ಮನ ಕಗ್ಗ' ಕೃತಿಯ ಗದ್ಯಾನುವಾದವನ್ನು ಸಂಗ್ರಹಿಸಿ ಓದಿರಿ.

೩. ಸಾರ್ಥಕ ಜೀವನ ನಡೆಸಿದವರ ಜೀವನ ಚರಿತ್ರೆಗಳನ್ನು ಓದಿರಿ ಹಾಗೂ ಅವರಂತೆ ಜೀವನ ನಡೆಸುವುದನ್ನು ಕಲಿಯಿರಿ.

©KTBS Not to be republished

ರಚನೆ:

# ಪತ್ರ ಲೇಖನ

ವಿದ್ಯಾರ್ಥಿಗಳೇ..... ನಾವು ನಿತ್ಯ ಜೀವನದಲ್ಲಿ ಅನೇಕ ಜನರೊಂದಿಗೆ ವಿವಿಧ ಕಾರಣಗಳಿಗಾಗಿ ಸಂಪರ್ಕವನ್ನು ಇಟ್ಟುಕೊಂಡಿರುತ್ತೇವೆ. ಜೊತೆಗೆ ಅನೇಕ ರೀತಿಯ ವ್ಯವಹಾರಗಳನ್ನೂ ಮಾಡುತ್ತೇವೆ. ಹೀಗಾಗಿ ಇಂದಿನ ಯುಗವನ್ನು ಸಂಪರ್ಕ ಯುಗವೆಂದೂ ಕರೆಯುತ್ತೇವೆ. ಹಿಂದಿನ ಕಾಲದಲ್ಲಿ ದೂರ ಇರುವವರೊಂದಿಗೆ ಪತ್ರಗಳ ಮೂಲಕ ಸಂಪರ್ಕವನ್ನು ಬೆಳೆಸುತ್ತಿದ್ದೆವು. ಆದರೆ, ಇಂದು ಆಧುನಿಕ ಮಾಧ್ಯಮಗಳಾದ ಮೊಬೈಲ್, ಇ–ಅಂಚೆ ಮೂಲಕ ದೂರದವರೊಂದಿಗೆ ಸಂಪರ್ಕವನ್ನು ಬೆಸೆಯುತ್ತೇವೆ. ಮಾಧ್ಯಮ ಯಾವುದಾದರೂ ಪತ್ರಗಳನ್ನು ಬರೆಯುವ ಕ್ರಮದಲ್ಲಿ ಅಂತಹ ಮಹತ್ವದ ಬದಲಾವಣೆಗಳು ಆಗಿಲ್ಲ. ಹೀಗಾಗಿ ಪತ್ರ ಬರೆಯುವ ಕ್ರಮಗಳನ್ನು ನಾವು ಅಗತ್ಯವಾಗಿ ತಿಳಿದುಕೊಳ್ಳಲೇ ಬೇಕು. ಪತ್ರಗಳು ಸಾಹಿತ್ಯಾತ್ಮಕ ಗುಣಗಳನ್ನು ಹೊಂದಿರುವುದರಿಂದ ಅವುಗಳನ್ನು 'ಸಂದೇಶ ಸಾಹಿತ್ಯ' ಎಂದೂ ಕರೆಯುತ್ತೇವೆ.

## ಪತ್ರದ ಅರ್ಥ :

ನಮ್ಮ ಭಾವನೆಗಳನ್ನು, ವಿಚಾರಗಳನ್ನು, ಅನುಭವಗಳನ್ನು, ಬೇಕು–ಬೇಡಗಳನ್ನು ಲಿಖಿತ ರೂಪದಲ್ಲಿ ಮತ್ತೊಬ್ಬರಿಗೆ ತಿಳಿಸುವ ವ್ಯಾವಹಾರಿಕ ಮಾಧ್ಯಮವೇ ಪತ್ರಲೇಖನ.

©KTBS Not to be republished

## ಉತ್ತಮ ಪತ್ರದ ಸ್ವರೂಪ ಹಾಗೂ ಲಕ್ಷಣಗಳು :

ಪತ್ರ ಬರೆಯುವುದು ಒಂದು ಕಲೆ. ಪತ್ರಗಳು ಬಹು ಕಾಲ ಉಳಿಯುವ ದಾಖಲೆಗಳು ಅಷ್ಟೇ ಅಲ್ಲ, ಪತ್ರಗಳು ನಮ್ಮ ವ್ಯಕ್ತಿತ್ವದ ಪ್ರತಿಬಿಂಬಗಳು ಎಂಬುದನ್ನು ನೆನಪಿನಲ್ಲಿಡಬೇಕು. ಯಾವುದೇ ಬಗೆಯ ಪತ್ರವಾಗಿರಲಿ ಕೆಲವು ಸಾಮಾನ್ಯ ನಿಯಮಗಳನ್ನು ಒಳಗೊಂಡಿರುತ್ತವೆ. ಹೀಗಾಗಿ ನಮಗೆ ಉತ್ತಮ ಪತ್ರದ ಸ್ವರೂಪ ಹಾಗೂ ಲಕ್ಷಣಗಳು ತಿಳಿದಿರಬೇಕು.

೧. ಪತ್ರಗಳು ಲಿಖಿತ ರೂಪದಲ್ಲಿರುತ್ತವೆ.
೨. ಪತ್ರ ವ್ಯವಹಾರವು ಇಬ್ಬರು ವ್ಯಕ್ತಿ ಅಥವಾ ಎರಡು ಸಂಘ ಸಂಸ್ಥೆಗಳ ನಡುವೆ ನಡೆಯುತ್ತದೆ.
೩. **ಪತ್ರದ ಭಾಷೆ** – ಸರಳವಾಗಿರಬೇಕು, ಸ್ಪಷ್ಟವಾಗಿರಬೇಕು, ನೇರವಾಗಿರಬೇಕು, ಬರವಣಿಗೆ ಅಂದವಾಗಿರಬೇಕು ಹಾಗೂ ಕಾಗುಣಿತ ದೋಷಗಳಿಂದ ಮುಕ್ತವಾಗಿರಬೇಕು.
೪. **ಪತ್ರದ ವಿಷಯ ಮತ್ತು ಶೈಲಿ** – ಪತ್ರದ ವಿಚಾರಗಳು ಅರ್ಥಪೂರ್ಣವೂ ನೇರವೂ ಸಂಕ್ಷಿಪ್ತವೂ ಆಗಿರಬೇಕು, ಶೈಲಿ ಆಕರ್ಷಕವಾಗಿರಬೇಕು ಹಾಗೂ ಕ್ರಮಬದ್ಧವಾಗಿರಬೇಕು.

೫. **ಪತ್ರದ ಆರಂಭ ಮತ್ತು ಮುಕ್ತಾಯದ ಒಕ್ಕಣೆ** – ಪತ್ರವನ್ನು ಯಾರಿಗೆ ಬರೆಯುತ್ತಿದ್ದೇವೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಪತ್ರದ ಆರಂಭ ಮತ್ತು ಕೊನೆಯಲ್ಲಿ ಸೂಕ್ತವಾದ ಸಂಬೋಧನೆಗಳನ್ನು ಬಳಸಬೇಕು. ಸಂಬೋಧನೆ ಸರಿ ಇಲ್ಲದಿದ್ದರೆ ಓದುಗರಿಗೆ ಕಿರಿಕಿರಿ ಉಂಟಾಗುತ್ತದೆ.

೬. **ವಿಳಾಸ** – ಪತ್ರ ಯಾರಿಂದ, ಯಾರಿಗೆ ಬರೆಯಲಾಗಿದೆ ಎಂಬುದನ್ನು ಸ್ಪಷ್ಟವಾಗಿ ನಿಗದಿತ ಜಾಗದಲ್ಲಿ ಪೂರ್ಣ ವಿಳಾಸದೊಂದಿಗೆ ಬರೆಯಬೇಕು. ಇಲ್ಲದಿದ್ದರೆ ಪತ್ರ ತಲುಪದೆ ಕಳೆದುಹೋಗುವ ಸಾಧ್ಯತೆಗಳಿರುತ್ತವೆ.

೭. ಪತ್ರಗಳಲ್ಲಿ ದಿನಾಂಕ ಮತ್ತು ಪತ್ರ ಬರೆದವರ ಸಹಿ ಇರಬೇಕು. ಸಹಿ ಇರದ ಪತ್ರಗಳಿಗೆ ಬೆಲೆ ಇರುವುದಿಲ್ಲ.

## ಪತ್ರದ ವಿಧಗಳು :

ನಾವು ನಮ್ಮ ಜೀವನದಲ್ಲಿ ಹಲವರಿಗೆ ಪತ್ರವನ್ನು ಬರೆಯುತ್ತೇವೆ. ತಂದೆ ತಾಯಿಯರಿಗೆ, ಅಕ್ಕ ತಂಗಿಯರಿಗೆ, ಅಣ್ಣ ತಮ್ಮಂದಿರಿಗೆ, ಬಂಧು ಮಿತ್ರರಿಗೆ, ಸಾರ್ವಜನಿಕ ಸಂಸ್ಥೆಗಳಿಗೆ ಪತ್ರಗಳನ್ನು ಒಂದಲ್ಲಾ ಒಂದು ಕಾರಣಕ್ಕೆ ಬರೆಯುತ್ತಿರುತ್ತೇವೆ. ಪತ್ರಗಳನ್ನು ಯಾರಿಗೆ ಬರೆಯುತ್ತಿದ್ದೇವೆ ಎಂಬುದನ್ನು ಆಧರಿಸಿ ಪತ್ರಗಳನ್ನು ಮುಖ್ಯವಾಗಿ ೨ ವಿಧಗಳಾಗಿ ವಿಂಗಡಿಸಲಾಗುತ್ತದೆ.

೧. ಖಾಸಗಿ ಪತ್ರಗಳು
೨. ವ್ಯಾವಹಾರಿಕ ಪತ್ರಗಳು

©KTBS Not to be republished

### ೧. ಖಾಸಗಿ ಪತ್ರಗಳು/ ವೈಯಕ್ತಿಕ ಪತ್ರಗಳು / ಅನೌಪಚಾರಿಕ ಪತ್ರಗಳು :

ನಾವು ನಮ್ಮ ನೋವು ನಲಿವು, ಸುಖ ಸಂತೋಷ, ಆರೋಗ್ಯ, ಉದ್ಯೋಗ, ವ್ಯಾಸಂಗ ಇತ್ಯಾದಿ ವಿಚಾರಗಳನ್ನು ಆಪ್ತರೊಂದಿಗೆ ಅಂದರೆ, ತಂದೆತಾಯಿ, ಅಕ್ಕತಂಗಿ, ಅಣ್ಣತಮ್ಮ, ಅತ್ತೆಮಾವ, ಗಂಡಹೆಂಡತಿ, ಅತ್ತೆಸೊಸೆ, ಮಾವ ಅಳಿಯ, ಗುರುಶಿಷ್ಯ, ಬಂಧು ಮಿತ್ರರು ಹೀಗೆ ಹಲವರೊಂದಿಗೆ ಹಂಚಿಕೊಳ್ಳುತ್ತೇವೆ. ಖಾಸಗಿ ಪತ್ರಗಳು ಪರಸ್ಪರ ಯೋಗಕ್ಷೇಮ ವಿಚಾರಣೆ, ಮಳೆಬೆಳೆ, ಸಾಂಸಾರಿಕ ಸಂಗತಿಗಳನ್ನು ಒಳಗೊಂಡಿರುತ್ತವೆ. ಇಂತಹ ಪತ್ರಗಳಲ್ಲಿ ಔಪಚಾರಿಕ ಅಂಶಗಳು ಕಡಿಮೆ ಇರುತ್ತವೆ. ಹೀಗಾಗಿ ಬಂಧು ಮಿತ್ರರೊಂದಿಗೆ ವೈಯಕ್ತಿಕ ವಿಚಾರಗಳನ್ನು ಪರಸ್ಪರ ಹಂಚಿಕೊಳ್ಳುವ ಸಲುವಾಗಿ ಬರೆಯುವ ಪತ್ರಗಳನ್ನು ಖಾಸಗಿ ಪತ್ರಗಳು ಎನ್ನುತ್ತೇವೆ.

ಖಾಸಗಿ ಪತ್ರಗಳನ್ನು ಬಿಳಿ ಹಾಳೆಯಲ್ಲಿ ಬರೆದು ಒಂದು ಕವರಿನಲ್ಲಿ ಹಾಕಿ ಕಳುಹಿಸಬೇಕು. ಇಲ್ಲವೇ ಅಂತರ್ದೇಶೀಯ ಪತ್ರಗಳನ್ನು ಬಳಸಬಹುದು. ತೀರಾ ಖಾಸಗಿ ಅಲ್ಲದ, ಸಂಕ್ಷಿಪ್ತ ವಿಚಾರಗಳಿದ್ದರೆ ಅಂಚೆ ಕಾರ್ಡ್ ಬಳಸಿ ಬರೆಯಬಹುದು.

**೨. ವ್ಯಾವಹಾರಿಕ ಪತ್ರಗಳು / ಮನವಿ ಪತ್ರಗಳು / ಔಪಚಾರಿಕ ಪತ್ರಗಳು :**

ಸಾರ್ವಜನಿಕ ಸಂಸ್ಥೆಗಳಾದ ಶಾಲೆ, ಆಸ್ಪತ್ರೆ, ನಗರಸಭೆ, ಬ್ಯಾಂಕ್, ಸರ್ಕಾರಿ ಕಛೇರಿಗಳು, ಸಂಘ ಸಂಸ್ಥೆಗಳು ಇತ್ಯಾದಿಗಳೊಂದಿಗೆ ಪತ್ರ ವ್ಯವಹಾರಗಳನ್ನು ಮಾಡುತ್ತಿರುತ್ತೇವೆ. ಇಲ್ಲಿಯ ಅಧಿಕಾರಿಗಳು ನಿಯಮಾನುಸಾರ ಕೆಲಸಗಳನ್ನು ನಿರ್ವಹಿಸುತ್ತಾರೆ. ಸಾರ್ವಜನಿಕರು ಪತ್ರಗಳ ಮೂಲಕ ತಮಗೆ ಬೇಕಾದ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಾರೆ.

ಸಾರ್ವಜನಿಕ ಸಂಸ್ಥೆ ಅಥವಾ ಇಲಾಖೆಗಳ ಆಗು ಹೋಗುಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ನಿಯಮಗಳನ್ನು ಅನುಸರಿಸಿ ಬರೆಯಲ್ಪಡುವ ಪತ್ರಗಳನ್ನು ವ್ಯಾವಹಾರಿಕ ಪತ್ರಗಳು ಎನ್ನುತ್ತೇವೆ. ಈ ಕೆಳಗೆ ನೀಡಿರುವ ವ್ಯಾವಹಾರಿಕ ಪತ್ರವನ್ನು ಗಮನಿಸಿ.

ಇವರಿಂದ, ದಿನಾಂಕ ೨೦-೦೭-೨೦೨೨

**ಚಿನ್ಮಯ್ ಜಿ.ಎಂ.**
೮ ನೇ ತರಗತಿ, 'ಎ' ವಿಭಾಗ,
ಜವಾಹರ ನವೋದಯ ಶಾಲೆ
ಧಾರವಾಡ.

ಇವರಿಗೆ,
**ತರಗತಿ ಅಧ್ಯಾಪಕರು**
ಜವಾಹರ ನವೋದಯ ಶಾಲೆ
ಧಾರವಾಡ.

©KTBS Not to be republished

ಮಾನ್ಯರೆ,

**ವಿಷಯ** : ಎರಡು ದಿನ ರಜೆ ನೀಡುವಂತೆ ಕೋರಿ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ನನ್ನ ಅಕ್ಕನ ಮದುವೆಯು ದಿನಾಂಕ ೨೨-೦೭-೨೦೨೨ ಹಾಗೂ ೨೩-೦೭-೨೦೨೨ ರಂದು ಬೆಳಗಾವಿಯಲ್ಲಿ ನೆರವೇರುತ್ತಿದೆ. ಈ ಸಂಭ್ರಮದಲ್ಲಿ ನಾನೂ ಅಗತ್ಯವಾಗಿ ಪಾಲ್ಗೊಳ್ಳಬೇಕಾಗಿದೆ. ಆದುದರಿಂದ ದಯವಿಟ್ಟು ಮೇಲ್ಕಾಣಿಸಿದ ಎರಡು ದಿನಗಳಿಗೆ ರಜೆಯನ್ನು ನೀಡಬೇಕೆಂದು ವಿನಂತಿಸುತ್ತೇನೆ.

ನಮಸ್ಕಾರಗಳೊಂದಿಗೆ,

ತಮ್ಮ ವಿಧೇಯ ವಿದ್ಯಾರ್ಥಿ
ಸಹಿ
(ಚಿನ್ಮಯ್ ಜಿ.ಎಂ.)

# ಪ್ರಬಂಧ ರಚನೆ

ಪ್ರಬಂಧವು ಗದ್ಯ ಸಾಹಿತ್ಯದ ಒಂದು ಪ್ರಕಾರವಾಗಿದೆ. ಪ್ರಬಂಧಗಳನ್ನು ಓದುವುದರಿಂದ ಹಾಗೂ ಬರೆಯುವುದರಿಂದ ವಿಷಯ ಮತ್ತು ಭಾಷೆಗಳೆರಡರ ಜ್ಞಾನ ಏಕಕಾಲದಲ್ಲಿ ಲಭಿಸುತ್ತದೆ. ಪ್ರಬಂಧ ಸಾಹಿತ್ಯವು ಸರಳವೂ ಉಪಯುಕ್ತವೂ ಆಗಿದ್ದು, ಸಮಕಾಲೀನ ಜಗತ್ತನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ.

**ಪ್ರಬಂಧದ ಅರ್ಥ :**

ಪ್ರಬಂಧವು ತರ್ಕಬದ್ಧ ವಾಕ್ಯ ಹಾಗೂ ವಿಚಾರಗಳಿಂದ ಸುಸಂಬದ್ಧವಾಗಿ ಬರೆಯಲ್ಪಟ್ಟ ಬಂಧವೇ ಪ್ರಬಂಧ. ಅಂದರೆ ವಿಚಾರಗಳನ್ನು ಕ್ರಮಬದ್ಧವಾಗಿ ಅರ್ಥಪೂರ್ಣವಾಗಿ ಬರೆಯುವುದನ್ನು ಪ್ರಬಂಧ ಎನ್ನುತ್ತೇವೆ. ಒಂದು ನಿರ್ದಿಷ್ಟ ವಿಷಯವನ್ನು ಕುರಿತು ಮಾಹಿತಿಯನ್ನು ಸಂಗ್ರಹಿಸಿ ತನ್ನ ಅನುಭವ ಕಲ್ಪನೆ ಹಾಗು ವಿಚಾರಗಳನ್ನು ಬೆರೆಸಿ ಸುಸಂಬದ್ಧ ರೀತಿಯ ಪ್ರೌಢ ಬರೆವಣಿಗೆಯನ್ನು ಪ್ರಬಂಧ ಎನ್ನಬಹುದು.

**ಪ್ರಬಂಧ ರಚನೆಯ ಹಂತಗಳು :**

**೧. ವಿಷಯದ ಆಯ್ಕೆ :**

ಪ್ರಬಂಧ ರಚಿಸಲು ಒಂದು ವಸ್ತು ವಿಷಯ ಇರಲೇ ಬೇಕು. ನಮ್ಮ ಆಸಕ್ತಿ ಹಾಗು ಅನುಭವಗಳಿಗೆ ನಿಲುಕುವ ವಸ್ತು ವಿಚಾರಗಳನ್ನು ಆಯ್ಕೆಮಾಡಿಕೊಂಡು ಪ್ರಬಂಧವನ್ನು ಬರೆಯಲು ಮುಂದಾಗಬೇಕು. ಪ್ರಬಂಧಕ್ಕೆ ವಿಷಯ ಇಂತಹದ್ದೇ ಇರಬೇಕು ಎಂದೇನಿಲ್ಲ. ವ್ಯಕ್ತಿ, ವಸ್ತು, ಪ್ರಾಣಿ, ಪಕ್ಷಿ, ನೆಲ, ಜಲ, ಭಾವನೆಗಳು, ಮೌಲ್ಯಗಳು, ಪ್ರಚಲಿತ ಘಟನೆಗಳು, ಸಮಸ್ಯೆಗಳು, ಇತಿಹಾಸ, ವಿಜ್ಞಾನ, ಸಮಾಜ ಯಾವುದಾದರೂ ಆಗಿರಬಹುದು.

**೨. ಮಾಹಿತಿಯ ಸಂಗ್ರಹಣೆ :**

ಪ್ರಬಂಧ ಬರೆಯಲು ವಿಷಯ ಆಯ್ಕೆ ಮಾಡಿಕೊಂಡನಂತರ ವಿಷಯಕ್ಕೆ ಪೂರಕವಾದ ಮಾಹಿತಿಗಳನ್ನು ಪುಸ್ತಕಗಳು, ಪತ್ರಿಕೆಗಳು, ಅಂತರ್ಜಾಲ, ಸಂದರ್ಶನ ಇಲ್ಲವೆ ಖುದ್ದು ಸ್ಥಳಗಳಿಗೆ ಭೇಟಿ ನೀಡಿ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಬೇಕು. ಇದರಿಂದ ನಮ್ಮ ವಿಚಾರಗಳಿಗೆ ಇನ್ನೂ ಹೆಚ್ಚಿನ ಪುಷ್ಟಿ ಸಿಕ್ಕಂತಾಗುತ್ತದೆ.

©KTBS Not to be republished

**೩. ವಿಷಯವನ್ನು ಕ್ರಮ ಬದ್ಧವಾಗಿ ಜೋಡಿಸುವುದು :**

ಸಂಗ್ರಹಿಸಿದ ಮಾಹಿತಿಯನ್ನು ಕ್ರಮಬದ್ಧವಾಗಿ ಜೋಡಿಸಿಕೊಳ್ಳಬೇಕು. ಅಂದರೆ ದೊರೆತ ಅಂಕಿ ಅಂಶಗಳ ನಡುವೆ ಸಂಬಂಧವಿರುವಂತೆ ನೋಡಿಕೊಳ್ಳಬೇಕು.

**೪. ನಿರ್ದಿಷ್ಟ ಚೌಕಟ್ಟಿನಲ್ಲಿ ವಿಷಯದ ಮಂಡನೆ :**

ಪ್ರಬಂಧವನ್ನು ಮಾಹಿತಿಗಳು ಲಭ್ಯವಾದ ನಂತರ ನಮ್ಮದೇ ಆದ ಶೈಲಿಯಲ್ಲಿ ವಿಚಾರಗಳನ್ನು ನಿರೂಪಿಸಬೇಕು. ಭಾಷೆ ಮತ್ತು ವಿಷಯಗಳ ಸಮಾಗಮ ಆಗಬೇಕು. ಬರೆಯುವ ಸಂದರ್ಭದಲ್ಲಿ ಗಾದೆ ಮಾತುಗಳನ್ನು, ನುಡಿಗಟ್ಟುಗಳನ್ನು, ಹೇಳಿಕೆಗಳನ್ನು ಹಾಗು ಚಿಕ್ಕ ಕಥೆ ಹಾಗು ಘಟನೆಗಳನ್ನು ಸಂದರ್ಭಾನುಸಾರ ಬಳಸಿಕೊಳ್ಳಬೇಕು. ಇಡೀ ಪ್ರಬಂಧ ತಮ್ಮ ಸ್ವಂತ ವಿಚಾರಾನುಭವಗಳನ್ನೆ ಒಳಗೊಂಡಿರಬೇಕು. ಯಾರೋ ಬರೆದ ಪ್ರಬಂಧವನ್ನು ಕಂಠಪಾಠಮಾಡಿ ಬರೆಯುವುದು ಪ್ರಬಂಧ ಅನ್ನಿಸುವುದಿಲ್ಲ. ಪರೀಕ್ಷೆಗೂ ಮುನ್ನ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಿ ಪರೀಕ್ಷೆಯಲ್ಲಿ ಬರೆಯುವ ಸಿದ್ಧತೆ ನಡೆಸಿರಬೇಕು. ಪ್ರಬಂಧ ಬರೆಯುವಾಗ ಆರಂಭ, ವಿಷಯ ಬೆಳವಣಿಗೆ ಹಾಗೂ ಮುಕ್ತಾಯಗಳು ಇರಬೇಕು.

©KTBS Not to be republished

**೫. ಪರಿಶೀಲನೆ :**

ಪ್ರಬಂಧವನ್ನು ಬರೆದ ನಂತರ ಮತ್ತೊಮ್ಮೆ ಅದನ್ನು ಪರಿಶೀಲಿಸಬೇಕು. ಭಾಷೆ ಹಾಗು ವಿಷಯದ ದೋಷಗಳು ಇದ್ದಲ್ಲಿ ಸರಿಪಡಿಸಿ ಬರೆಯಬೇಕು. ಪರಿಶೀಲನೆಯನ್ನು ನಮ್ಮ ಗೆಳೆಯರು ಹಾಗು ನಮಗಿಂತ ಹೆಚ್ಚು ಬಲ್ಲವರಿಂದ ಮಾಡಿಸಬೇಕು. ಇದರಿಂದ ಪ್ರಬಂಧವು ಇನ್ನೂ ಹೆಚ್ಚು ಉತ್ತಮವಾಗಿ ಮೂಡಿಬರುತ್ತದೆ.

**೬. ಪ್ರಕಟಣೆ :**

ಪ್ರಬಂಧವನ್ನು ರಚಿಸಿದ ನಂತರ ಅದನ್ನು ನಿಮ್ಮ ಶಾಲಾ ಭಿತ್ತಿ ಪತ್ರ, ಶಾಲಾ ಸಂಚಿಕೆ ಇಲ್ಲವೆ ಸ್ಥಳೀಯ ಪತ್ರಿಕೆಗಳಿಗೆ ಪ್ರಕಟಿಸಲು ಸಂಬಂಧಿಸಿದವರಿಗೆ ನೀಡಿ ಮನವಿ ಮಾಡಿಕೊಳ್ಳಬೇಕು. ಇದರಿಂದ ನಿಮ್ಮ ವಿಚಾರಗಳು ಇತರರಿಗೆ ತಿಳಿಯುವುದಲ್ಲದೆ ನಿಮ್ಮ ಗೌರವವೂ ಹೆಚ್ಚಾಗುತ್ತದೆ.

ಸಾಮಾನ್ಯವಾಗಿ ಪರೀಕ್ಷೆಯಲ್ಲಿ ಎರಡು ಮೂರು ವಿಷಯಗಳನ್ನು ನೀಡಿ ಯಾವುದಾದರೊಂದು ವಿಷಯದ ಮೇಲೆ ಪ್ರಬಂಧ ಬರೆಯಲು ಸೂಚಿಸಲಾಗಿರುತ್ತದೆ. ನೀವು ನಿಮ್ಮ ಅನುಭವದ ನೆಲೆಯಲ್ಲಿ ಬರೆಯಬಹುದಾದ ವಿಷಯವೊಂದನ್ನು ಆಯ್ಕೆಮಾಡಿಕೊಂಡು ನಿಮ್ಮ ವಿಚಾರಗಳನ್ನು ಸುಸಂಬದ್ಧವಾಗಿ, ಅರ್ಥಪೂರ್ಣವಾಗಿ ತಪ್ಪಿಲ್ಲದಂತೆ ಬರೆಯಬೇಕು.

**ಮೇಲಿನ ಹಂತಗಳನ್ನು ಅನುಸರಿಸಿ ಈ ಕೆಳಗಿನ ವಿಷಯಗಳ ಮೇಲೆ ಪ್ರಬಂಧಗಳನ್ನು ಬರೆಯಿರಿ.**

೧. ಹವ್ಯಾಸಗಳು

೨. ಕ್ರೀಡೆಗಳು

೩. ರಾಷ್ಟ್ರೀಯ ಹಬ್ಬಗಳು

೪. ಪರಿಸರ ಮಾಲಿನ್ಯ

೫. ಪುಸ್ತಕಗಳು

೬. ಜನಸಂಖ್ಯೆ

೭. ಗ್ರಾಮೀಣ ಬದುಕು

೮. ಸ್ತ್ರೀ ಶಿಕ್ಷಣ

©KTBS Not to be republished

# ಗಾದೆಗಳ ವಿಸ್ತರಣೆ

'ಗಾದೆ' ಎನ್ನುವುದು ಹೇಳಿಕೆಯ ರೂಪದಲ್ಲಿ ಬಳಕೆಯಾಗುವ ಮಾತು. ಅದು ಹಲವರ ಅನುಭವಗಳ ಮಾತು, ಲೋಕೋಕ್ತಿ, ಜಾಣ ನುಡಿ ಎಂದು ಹೇಳಬಹುದು. ಗಾದೆಯ ಮಾತಿನಲ್ಲಿ ತಿಳಿವಳಿಕೆಯಿದೆ, ನೀತಿ ಇದೆ, ನಗೆಚಾಟಿಕೆಯಿದೆ, ಒಳಿತು ಕೆಡುಕುಗಳ ಸೂಕ್ಷ್ಮತೆಗಳಿವೆ. ಹೀಗಾಗಿಯೇ ವೇದ ಸುಳ್ಳಾದರೆ ಗಾದೆ ಸುಳ್ಳಾಗದು ಎಂಬ ಮಾತಿದೆ.

ಗಾದೆಗಳು ಜೀವನದ ಸತ್ಯವನ್ನು ಎತ್ತಿ ಹಿಡಿಯುತ್ತವೆ. ಜ್ಞಾನ ಭಂಡಾರದಲ್ಲಿ ಅವುಗಳ ಪಾತ್ರ ಬಹು ದೊಡ್ಡದು. ಗಾದೆಗಳಿಗೆ ಕಾಲ ದೇಶಗಳ ಮಿತಿಯಿಲ್ಲ. ಅವು ಎಲ್ಲಾ ಕಾಲ ದೇಶಗಳಿಗೂ ಅನ್ವಯವಾಗುವ ಸತ್ಯಗಳು. ನಾವು ಮಾತನಾಡುವಾಗ ಇಲ್ಲವೆ ಬರೆಯುವಾಗ ಗಾದೆಗಳನ್ನು ಸಂದರ್ಭಾನುಸಾರ ಬಳಸುವುದನ್ನು ಕಲಿಯಬೇಕು. ಏಕೆಂದರೆ ಸಾವಿರ ಪದಗಳಲ್ಲಿ ಹೇಳಬಹುದಾದ ವಿಚಾರಗಳನ್ನು ಒಂದು ಗಾದೆ ಹೇಳುತ್ತದೆ. ಹೀಗಾಗಿ ಗಾದೆಗಳು ಕನ್ನಡ ಸಾಹಿತ್ಯದ ಅತ್ಯಮೂಲ್ಯ ಆಸ್ತಿ ಎನ್ನಬಹುದು. ಈ ಸಂಪತ್ತನ್ನು ಉಳಿಸಿಕೊಂಡು ಬೆಳೆಸಿಕೊಂಡು ನಾವು ಹೋಗಬೇಕಾಗಿದೆ.

ಗಾದೆಮಾತುಗಳಲ್ಲಿ ಅಂತರ್ಗತವಾಗಿರುವ ವಿಚಾರಗಳನ್ನು ಸರಳ ಶೈಲಿಯಲ್ಲಿ ಬಿಡಿಸಿ ಹೇಳುವುದು ಒಂದು ಕಲೆ. ಇದನ್ನು ಗಾದೆಗಳ ವಿಸ್ತರಣೆ ಎಂದು ಕರೆಯಲಾಗುತ್ತದೆ. ಗಾದೆಗಳನ್ನು ವಿಸ್ತರಣೆ ಮಾಡುವುದರಿಂದ ನಮ್ಮ ಭಾಷೆ, ಚಿಂತನೆ ಹಾಗು ಅನುಭವಗಳು ಶ್ರೀಮಂತವಾಗುತ್ತವೆ.

©KTBS Not to be republished

## ಗಾದೆಗಳ ವಿಸ್ತರಣೆಯಲ್ಲಿ ಗಮನಿಸಬೇಕಾದ ಅಂಶಗಳು :

೧. ಗಾದೆಯ ಹೊರ ಅರ್ಥವನ್ನು ಮೊದಲು ವಿವರಿಸಬೇಕು.
೨. ಗಾದೆಯ ಅಂತರಾರ್ಥ ಯಾವ ವಿಚಾರಗಳಿಗೆ ಸಂಬಂಧಿಸಿದೆ ಎಂಬುದನ್ನು ವಿವರಿಸಬೇಕು.
೩. ಗಾದೆಯು ಒಳಗೊಂಡಿರುವ ಸತ್ಯ ಹಾಗೂ ಮೌಲ್ಯಗಳನ್ನು ಸ್ಪಷ್ಟಪಡಿಸಬೇಕು.
೪. ಗಾದೆಯ ವಿಚಾರಗಳಿಗೆ ಪೂರಕವಾಗುವ ಕಥೆ ಇಲ್ಲವೆ ಘಟನೆಗಳನ್ನು ಉದಾಹರಿಸಬೇಕು.
೫. ಗಾದೆಗಳನ್ನು ವಿಸ್ತರಿಸುವಾಗ ಅದೇ ಅರ್ಥ ನೀಡುವ ಇನ್ನಿತರ ಗಾದೆಗಳನ್ನು ಹೆಸರಿಸಬೇಕು
೬. ಗಾದೆಯ ಮೂಲಕ ನಾವು ಕಲಿಯಬೇಕಾದ ಅಥವಾ ತಿಳಿದುಕೊಳ್ಳಬೇಕಾದ ನೀತಿಯನ್ನು ಕೊನೆಯಲ್ಲಿ ಸ್ಪಷ್ಟಪಡಿಸಬೇಕು.

**ಈ ಕೆಳಗಿನ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ.**

೧. ಮಾತು ಬೆಳ್ಳಿ ಮೌನ ಬಂಗಾರ.

೨. ಕೈ ಕೆಸರಾದರೆ ಬಾಯಿ ಮೊಸರು.

೩. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.

೪. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ.

೫. ಹಾಸಿಗೆ ಇದ್ದಷ್ಟು ಕಾಲು ಚಾಚು.

೬. ಅತಿ ಆಸೆ ಗತಿಗೇಡು.

೭. ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ.

೮. ಊಟಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳ ಇಲ್ಲ.

೯. ದೇಶ ಸುತ್ತಿ ನೋಡು ಕೋಶ ಓದಿನೋಡು.

೧೦. ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ.

©KTBS Not to be republished